# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೪೯ – ಆಗಸ್ಟ್, ೨೦೨೪




KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ

ಅಧ್ಯಕ್ಷರ ಅಪೂರ್ವ ಅಂಕಣ........೪

ಮಧುರ ಸಂವಹನ........೧೦

ಹಿನ್ನೋಟ........೧೧

ಬರಹಗಳು........೨೦

ಕಥೆಗಳು........೨೫

ಕ್ರೀಡೆ - ಕ್ರಿಕೆಟ್ ಸುದ್ದಿ ........೩೨

ಕವನಗಳು........೩೯

ಚಿಣ್ಣರ ಮುತ್ತುಗಳು........೪೫

ಕ್ಯಾಮೆರಾ ಕಣ್ಣು........೫೧

# ಸಂಪಾದಕೀಯ

ಕ್ರೀಡಾ ಸಾಧನೆಗಳು

ಬೃಂದಾವನ ವಾಣಿಯ ಓದುಗರಿಗೆ ನಮಸ್ಕಾರಗಳು

ಮೂರು ತಿಂಗಳ ಸಮಯದಲ್ಲಿ ಹಲವಾರು ಕನ್ನಡ ಕಾರ್ಯಕ್ರಮಗಳು  ಬೃಂದಾವನದಡಿಯಲ್ಲಿ ನಡೆಯಿತು.

ಬೃಂದಾವನ ಪಿಕ್ನಿಕ್ ಅಂತೂ ಮತ್ತೊಮ್ಮೆ ಎಲ್ಲರನ್ನು  ಹಲವಾರು ಕ್ರೀಡೆಗಳಲ್ಲಿ ಒಗ್ಗೂಡಿಸಿತು. ಊಟ , ಆಟ , ಓಟ ಮತ್ತು ನೋಟ ಎಲ್ಲದರ ಸಮ್ಮೇಳನ್ನ ಪಿಕ್ನಿಕ್ ನಲ್ಲಿ ಆದರೆ , ನಾಗಾಭರಣ ಅವರೊಡನೆ ಸಮಾಲೋಚನೆ.

ಓದುಗರ ಚಾವಡಿಯಲ್ಲಿ ಕುವೆಂಪು ಅವರ "ಮಲೆಗಳಲ್ಲಿ ಮದುಮಗಳು ", ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ ಮಹೇಶ್ ಜೋಶಿ ಅವರೊಂದಿಗೆ ಸಂವಾದ ಹಾಗು mercer county campground ನಲ್ಲಿ ನಡೆದ  ಬೃಂದಾವನ ಮೊದಲ ಕ್ಯಾಂಪ್ ಎಲ್ಲವು ಸಹ ಹೊಸ ಅನುಭವ ತಂದಿತ್ತು.

ಅಮೇರಿಕ ದೇಶದಲ್ಲಿನ ಚುನಾವಣೆ  ಹಲವಾರು ತಿರುವುಗಳೊಂದಿಗೆ ಮತ್ತೊಮ್ಮೆ ರೋಚಕ ಘಟ್ಟ ಮುಟ್ಟಿದೆ. ಅಮೇರಿಕಾದ ಅಧ್ಯಕ್ಷರಾದ ಜೋ ಬೈಡೆನ್ ಅವರ ಮೊದಲ debate ನಲ್ಲಿ ತಮ್ಮ ಇಳು ವಯಸ್ಸಿನ್ನ ಅರಿವು ಅಮೇರಿಕಾ ಜನತೆಗೆ ಗೋಚರವಾದಾಗ , ಅವರ ಮುಂದಿನ ಚುನಾವಣೆಯಾ ಆಶಾ ಭಗ್ನವಾಯಿತು.

ದಿನ ನಿತ್ಯವು ಡೆಮಾಕ್ರೆಟಿಕ್ ಪಾರ್ಟಿಯಾ ಎಲ್ಲ ಪ್ರಮುಖರ ಒತ್ತಾಯದೊಂದಿಗೆ ಅವರು ಜೂಲೈ 21 ರಂದು ತಮ್ಮ ಮುಂದಿನ ಚುನಾವಣೆಯ ಸ್ಪರ್ಧೆಯಿಂದ ಹಿಂದೆ ಸರಿದರು. ಭಾರತ ಹಾಗು ಜಮೈಕ ಮೂಲದ ಇಂದಿನ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ನೇರ ಹಣಾಹಣಿಗೆ  ಇಳಿದರು. ಕೇವಲ 48 ಘಂಟೆಗಳಲ್ಲಿ ಅವರಿಗೆ ಬೇಕಾದ ಡೆಮಾಕ್ರೆಟಿಕ್ ಪಾರ್ಟಿಯ ಮತಗಳು ದೊರಕಿದೆವು. ಈ ಹೊಸ ಜೋಡಿ ,ಚುನಾವಣೆಯಲ್ಲಿ ಹೊಸ ಶಕ್ತಿಯನ್ನು ತರುವಲ್ಲಿ ಯಶಸ್ವಿಯಾಗಿದೆ ಅಂದರೆ ತಪ್ಪಾಗಲಾರದು . ಇದು ಚುನಾವಣೆಯವರೆಗೂ ಮುಂದುವರೆಯುವುದೇ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ ?

ರಿಪಬ್ಲಿಕನ್ ಪಾರ್ಟಿಯ  ಡೊನಾಲ್ಡ್ ಟ್ರಂಪ್ , JD ವಾನ್ಸ್ ಅವರನ್ನು ತಮ್ಮ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಮಾಡಿದರು. ರಿಪಬ್ಲಿಕನ್ ಪಾರ್ಟಿ convention ನಲ್ಲಿ ಇಬ್ಬರು ತಮ್ಮ ಪಾರ್ಟಿಯಾ ಅಧ್ಯಕ್ಷ ಹಾಗು ಉಪಾಧ್ಯಕ್ಷ ಸ್ಥಾನಕ್ಕೆ ಒಪ್ಪಿಗೆ ಸೂಚಿಸಿದರು. ಮುಂದಿನ ದಿನಗಳಲ್ಲಿ ಚುನಾವಣೆಯ ಕಾವು ಕಾದು ನೋಡಬೇಕಾಗಿದೆ.

ಭಾರತದ ಚುನಾವಣೆಯಲ್ಲಿ ತಮ್ಮದೇ ಆದ ಹೊಸ ಛಾಪನ್ನು ಮೂಡಿಸಿರುವ ಶ್ರೀ ನರೇಂದ್ರ ಮೋದಿಯವರು  ಮೂರನೆಯ ಭಾರಿಗೆ  ಪ್ರಧಾನ ಮಂತ್ರಿಗಳಾಗಿ  ಪ್ರಮಾಣ ವಚನ ಸ್ವೀಕರಿಸಿದರು. ಇವರೊಡನೆ ಕರ್ನಾಟಕದ 5 ಜನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅಚ್ಚರಿಯ ಫಲಿತಾಂಶ ವನ್ನು ಕೊಟ್ಟ ಭಾರತದ ಜನತೆ ಮತ್ತೊಮ್ಮೆ ತಮ್ಮ ಜಾಣ್ಮೆಯನ್ನು ತೋರಿಸಿದರು. ಶ್ರೀ ರಾಹುಲ್ ಗಾಂಧಿ ಪ್ರಥಮ ಭಾರಿಗೆ ಪ್ರತಿಪಕ್ಷದ ನಾಯಕರಾದರು.

ಮತ್ತೊಮ್ಮೆ ಭಾರತ T-20 World Cup ಕ್ರಿಕೆಟ್  ನಲ್ಲಿ ಕಪ್ ಗೆದ್ದು 140 ಕೋಟಿ ಜನಕ್ಕೆ ಅತ್ಯಂತ ಸಂತೋಷ ವುಂಟು ಮಾಡಿತು. ರೋಹಿತ್ ಶರ್ಮ ನೇತೃತ್ವದ , ರಾಹುಲ್ ದ್ರಾವಿಡ್ ಅನುಭವದ ತರಬೇತುದಾರರಾಗಿ ಹಾಗು ವಿರಾಟ್ ಕೊಹ್ಲಿ ಅವರ ಭರ್ಜರಿ ಆಟದೊಂದಿಗೆ 17 ವರ್ಷದ ನಂತರದ ಈ ಸಾಧನೆ ಶ್ಲಾಘನೀಯ.

ಫ್ರಾನ್ಸ್ ನಲ್ಲಿ ನಡೆದ ಒಲಂಪಿಕ್ಸ್ ಮತ್ತೊಮ್ಮೆ ಪ್ರಪಂಚದ ಗಮನ ಸೆಳೆಯಿತು . ಭಾರತಕ್ಕೆ ಆರು ಪದಕಗಳು ಬಂದು , ನೀರಜ್ ಜೊಪ್ರ ಜಾವ್ಲಿನ್ ಥ್ರೋ ನಲ್ಲಿ ಬೆಳ್ಳಿಯ ಪದಕವನ್ನು ತಂದು  ಮತ್ತೊಮ್ಮೆ ಭಾರತದ ಪದಕಗಳಲ್ಲಿ ಅವರದೇ ಅಗ್ರ ಸ್ಥಾನ ಗಳಿಸಿದರು. ಭಾರತದ ವಿನೇಶ್ ಭೋಗತ್ ಅವರು ಕೂದಲೆಳೆ ಅಂತರದಿಂದ ಕೇವಲ 100 gram ತೂಕದಲ್ಲಿ ತಮ್ಮ ಸ್ಥಾನವನ್ನು ಕಳೆದುಕೊಂಡರು.
50 kg ವಿಭಾಗದಲ್ಲಿ ಭಾಗವಸಿದ್ದ ಅವರು , 50.1 kg ತೂಕದಿಂದ finals ತಲಪುವ ಅವಕಾಶವನ್ನು ಕಳೆದುಕೊಂಡರು. ಆದರೂ ಅವರು ಭಾರತದ ಹೆಮ್ಮೆಯ ಕ್ರೀಡಾಪಟು. ಮೊದಲ ಭಾರಿಗೆ ಮನು ಭಾಸ್ಕರ್ ಅವರು ಎರಡು ಪದಕಗಳನ್ನು ಗಳಿಸಿ ಒಂದೇ ಒಲಿಂಪಿಕ್ಸ್  ಈ ಸಾಧನೆ ಮಾಡಿದ ಭಾರತೀಯರೆನಿಸಿದರು.


ಫ್ರಾನ್ಸ್ ಒಲಿಂಪಿಕ್ಸ್ ನ ಹಲವಾರು ಚರ್ಚಾಸ್ಪದ ನಿರ್ಧಾರಗಳು ಎಲ್ಲರ ಕೆಂಗಣ್ಣಿಗೆ ಗುರಿಯಾದವು. ಮಹಿಳೆಯರ ವಿಭಾಗದಲ್ಲಿ ಭಾಗವಹಿಸಿ ಬಂಗಾರ ಪದಕ ಗೆದ್ದ ಇಮನೆ ಖೇಲಿಫ್ ಮೊದಲು ಪುರುಷರಾಗಿದ್ದು ಪ್ರಪಂಚದಾದ್ಯಂತ ಚರ್ಚೆಗೆ ಒಳಪಟ್ಟಿತ್ತು. ಇಂತಾ ನಿರ್ಧಾರಗಳು ಒಲಿಂಪಿಕ್ಸ್ ಮೇಲೆ ಕರಾಳ ಛಾಯೆಯನ್ನು ಬೀರಿರುವುದು ಸುಳ್ಳಲ್ಲ , ಇನ್ನು ಮುಂದಾದರು ಇದನ್ನು ಸರಿ ಮಾಡಲಿ ಎಂದು ಆಗ್ರಹಿಸೋಣ.

ಬೃಂದಾವನ ವಾಣಿ ತಂಡವು ವಿಶೇಷ ದ್ವಿದಶಮಾನೋತ್ಸವ ಸಂಚಿಕಿಗೆ ಅಣುವು ಮಾಡುತ್ತಿರುವುದರಿಂದ ಮುಂದಿನ ವಿಶೇಷ "ವಾಣಿಯ ಸುವರ್ಣ ಸಂಚಿಕೆ" ಡಿಸೆಂಬರ್ ನಲ್ಲಿ  ಬರಲಿದೆ. ಎಲ್ಲರನ್ನು ಈ  ನವೆಂಬರ್ ವಿಶೇಷ ಕಾರ್ಯಕ್ರಮದಲ್ಲಿ ಭೇಟಿಯಾಗಲು  ನಾವು ಕಾತರರಾಗಿದ್ದೇವೆ. ಹೆಚ್ಚಿನ ಮಾಹಿತಿಗಾಗಿ ಈ ಸಂಚಿಕೆಯಲ್ಲಿರುವ ಭಿತ್ತಿಪತ್ರದಲ್ಲಿ ಪಡೆಯಬಹುದು

**ಸಂಪಾದಕರ ತಂಡ**



**ಉಷಾ ಗಣಪತಿ**



**ಕೆ.ರಾಘವೇಂದ್ರ**



**ಪವಿತ್ರಾ ರಾಜೀವ್**



**ಚಂದ್ರ**



**ವಿನಯ್**

# ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ
# ಅಪೂರ್ವ ತಂಡ

## ಬೃಂದಾವನ ದ್ವಿ-ದಶಮಾನೋತ್ಸವ ಸ್ಮರಣ ಸಂಚಿಕೆಯ ಪ್ರಾಯೋಜಕತ್ವದ ಸುವರ್ಣಾವಕಾಶ

**ಪ್ರಾಯೋಜಿಸಲು ಕೊನೆಯ ದಿನಾಂಕ : ಸೆಪ್ಟೆಂಬರ್ 15,2024**

ಕನ್ನಡ ಮಿತ್ರರೇ ಹಾಗೂ ಬೃಂದಾವನ ಬಾಂಧವರೆ,

ನಿಮ್ಮ ಜಾಹಿರಾತುಗಳನ್ನು , ಕುಟುಂಬದ ಛಾಯಾಚಿತ್ರಗಳನ್ನು ಹಾಗೂ ವಿಶೇಷ ಸಂದೇಶ/ಹಾರೈಕೆಗಳನ್ನು ಬೃಂದಾವನ ಸ್ಮರಣ ಸಂಚಿಕೆಯಲ್ಲಿ ಹಂಚಿಕೊಳ್ಳುವ ಸದವಕಾಶ.

ಸ್ಥಳೀಯ ಉದ್ಯಮಿಗಳನ್ನು ಉತ್ತೇಜಿಸಲು, ಇತರ ಸಂಸ್ಥೆಗಳೊಂದಿಗೆ, ಸಹ ಉದ್ಯಮಿಗಳೊಂದಿಗೆ ಪರಸ್ಪರ ವ್ಯಾವಹಾರಿಕ ಸಂಪರ್ಕ ಬೆಳೆಸಲು ಹಾಗೂ ಉದ್ಯಮ ವಿಸ್ತರಣೆಗೆ ಅನುಕೂಲ ಮಾಡಿಕೊಳ್ಳಲು, ಸ್ಮರಣ ಸಂಚಿಕೆ ಒಂದು ಉತ್ತಮ ಮಾಧ್ಯಮ.ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಿರೆಂದು ಆಶಿಸುತ್ತೇವೆ.

**ಪ್ರಯೋಕತ್ವದ ವಿವರಗಳು/Sponsorship Details:**

*ಅರ್ಧ ಪುಟ/half page - $75*

*ಪೂರ್ತಿ ಪುಟ/ full page - $150*

**ಸಂಪರ್ಕ ಮಾಹಿತಿ/*Contact information***

*Brindavana Suddi : 6096190988*

*Mallikarjun Moogi : 7327880304*

## Golden opportunity for sponsorship in Brindavana’s 20th year anniversary souvenir

**Last date to submit sponsorship: September 15,2024**

Dear friends,

Here is an opportunity to advertise your business, wishes/messages with family photos to an overwhelming audience through Brindavana printed souvenirs. This special souvenir is an excellent advertising medium to facilitate and promote networking between various local organizations, people and businesses.

- **Photos must be high definition.**
- **Recommended pixels for half page - 1800 X 2400pixels (6X8 inches).**
- **Recommended pixels for full page - 2400 X 3300pixels (8X11 inches).**
- **Messages/wishes must be in Kannada/English. ( if the message is not provided, team will use the default message )**
- **Please email your photos to souvenir.ads20@gmail.com**

*www.brindavana.org*

@RohiniMahesh

# ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ

## ಅಪೂರ್ವ ತಂಡ

### ಬೃಂದಾವನ ದ್ವಿದಶಮಾನೋತ್ಸವದ ಪ್ರಯುಕ್ತ

# ಕಥಾ ಸ್ಪರ್ಧೆ

**ಕೊನೆಯ ದಿನಾಂಕ : September 15th, 2024**

**ಲೇಖನಗಳನ್ನು ಇಲ್ಲಿ ಕಳುಹಿಸಿ :**

**souvenir.kcob20@gmail.com**

1. ಕಥೆ ನಿಮ್ಮ ಸ್ವಂತ ರಚನೆಯಾಗಿರಬೇಕು. ಕಥೆ ಈ ಮೊದಲು ಯಾವುದೇ ಪತ್ರಿಕೆ, ನಿಯತಕಾಲಿಕ,ಅಂತರ್ಜಾಲ,ಬ್ಲಾಗ್,ಜಾಲತಾಣ ಹೀಗೆ ಎಲ್ಲಿಯೂ ಪ್ರಕಟ ಅಥವಾ ಪ್ರಸಾರ ಆಗಿರಬಾರದು . ಕಥೆ 2,000 ಪದಗಳು ಮೀರದಂತಿರಲಿ.
2. ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು. ಕಥೆ ಕಡ್ಡಾಯವಾಗಿ 'MS Word', "ನುಡಿ" ಅಥವಾ "ಬರಹ" ತಂತ್ರಾಂಶವನ್ನು ಬಳಸಿ ಬರೆದಿರಬೇಕು.
3. ಕಥೆಯೊಂದಿಗೆ ನಿಮ್ಮ ಹೆಸರು,ಭಾವಚಿತ್ರ (high resolution),ಈ-ಮೇಲ್ id, ಊರಿನ ಹೆಸರನ್ನು ಕಳುಹಿಸಬೇಕು.
4. ಕಥೆಯನ್ನು ಕಳುಹಿಸುವ ಇ-ಮೇಲ್ ನ ಸಬ್ಜೆಕ್ಟ್ ಬಾಕ್ಸ್ ನಲ್ಲಿ "B-20 ಕಥಾ ಸ್ಪರ್ಧೆ " ಎಂದು ಕಡ್ಡಾಯವಾಗಿ ನಮೂದಿಸಬೇಕು.
5. ಸ್ಪರ್ಧೆಯ ಕುರಿತ ಎಲ್ಲ ವಿಷಯಗಳಲ್ಲಿ ಸಂಪಾದಕ ತಂಡದ ನಿರ್ಣಯವೇ ಅಂತಿಮ.
6. ವಿಜೇತ ಕಥೆಗಳನ್ನು ಬೃಂದಾವನ ದ್ವಿದಶಮಾನೋತ್ಸವದ ಸ್ಮರಣ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 6096190988**

**ಧನ್ಯವಾದಗಳು,**

**ದ್ವಿದಶಮಾನೋತ್ಸವ ಸ್ಮರಣ ಸಂಚಿಕೆ ತಂಡ**

@RohiniMahesh

# ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ

## ಅಪೂರ್ವ ತಂಡ

ಪ್ರಿಯ ಕನ್ನಡಾಭಿಮಾನಿ ಬಂಧುಗಳೇ,

"ಅಪೂರ್ವ ತಂಡ"ವು ಬೃಂದಾವನದ ೨೦ನೆಯ ವಾರ್ಷಿಕೋತ್ಸವವನ್ನು ಸಂಭ್ರಮದಿಂದ ಆಚರಿಸಲು ತಯಾರಿ ನಡೆಸುತ್ತಿದೆ. ಈ ಸಂದರ್ಭದಲ್ಲಿ ವಿಶೇಷ ಸ್ಮರಣ ಸಂಚಿಕೆಯನ್ನು ಹೊರತರಲು ಆಶಿಸುತ್ತಿದ್ದೇವೆ. ನಿಮ್ಮ ಲೇಖನಗಳನ್ನು "ಅಪೂರ್ವ ಪಥದಲ್ಲಿ ಬೃಂದಾವನೋತ್ಸವ" ದ ಈ ಸ್ಮರಣ ಸಂಚಿಕೆಗೆ ಆಹ್ವಾನಿಸುತ್ತಿದ್ದೇವೆ .

ಲೇಖನಗಳು ಕನ್ನಡ ನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳನ್ನು ಕೇಂದ್ರವಾಗಿರಿಸಿಕೊಂಡು, ಸಣ್ಣ ಕಥೆ, ಕವನ, ಹನಿಗವನ, ಹಾಸ್ಯ ಲೇಖನ, ಪ್ರಬಂಧ, ಪ್ರವಾಸ ಕಥನ ಇತ್ಯಾದಿ ಯಾವುದೇ ಸಾಹಿತ್ಯ ಪ್ರಕಾರಗಳಲ್ಲಿ ಇರಬಹುದು. ನಿಮ್ಮ ಸೃಜನಾತ್ಮಕ ಹಾಗು ಕ್ರಿಯಾತ್ಮಕ ಬರಹಗಳಿಗೆ ಈ ಸ್ಮರಣ ಸಂಚಿಕೆ ಒಂದು ಅತ್ಯುತ್ತಮ ವೇದಿಕೆ.

**ಸ್ಮರಣ ಸಂಚಿಕೆಗೆ ಲೇಖನಗಳ ಆಹ್ವಾನ**

**ಕೊನೆಯ ದಿನಾಂಕ : September 10th, 2024**

**ಲೇಖನಗಳನ್ನು ಇಲ್ಲಿ ಕಳುಹಿಸಿ : souvenir.kcob20@gmail.com**

**ಲೇಖನ ಸಲ್ಲಿಕೆಯ ದಿಕ್ಸೂಚಿಗಳು :**

- ನಮಗೆ ಕಳುಹಿಸಲಿರುವ ಕನ್ನಡ ಲೇಖನಗಳು ಬೇರೆ ಯಾವುದೇ ಪತ್ರಿಕೆ, ಪುಸ್ತಕ ಅಥವಾ ಅಂತರ್ಜಾಲ ತಾಣಗಳಲ್ಲಿ ಪ್ರಕಟವಾಗಿರಬಾರದು.
- ಲೇಖನಗಳನ್ನು 'MS word', "ನುಡಿ" ಅಥವಾ "ಬರಹ" ತಂತ್ರಾಂಶವನ್ನು ಬಳಸಿ ಬರೆದಿರಬೇಕು. (font 12) 1200 ಪದಗಳು ಮೀರದಂತಿದ್ದರೆ ಉತ್ತಮ.
- ಲೇಖನಗಳೊಂದಿಗೆ ನಿಮ್ಮ ಹೆಸರು,ಭಾವಚಿತ್ರ ( high resolution ), ಈ-ಮೇಲ್ id , ಊರಿನ ಹೆಸರನ್ನು ಕಳುಹಿಸಬೇಕು. ಲೇಖನಕ್ಕೆ ಪೂರಕವಾದ ಛಾಯಾಚಿತ್ರ ( photographs , drawings ) ಕಳುಹಿಸಬಹುದು.
- ಸ್ವೀಕೃತವಾದ ಲೇಖನಗಳನ್ನು ಪ್ರಕಟಿಸುವಲ್ಲಿ ಸ್ಮರಣ ಸಂಚಿಕೆ ತಂಡದ ನಿರ್ಧಾರವೇ ಅಂತಿಮ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 6096190988

ಧನ್ಯವಾದಗಳು,

ದ್ವಿದಶಮಾನೋತ್ಸವ ಸ್ಮರಣ ಸಂಚಿಕೆ ತಂಡ

@RohiniMahesh


2
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಬೃಂದಾವನ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ
ದ್ವಿದಶಮಾನೋತ್ಸವ
B20
ನವೆಂಬರ್ 2, ನವೆಂಬರ್ 3, 2024
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ
ಅಪೂರ್ವ ತಂಡ
@RohiniMahesh

# ಅಧ್ಯಕ್ಷರ ಅಪೂರ್ವ ಅಂಕಣ

**ಬೃಂದಾವನದ ಬಂಧು ಬಾಂಧವರಿಗೆಲ್ಲ ನಮಸ್ಕಾರ!!**

ಎಲ್ರೂ ಹೇಗಿದ್ದೀರಿ? ಎಷ್ಟೋ ತಿಂಗಳುಗಳಿಂದ ನಾವು ಕಾಯ್ತಾ ಇದ್ದ ಬೇಸಿಗೆ ಬಂದಿದ್ದೂ ಆಯ್ತು, ಇನ್ನೇನು ಗಂಟು ಮೂಟೆ ಕಟ್ಟಿಕೊಂಡು ಹೋಗೋಕ್ಕೆ ತುದಿಗಾಲಲ್ಲಿ ನಿಂತಿದ್ದೂ ಆಯ್ತು. ಈ ವರ್ಷ ಬೇಸಿಗೆಯ ಧಗೆ/ ಬಿಸಿಲಿನ ತಾಪ ತುಂಬಾ ಹೆಚ್ಚಿದಂತೆಯೇ , ನಮ್ಮ ಬೃಂದಾವನದಲ್ಲೂ ಸಹ ಎಲ್ಲರ ಹುಮ್ಮಸ್ಸು, ಹುರುಪು ಸ್ವಲ್ಪ ಹೆಚ್ಚಾಗೇ ಕಾಣ್ತಿತ್ತು... ಇಲ್ಲೀವರೆಗಿನ ಎಲ್ಲಾ ಚಟುವಟಿಕೆಗಳಲ್ಲಿ ವಿಶೇಷ ಉತ್ಸಾಹ ಹುಮ್ಮಸ್ಸಿನಿಂದ ಭಾಗವಹಿಸಿದ್ದಾರೆ. ಇನ್ನು ಇದೇ ರೀತಿ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮುಂದೆಯೂ ಭಾಗವಿಸುತ್ತಾರೆ ಎಂಬ ಭರವಸೆ ನಮ್ಮೆಲ್ಲರಿಗೂ ಇದೆ.

ನಮ್ಮ ಹಾಗೂ ನಿಮ್ಮ ಪ್ರೀತಿಯ ಬೃಂದಾವನ ಹುಟ್ಟಿ ಇಪ್ಪತ್ತು ವರ್ಷ ಆಯ್ತು! ಈ ಅಪೂರ್ವ ಸಾಧನೆಗೆ ಅದ್ದೂರಿ ಸಂಭ್ರಮಾಚರಣೆ ಬೇಕೇ ಬೇಕಲ್ಲ? ನವೆಂಬರ್ 2, 3 ರಂದು ನಮ್ಮ ಬೃಂದಾವನದ 20 ನೇ ಸಂಭ್ರಮಾಚರಣೆಯ ವಿಶಿಷ್ಟ ಜಾತ್ರೆ ನಡೆಸಲು ನಿಶ್ಚಯಿಸಿದ್ದೇವೆ. ಈ ಸುಸಂದರ್ಭಕ್ಕೆ ನಮ್ಮ ಅಪೂರ್ವ ತಂಡದಲ್ಲಿ ಈಗಾಗಲೇ ತಯಾರಿ ಬಹಳ ಭರದಿಂದ ಸಾಗುತ್ತಿದೆ. ಇದರಲ್ಲಿ ನಮ್ಮ ಇಡೀ ಬೃಂದಾವನ ಬಳಗದವರು ಭಾಗವಹಿಸುತ್ತಿದ್ದಾರೆ. ನಮ್ಮ ಅಪೂರ್ವ ಕಾರ್ಯಕಾರಿ ಸದಸ್ಯರ ತಂಡದವರಿಗೆಲ್ಲ ದಿನೇ ದಿನೇ ಹುರುಪು ಹೆಚ್ಚಾಗ್ತಾ ಇದೆ. ಹಗಲೂ ರಾತ್ರಿ ಇದರ ಬಗ್ಗೆಯೇ ನಡೆಯುವ ಚಿಂತನೆ, ರೂಪು ರೇಶೆಗಳ ಸಿದ್ಧತೆ ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ಹಪಾಹಪಿ ನೋಡ್ತಾ ಇದ್ರೆ, ಮೈ ಝುಮ್ ಅನ್ನುತ್ತೆ.

ಈ ಮೂಲಕ ನಾನೇ ಖುದ್ದಾಗಿ ನಿಮಗೆಲ್ಲ ಸವಿನಯ ಆಮಂತ್ರಣ ನೀಡುತ್ತಿದ್ದೇನೆ! ನಿಮ್ಮ ಬೃಂದಾವನದ ಇಪ್ಪತ್ತನೆಯ ಸಂಭ್ರಮಾಚರಣೆಗೆ. ತಮಗೂ ತಮ್ಮ ಕುಟುಂಬದವರಿಗೆಲ್ಲಾ ಹಾರ್ದಿಕ ಸ್ವಾಗತ ಸುಸ್ವಾಗತ!! ಇದನ್ನೇ ನನ್ನ ವೈಯುಕ್ತಿಕ ವಿಜ್ಞಾಪನೆಯೆಂದು ಸ್ವೀಕರಿಸಿ, ಮಿಲ್ ಸ್ಟೋನ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ನಲ್ಲಿ ಈ ವರ್ಷದ ನವೆಂಬರ್ 2, 3 ರಂದು ನಡೆಯುವ ಈ ಅದ್ದೂರಿ ಕಾರ್ಯಕ್ರಮಕ್ಕೆ, ನೀವೆಲ್ಲರೂ ಪ್ರೀತಿಯಿಂದ, ಅತ್ಯುತ್ಸಾಹ, ವಿಶೇಷ ಹುರುಪಿನಿಂದ ಭಾಗವಹಿಸಿ, ಸಹಕಾರ, ಸಹಾಯ ಹಸ್ತ ಚಾಚಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತೀರೆಂದು ನಂಬಿದ್ದೇನೆ.

20ನೇ ವಾರ್ಷಿಕೋತ್ಸವ!! ವರ್ಷಾದಿಯಿಂದಲೇ ತುಂಬಾ ಕೆಲಸ ಇರುತ್ತದೆ. ಹಾಗಾಗಿ ಬೇರೆ ಕೆಲಸ ಮಾಡಲು, ಕಾರ್ಯಕ್ರಮಗಳನ್ನು ಆಯೋಜಿಸಲು ಸಮಯದ ಅಭಾವ ಖಂಡಿತ ಇರುತ್ತದೆ. ಹಾಗಿದ್ದಾಗಿಯೂ ನಮ್ಮ ಬೃಂದಾವನದಲ್ಲಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲು ಅವಕಾಶ ಸಿಕ್ಕುತ್ತಿರುವಾಗ, ಯಾಕೆ ಮಾಡಬಾರದು ಅಲ್ವಾ? ಎಂದಿನಂತೆಯೇ, ಕಳೆದ ಬೃಂದಾವನ ವಾಣಿ ಬಿಡುಗಡೆಯಾದ ನಂತರ, ವಿವರಗಳನ್ನು ಪಟ್ಟಿ ಮಾಡುವಾಗ, ಬೃಂದಾವನದಲ್ಲಿ ಇಲ್ಲೀವರೆಗೆ ನಡೆದ ಅದೆಷ್ಟೋ ಕಾರ್ಯಕ್ರಮಗಳು ಈ ಕೆಳಕಂಡಂತೆ ನೆನಪಿಗೆ ಬಂದವು.

* ಪ್ರತೀ ವರ್ಷ ನಮ್ಮ ಕಾರ್ಯಕ್ರಮಗಳಿಗೆ ನಾಂದಿ ಹಾಡುವುದು,ವಸಂತೋತ್ಸವದಿಂದ. ಈ ವರ್ಷ, ಏಪ್ರಿಲ್ 20 ರಂದು ಈಸ್ಟ್ ವಿಂಡ್ಸರ್ ನಗರದ ಮೆಲ್ವಿನ್ ಕ್ರೆಪ್ಸ್ ಮಿಡ್ಲ್ ಸ್ಕೂಲಿನಲ್ಲಿ ನಡೆದ ಈ ಯುಗಾದಿ ಉತ್ಸವದಲ್ಲಿ ನಮ್ಮ ಬೃಂದಾವನದ ಪ್ರತಿಭೆಗಳಿಂದ ಎಲ್ಲರಿಗೂ ಕನ್ನಡದ ರಸದೌತಣ; ಜೊತೆಗೆ ಒಬ್ಬಟ್ಟು ಔತಣ. ಹೊಸ ಪಂಚಾಂಗದಲ್ಲಿ ಸರ್ವ ಜನಾಂಗಕ್ಕೆ ಒಳಿತಾಗಲಿ ಅನ್ನುವಾಗ Ubuntu (Ubuntu is a southern African word that describes a person's connectedness to others)ಒಬ್ಬಟ್ಟು ವಿಶೇಷ ಮೆರುಗನ್ನು ಖಂಡಿತಾ ನೀಡಿತ್ತು ಅನ್ನೋದು ಕಾರ್ಯಕ್ರಮದಲ್ಲಿ ಭಾಗವಹಿಸಿದವರೆಲ್ಲರ ಅನಿಸಿಕೆಯಾಗಿತ್ತು.

ಮೇ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮಹೇಶ್ ಜೋಶಿಯವರು ನಮ್ಮ ಬೃಂದಾವನಕ್ಕೆ ಆಗಮಿಸಿ ನಮ್ಮ ಬೃಂದಾವನದವರಿಗೆ, ಮಂಡ್ಯದಲ್ಲಿ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನ ನೀಡಿ ನಮ್ಮೆಲ್ಲರಿಗೂ ಕರ್ನಾಟಕದ ಸಾಹಿತ್ಯ ಪರಿಷತ್ತಿಗೆ ಇನ್ನೂ ಹತ್ತಿರದ ನಂಟನ್ನು ಕಲ್ಪಿಸಿಕೊಟ್ಟರು. ಈ ಸಂದರ್ಭದಲ್ಲಿ ನಮ್ಮ ಅನೇಕ ಬೃಂದಾವನಿಗರು, ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯತ್ವವನ್ನೂ ಪಡೆದರು. ಅದೇ ದಿನ Mother's Day ಪ್ರಯುಕ್ತ ಸಂಗೀತ ಸಂಜೆಯೂ ಆಯೋಜಿಸಲ್ಪಟ್ಟಿತು.

ಶ್ರೀಕೃಷ್ಣ ವೃಂದಾವನದಲ್ಲಿ ಬೃಂದಾವನದ ವತಿಯಿಂದ ಪಂಡಿತ್ ಪ್ರವೀಣ್ ಗೊಡ್ಖಿಂಡಿಯವರು ತಮ್ಮ ಕೊಳಲಿನಿಂದ ಕೃಷ್ಣನನ್ನು ಕರೆದರೆ, ಶ್ರೀಕೃಷ್ಣ ವೃಂದಾವನದಲ್ಲಿ ನಮ್ಮ ಬೃಂದಾವನದವರು ಆ ವೇಣುನಾದವನ್ನು ಕರ್ಣಾನಂದಕರವಾಗಿ ಆನಂದಿಸಿದರು. ಸುಮಾರು ಮೂರು ಗಂಟೆ ಕಳೆದದ್ದು ಸಂಗೀತ ಸ್ವರದೌತಣದಲ್ಲಿ ಮೈಮರೆತಿದ್ದ ಯಾರಿಗೂ ತಿಳಿಯಲೇ ಇಲ್ಲ ಅಂದ್ರೆ ಗೊಡ್ಖಿಂಡಿಯವರು ಮಾಡಿದ ಮೋಡಿ ಎಂಥದ್ದು ಅಲ್ವಾ?

ಇದಾದ ಎರಡು ವಾರದಲ್ಲೇ ಮರ್ಸರ್ ಕೌಂಟಿ ಉದ್ಯಾನವನದಲ್ಲಿ ಅಂದರೆ ಜೂನ್ 16 2024 ರಂದು ಭಾನುವಾರ ಬೃಂದಾವನ ವನವಿಹಾರ. ಎಂದಿನಂತೆಯೇ ಬೃಂದಾವನದಲ್ಲಿ ಹಳೇ ಬೇರು, ಹೊಸ ಚಿಗುರು.. ಹೊಸ ಹೊಸ ಸದಸ್ಯರು ನ್ಯೂ ಜೆರ್ಸಿಯ ಎಲ್ಲೆಡೆಯಿಂದ ಬಂದು ಪ್ರಸ್ತುತ ಸದಸ್ಯರೊಡಗೂಡಿ ಆಟ, ಊಟ, ಓಟ ಎಲ್ಲದರಲ್ಲೂ ಭಾಗವಹಿಸಿ, ಹೊಸ-ಹೊಸ ಸ್ನೇಹ ಸಂಬಂಧ ಬೆಳೆಸಿ, ಸಂತೋಷದಿಂದ ಹಿಂದಿರುಗಿದರು. ಮಧ್ಯಾಹ್ನದ ವನ ಭೋಜನದಿಂದ ಶುರುವಾದ ಈ ವಿಹಾರ ಸೂರ್ಯಾಸ್ತವಾದಮೇಲೂ ಮುಂದುವರೆದಿದ್ದು ಭಾಗವಹಿಸಿದವರ ಉತ್ಸಾಹಕ್ಕೆ ಹಿಡಿದ ಕನ್ನಡಿಯಾಗಿತ್ತು.

ಅಪೂರ್ವ ತಂಡವು ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ಇಟ್ಟುಕೊಂಡು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ನಿಮಗೆ ತಿಳಿದೇ ಇದೆ. ಅಂತೆಯೇ, ಈ ಬಾರಿ ಬೃಂದಾವನದಲ್ಲಿ ಮೊಟ್ಟಮೊದಲ ಬಾರಿ ಕ್ಯಾಂಪಿಂಗ್ ಆಯೋಜಿಸಿದ್ದೆವು. ಬಿಸಿಲಿನ ತಾಪದ ನಡುವೆಯೇ ಹನಿದ, ಮುಂಗಾರು ಮಳೆಯಲ್ಲಿ "ಏನು ನಿನ್ನ ಹನಿಗಳ ಲೀಲೆ" ಎಂದು ಮರ್ಸರ್ ಕೌಂಟಿಯ ಮಧ್ಯೆ ಟೆಂಟ್ ಕಟ್ಟಿ ಮನೆ ಮಾಡಿ, ಹಾಡಿ-ಕುಣಿದಾಡಿ ನಮ್ಮ ಉತ್ಸಾಹಿ ಬೃಂದಾವನಿಗರು ಉಲ್ಲಸಿತರಾಗಿ ಮನಸಾರೆ ಸಂತೋಷ ವ್ಯಕ್ತ ಪಡಿಸಿದರು.

ಸಮರ್ಥನಮ್ ಚಾರಿಟಿ ಸಂಸ್ಥೆಯೊಂದಿಗೆ ಇತ್ತೀಚಿಗೆ ಬೃಂದಾವನಕ್ಕೆ ಭೇಟಿ ನೀಡಿದ ಭಾರತದ ಅಂಧ ಕ್ರಿಕೆಟಿಗರನ್ನು ಸನ್ಮಾನಿಸುವುದರ ಜೊತೆ ಹೊಸ ದೃಷ್ಟಿಕೋನ ದಿಂದ ನೋಡುವ ಅವಕಾಶ ದೊರೆಯಿತು. ಐದು ಬಾರಿ ವಿಶ್ವ ಚಾಂಪಿಯನ್ನರಾಗಿ ಮುಕುಟವನ್ನು ಮುಡಿಗೇರಿಸಿಕೊಂಡರೂ ಈ ತಂಡದ ಪ್ರತಿಯೊಬ್ಬರೂ, ತೋರಿದ ವಿನಯ ವಿನಮ್ರತೆ, ತುಂಬಿದ ಕೊಡ ತುಳುಕುವಿದಿಲ್ಲ ಗಾದೆಗೆ ಜೀವಂತ ಉದಾಹರಣೆಯಾಗಿದ್ದರು ಅಂದರೆ ಅದು ಅತಿಶಯದ ಮಾತಲ್ಲ. ಅವರ ಜೊತೆ ನೆಟ್ ನಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಅಭ್ಯಾಸ ಮಾಡಲು ನಮಗೆ ಅವಕಾಶ ಸಿಕ್ಕಿದ್ದು ನಿಜಕ್ಕೂ ಅಮೂಲ್ಯ!! ಅಂಧ ಕ್ರಿಕೆಟ್ ಹೇಗೆ ಆಡಲ್ಪಡುತ್ತದೆ, ಮತ್ತು ಅದರ ನಿಯಮಗಳೇನು ಅನ್ನುವುದರ ಬಗ್ಗೆ ಸಮರ್ಥನಮ್ ನ ಮುಖ್ಯಸ್ಥರಾದ ಡಾ. ಮಹಾಂತೇಶ್ ಮತ್ತು ಅವರ ತಂಡದ ಸದಸ್ಯರು ನಮಗೆಲ್ಲರಿಗೂ ಪ್ರಾತ್ಯಕ್ಷಿಕೆ ನೀಡಿದರು. ನಮ್ಮ ಹೆಮ್ಮೆ ಯಾಗಿರುವ ಈ ಭಾರತೀಯ ಕ್ರಿಕೆಟ್ ತಂಡಕ್ಕೆ ನಮ್ಮ ಆರ್ಥಿಕ ಉತ್ತೇಜನ ಬಹಳ ಅತ್ಯಗತ್ಯ. ನೀವೆಲ್ಲರೂ ಉದಾರವಾಗಿ treasury.kcob@gmail.com ಗೆ ನಿಮ್ಮ ಉದಾರ ದೇಣಿಗೆಯನ್ನು Zelle ಮಾಡುವ ಮೂಲಕ ಈ ವಿಶೇಷ ಸಾಮರ್ಥ್ಯದ ಆಟಗಾರರಿಗೆ ಬೆನ್ನುತಟ್ಟಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯ ಮನವಿಯನ್ನೂಡುತ್ತಿದ್ದೇನೆ.

ಮಕ್ಕಳೋತ್ಸವದಂದು ಚಿಗುರಿದ ಮಕ್ಕಳ ಚದುರಂಗ ಆಟಗಾರರ ಗುಂಪು ಮೊದಲ ಬಾರಿಗೆ ಪ್ರಾರಂಭಿಸಿ, ಕರಗತ ಮಾಡಿಕೊಳ್ಳುವ ಪ್ರಯತ್ನ ಮುಂದುವರೆಸಿದ್ದಾರೆ. ಹಾಗೆಯೇ, ಹೈಕಿಂಗ್ ಆಸಕ್ತಿ ಬೆಳೆಸುವ ಸಲುವಾಗಿ ಪ್ರಕೃತಿ ಬೃಂದಾವನ ಕ್ಲಬ್, ತೋಟಗಾರಿಕೆಯ ಸಲುವಾಗಿ ಬೃಂದಾವನ ಗಾರ್ಡನ್ಸ್- ಕ್ಲಬ್ , ಚಲನಚಿತ್ರಾಸಕ್ತರಿಗಾಗಿಗೆಯೇ ತೆರೆದ ಸಿನೆಮಾ ಕ್ಲಬ್ ಗಳಲ್ಲಿ ನಿರಂತರ ಚಟುವಟಿಕೆ, ಸಂಭಾಷಣೆಗಳು ನಡೆಯುತ್ತಾ ಇವೆ. ಮಕ್ಕಳ ಕನ್ನಡ ಪ್ರೀತಿ ಅಭಿವೃದ್ಧಿಗಾಗಿ "ನಾನೂ ಕನ್ನಡ ಮಾತಾಡ್ತೀನಿ" ಕ್ಲಬ್ ನಂತಹ ಹೊಸ ಕ್ಲಬ್ ಗಳ ರಚನೆಯ ಜೊತೆಗೆ ಜೊತೆಗೆ ಹಲವಾರು ಕಮ್ಯುನಿಟಿ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇವೆ ಮತ್ತು ಮುಂದೆಯೂ ಹಮ್ಮಿಕೊಳ್ಳುತ್ತೇವೆ.

ಆಗಸ್ಟ್ ಮುಗೀತಾ ಬಂತು. ಬೃಂದಾವನ ಕನ್ನಡ ಕಲಿಸೋಣ ಶಾಲೆಗಳು ಇನೇನು ಲೇಬರ್ ಡೇ ನಂತರ ಶುರುವಾಗಲಿದೆ. 45 ಕ್ಕೂ ಹೆಚ್ಚು ಸ್ವಯಂ ಪ್ರೇರಿತ ಶಿಕ್ಷಕರು, 220 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿರುವ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾಭಿಮಾನ ಬೆಳೆಸಲು ತಯಾರಾಗುತ್ತಿದ್ದಾರೆ. ಕರ್ನಾಟಕದಿಂದ ತರಿಸಿಕೊಂಡಿರುವ ಕನ್ನಡ ಪಠ್ಯ ಪುಸ್ತಕಗಳ ವಿತರಣೆ ಪ್ರಾರಂಭ ವಾಗಿದೆ. ನಮ್ಮ ಏಳು ಶಾಲೆಗಳಲ್ಲಿ ಮಕ್ಕಳನ್ನು ಸ್ವಾಗತಿಸಲು ಕಾತುರದಿಂದ ತುದಿಗಾಲಲ್ಲಿ ನಿಂತಿದ್ದೇವೆ.

ಹಾಗೆಯೇ, ಅಕ್ಕ ಪಕ್ಕ ಇರುವ ಕನ್ನಡೇತರ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಕ್ಕೆ ಸಹಾಯವಾಗುವಂತೆ, ಬೃಂದಾವನವು ನಿಮ್ಮೆಲ್ಲರ ಸಹಕಾರದಿಂದ RISE ಸಂಸ್ಥೆಗೆ ದೇಣಿಗೆ ನೀಡಿದೆ. ಹೀಗೆಯೇ ಮುಂದೆಯೂ ನಿಮ್ಮೆಲ್ಲರ ಸಹಕಾರದಿಂದ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಸಂಯೋಜಿಸುವ ಅವಕಾಶವನ್ನು ಕಲ್ಪಿಸಿಕೊಡುವಂತಾಗಲಿ, ಎಂದು ಆಶಿಸುತ್ತೇವೆ.



ನಾವು ಹಬ್ಬಗಳಲ್ಲಿ ಮುಳುಗಿರುವಾಗ, ನಮ್ಮ ಪ್ರಕೃತಿ, ಸಂಸ್ಕೃತಿಯ ಸೌಂದರ್ಯ, ನಮ್ಮ ಸಮುದಾಯದ ಶಕ್ತಿ ಮತ್ತು ಒಟ್ಟಿಗೆ ಸೇರುವ ಸಂತೋಷವನ್ನು ಪ್ರಶಂಸಿಸಲು ಸ್ವಲ್ಪ ಸಮಯ ತೆಗೆದುಕೊಳ್ಳೋಣ. ನಿಮಗೆಲ್ಲ ತಿಳಿದಿರುವಂತೆ, ಈ ಬೃಂದಾವನ ಕನ್ನಡ ಕೂಟ ಸೃಷ್ಟಿಯಾಗಿದ್ದು, ನಿಮ್ಮಿಂದ ಮತ್ತು ಕೇವಲ ನಿಮಗೋಸ್ಕರ. ನೀವಿಲ್ಲದೆ, ನಾವು, ಅಂದರೆ ಬೃಂದಾವನ ಅಪೂರ್ಣ! ಪ್ರತಿವರ್ಷ ನಿಮ್ಮ ಸಹಕಾರ ನಿಮ್ಮ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ. ನಮ್ಮೆಲ್ಲ ಕಾರ್ಯಕ್ರಮಗಳಿಗೆ ನೀವೂ ಸದಾ ಬರ್ತಾ ಇರಿ ಮತ್ತು ನಿಮ್ಮ ಇನ್ನಿತರ ಕನ್ನಡ ಕುಟುಂಬದವರನ್ನೂ ನಮ್ಮ ಬೃಂದಾವನಕ್ಕೆ ಕರೆತನ್ನಿ. ಯಾಕೆ ಅಂದ್ರೆ ನೀವು ನಿಮ್ಮ ಸ್ನೇಹಿತರ ಜೊತೆ ಇಲ್ಲಿಗೆ ಬಂದು, ಇತರರೊಂದಿಗೆ ಸ್ನೇಹ ಬಾಂಧವ್ಯ ಬೆಸೆದಾಗಲೇ ನಮ್ಮ ಬೃಂದಾವನದ ಬೇರುಗಳು ಸಧೃಡವಾಗುತ್ತದೆ. ಸುಮಧುರ ಸ್ನೇಹ ಸಮ್ಮಿಲನ, ನಮ್ಮ ನಿಮ್ಮೀ ಬೃಂದಾವನವಾಗುತ್ತದೆ ಎನ್ನುತ್ತಾ...

**---ಅರ್ಚನಾ ಆಚಾರ್ಯ,**
**ಅಧ್ಯಕ್ಷೆ , ಅಪೂರ್ವ ತಂಡ,**
**ಬೃಂದಾವನ, ನ್ಯೂ ಜೆರ್ಸಿ.**

# ಮಧುರ ಸಂವಹನ



**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*

ಮಳೆ ಬರುವ ಮುನ್ನ ಆಗಸದಲ್ಲಿ ಸಂಭವಿಸುವ ಮೋಡಗಳ ಕಾದಾಟವನ್ನೊಮ್ಮೆ ಗಮನಿಸಿ ನೋಡಿ. ಗುಡುಗು, ಸಿಡಲುಗಳ ಭಯಂಕರ ಆರ್ಭಟ. ಬೆಚ್ಚಿ ಬೀಳಿಸುವ ಮಿಂಚು. ಸೂರ್ಯನನ್ನೇ ಸುತ್ತುವರಿದು, ತೊಡೆತಟ್ಟಿ ನಿಲ್ಲುವ ಕಾರ್ಮುಗಿಲುಗಳು. ಎಲ್ಲೆಡೆ ವ್ಯಾಪಿಸಿದ ದಟ್ಟಕತ್ತಲು. ತನ್ಮಧ್ಯೆ ಇದ್ದಕ್ಕಿದ್ದಂತೆ ಉದ್ಭವಿಸಿ ಹೆದರಿಸುವ ಹರಿತವಾದ ಕೋಲ್ಮಿಂಚುಗಳು. ಹೀಗೆ ಒಂದಷ್ಟು ಹೊತ್ತು ವಿಶಾಲವಾದ ಆಕಾಶ ಭೀಕರ ರಣರಂಗವೇ ಆಗಿ ಬಿಡುತ್ತದೆ!

ಮೇಘಗರ್ಭದೊಳಗಿನ ನೀರಿನ ಭಾರ ಮತ್ತು ಅತಿಯಾದ ಗಾಳಿಯ ಒತ್ತಡವೆನ್ನುವುದು ಆಗಸದಲ್ಲಿ ಇಂತಹ ಭಯಾನಕ ಯುದ್ಧವನ್ನೇ ಸೃಷ್ಟಿಸಿಬಿಡುತ್ತದೆ. ಆದರೆ ಇದು ತಾತ್ಕಾಲಿಕ. ಸ್ವಲ್ಪ ಸಮಯದ ನಂತರ ನೋಡಿದರೆ ಎಲ್ಲವೂ ಪ್ರಶಾಂತವಾಗಿರುತ್ತದೆ! ತಂಪಾದ ಮಳೆ ಈ ಭೂಮಿಯನ್ನು ಯಥಾಪ್ರಕಾರ ಸಾಂತ್ವನಗೊಳಿಸುತ್ತದೆ. ಕೋಮಲವಾದ ಹೂ,ಗಿಡ, ಮರ, ಬಳ್ಳಿಗಳಿಗಳ ಮೇಲೆ ಹನಿಹನಿ ನೀರಿನ ಮಧುರ ಉಪಚಾರ ನಡೆಯುತ್ತದೆ! ಹೀಗೆ ಶುಭ್ರವಾದ ಅಕಾಶದಿಂದ ಮತ್ತದೇ ಮಧುರ ಸಂವಹನ, ಈ ಭೂಮಿಯ ಜೊತೆಗೆ !

ನಮ್ಮ ಮನಸ್ಸುಗಳೂ ಮೇಘಗಳಂತೆಯೇ. ಸದಾ ಸಂಚಲನಶೀಲ. ಮೋಡಗಳು ಓಡಾಡುವ ಅಪರಿಮಿತ ಆಗಸಕ್ಕೆ ಇತಿ ಮಿತಿಯೆಂಬುವುದಿಲ್ಲ. ನಮ್ಮ ಅಂತರಂಗದೊಳಗಿನ ಭಾವಯಾನಕ್ಕೂ ಕೊನೆಮೊದಲೆಂಬುವುದಿಲ್ಲ. ನಮ್ಮೆಲ್ಲರ ಮನಸ್ಸುಗಳೂ ಸ್ವಭಾವತಃ ಬಿಳಿಮೋಡಗಳಂತೆ ಸದಾ ಸಂತಸದಿಂದ ಸ್ವಚ್ಛಂದವಾಗಿಯೇ ವಿಹರಿಸುತ್ತಿರುತ್ತವೆ. ಆಗ ನಮ್ಮೊಳಗಿನ ಪರಸ್ಪರ ಮಾತುಕತೆ, ಸಂವಹನಗಳೂ ಶಾಂತರೂಪದಿಂದಲೇ ನಡೆಯುತ್ತಿರುತ್ತವೆ. ಮಧುರಮಾತು ಮತ್ತು ಪ್ರೀತಿಯ ಉಪಚಾರಗಳ ಕೊಡುಕೊಳ್ಳುವಿಕೆಯನ್ನು ಯಾವ ಪ್ರತಿಬಂಧಕಗಳೂ ಬಾಧಿಸುವುದಿಲ್ಲ. ಎಲ್ಲವೂ ಸುಖಮಯವಾಗಿರುತ್ತದೆ.

ಆದರೆ ಕೆಲವೊಮ್ಮೆ ಗೋಚರಿಸುವ ಕೆಲಸದ ಒತ್ತಡ, ಸಾಂಸಾರಿಕ ಹೊಣೆಗಾರಿಕೆಗಳ ಭಾರ ನಮ್ಮ ಮನಸುಗಳನ್ನೂ ಕಾರ್ಮೋಡಗಳನ್ನಾಗಿಸುತ್ತದೆ. ನಮ್ಮ ಸಮಸ್ಯೆಗಳಷ್ಟೇ ನಮಗೆ ದೊಡ್ಡದಾಗಿ ಕಾಣುತ್ತವೆ. ನಮ್ಮ ಒಡನಾಡಿಗಳಿಗೂ ಇರಬಹುದಾದ ಒತ್ತಡವನ್ನು ಅರ್ಥಮಾಡಿಕೊಳ್ಳುವ ವ್ಯವಧಾನ ಕಡಿಮೆಯಾಗುತ್ತದೆ. ಸಂದರ್ಭವಶಾತ್ ಸೃಷ್ಟಿಯಾಗುವ ಸನ್ನಿವೇಶಗಳು ಅಸಮಾಧಾನದ ಬಿರುಗಾಳಿಯನ್ನೆಬ್ಬಿಸುತ್ತವೆ. ಆಗ ಸಂಭವಿಸುವ ಘರ್ಷಣೆಗಳೇ ನಮ್ಮ ಬಾಳಿನ ಗುಡುಗು, ಸಿಡಿಲು, ಕೋಲ್ಮಿಂಚುಗಳು !

ಮುಗಿಲೊಡಲಿನ ನೀರಿನ ಭಾರ ಕಳೆದುಹೋದಾಗ, ಗಾಳಿಯ ಒತ್ತಡ ಕಡಿಮೆಯಾದಾಗ ಆಗಸವು ಸಹಜತೆಗೆ ಮರಳುವಂತೆ, ನಮ್ಮ ಬದುಕೂ ಮತ್ತೆ ಶಾಂತವಾಗಬೇಕು. ಸನ್ನಿವೇಶ ಮತ್ತು ಸಾಂದರ್ಭಿಕ ಒತ್ತಡಕ್ಕೆ ಸಂಭವಿಸಿದ ಜಗಳ, ಮಾತುಕತೆ, ಮುನಿಸುಗಳನ್ನು ಮರೆತು ಬಿಡಬೇಕು. ಪರಸ್ಪರ ತಪ್ಪುಗಳನ್ನು ಕ್ಷಮಿಸುವ ಔದಾರ್ಯ ಬೇಕು. ಪರಸ್ಪರ ದೋಷಗಳನ್ನು ನಿರ್ಲಕ್ಷಿಸಿ, ಒಳ್ಳೆಯತನವನ್ನಷ್ಟೇ ಗುರುತಿಸಿ ಮೆಚ್ಚಿಕೊಳ್ಳುವ ಹೃದಯವಂತಿಕೆ ಬೇಕು. ಆಗ ಮಾತ್ರ ಆಗಸವು ಮಧುರ ಮಳೆಹನಿಯೆನ್ನುವ ಅಮೂಲ್ಯ ಕೊಡುಗೆಯನ್ನಿತ್ತು ಈ ಭೂಮಿಯ ಹಸಿರುಸಿರಿಯ ಸಮೃದ್ಧಿಗೆ ಕಾರಣವಾಗುವಂತೆ, ನಮ್ಮ ಒಳ್ಳೆಯ ಗುಣಗಳು, ಪ್ರಾಮಾಣಿಕ ಪ್ರಯತ್ನಗಳು ನಮ್ಮದೇ ಕುಟುಂಬದ ಸಂತೃಪ್ತಿ, ಸಮಾಧಾನ ಮತ್ತು ಸಮಗ್ರವಾದ ಅಭಿವೃದ್ಧಿಗೆ ಪೂರಕವಾಗಿ ಪರಿಣಮಿಸುತ್ತವೆ.

ಕೆಲವೊಮ್ಮೆ ಆಗಸದಲ್ಲಿ ವ್ಯಗ್ರವಾಗಿ ಬಿಡುವ ಉಗ್ರ ಚಂಡ ಮಾರುತ, ಬರಸಿಡಿಲು, ಪ್ರಳಯಾಂತಕ ಕುಂಭದ್ರೋಣ ಮಳೆ ಭೂಮಿಗೂ ವ್ಯಾಪಿಸಿ, ಭೀಕರವಾಗಿ ಅಪ್ಪಳಿಸಿ ಇಲ್ಲಿ ಅಪಾರವಾದ ಹಾನಿಯನ್ನುಂಟು ಮಾಡುವದೂ ಸಾಧ್ಯವಿರುತ್ತದೆ! ಆಗ ಸಂಭವಿಸುವ ನಷ್ಟಗಳನ್ನು, ದುರಂತಗಳನ್ನು ಸರಿಪಡಿಸಲು ಬಹಳ ಕಷ್ಟಪಡಬೇಕಾಗುತ್ತದೆ. ಆದರೆ ಕೆಲವೊಂದಕ್ಕೆ ಪರಹಾರವೇ ಇರುವುದಿಲ್ಲ. ಅದೆಷ್ಟೋ ಬದುಕುಗಳು ಶಾಶ್ವತವಾಗಿ ಬಲಿಯಾಗಿ ನಿರ್ನಾಮವಾಗಿ ಬಿಡುತ್ತವೆ.

ಮಿತಿಯನ್ನು ಮೀರಿದ ನಮ್ಮ ಮನಸ್ಸುಗಳ ಘರ್ಷಣೆಯೂ ಹಾಗೆಯೇ. ಅನಗತ್ಯವಾಗಿ ಇಡೀ ಕುಟುಂಬವನ್ನೇ ವ್ಯಾಪಿಸಿ ಬಿಡಬಹುದು. ಏನೂ ತಪ್ಪೆಸಗದ ಮುಗ್ಧಮನಸ್ಸುಗಳನ್ನು ಅನ್ಯಾಯವಾಗಿ ನೋಯಿಸಿಬಿಡಬಹುದು. ಸಕಾಲದಲ್ಲಿ ಪರಿಹರಿಸಿಕೊಳ್ಳದ ಅಸಮಾಧಾನದ ಬೆಂಕಿ ಬೃಹತ್ತಾಗಿ ಬೆಳೆದು ಕುಟುಂಬದೊಳಗಿನ ಬಾಂಧವ್ಯದ ಬೆಸುಗೆಯನ್ನು ಶಾಶ್ವತವಾಗಿ ದಹಿಸಿಬಿಡಬಹುದು!

ಆಗಸದಲ್ಲಿ ಎಂತಹ ಘರ್ಷಣೆ ಸಂಭವಿಸಿದರೂ, ತಂಗಾಳಿ, ಮಧುರ ಮಳೆಹನಿಗಳು ಮಾತ್ರ ಭೂಮಿಗೆ ಬಂದು ಇಲ್ಲಿನ ಸುಕೋಮಲ ಚಿಗುರೆಲೆ ಬಳ್ಳಿಗಳ ಜೊತೆಗೆ ಸದಾ ಮಧುರವಾಗಿ ಸಂವಹನ ನಡೆಸುವಂತೆ ನಮ್ಮ ಮಾತುಕತೆಗಳೂ ಎಲ್ಲರೊಡನೆ ಸುಮಧುರವಾಗಿ ಮೂಡಿಬರಲಿ. ನಮ್ಮ ಮನಸ್ಸಿನೊಳಗಿನ ಒತ್ತಡಕ್ಕೂ ಮತ್ತು ಅದರ ಬಗ್ಗೆ ಏನೇನೂ ಅರಿಯದ ನಮ್ಮ ಮನೆಯ ಮುಗ್ಧಮನಸ್ಸುಗಳಿಗೂ ಆಕಾಶ ಮತ್ತು ಭೂಮಿಯಷ್ಟೇ ಅಂತರವಿದೆ ಎಂಬ ಎಚ್ಚರವಿರಲಿ. ಒತ್ತಡಗಳನ್ನು ಸಹಿಕೊಂಡೇ ಸಂಸಾರವನ್ನು ಸಮರ್ಥವಾಗಿ ನಿರ್ವಹಿಸಿಕೊಂಡುಹೋಗುವ ತಾಳ್ಮೆಯನ್ನು, ಜಾಣ್ಮೆಯನ್ನು ದೇವರು ನಮಗೆಲ್ಲರಿಗೂ ಕರುಣಿಸಲಿ.


# ಹಿನ್ನೋಟ





# ಬೃಂದಾವನದಲಿ "ಪ್ರವೀಣ"ರ ಮಧುರವಾದ ಮುರಳಿ ನಾದ

**ವಿ. ಪ್ರಸನ್ನ ಕುಮಾರ್**, *ನ್ಯೂಜೆರ್ಸಿ*



ನ್ಯೂಜರ್ಸಿಯ ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ ಬೃಂದಾವನ ಕನ್ನಡ ಕೂಟ ಹಾಗೂ ಸ್ಥಳೀಯ ಶ್ರೀ ಕೃಷ್ಣ ಬೃಂದಾವನ ಜೂನ್ ೯ ರಂದು ಜೊತೆಯಾಗಿ ನಡೆಸಿದ, ವಿದ್ವಾನ್ ಡಾ. ಪ್ರವೀಣ್ ಗೋಡ್ಖಿಂಡಿಯವರ ಸುಶ್ರಾವ್ಯವಾದ ವೇಣು ವಾದನ "ರಂಗ ಮಂದಿರ ತುಂಬಿದ್ದ" ಸಭಾಂಗಣದಲ್ಲಿ ನೆರೆದಿದ್ದ ಇನ್ನೂರಕ್ಕೂ ಹೆಚ್ಚು ಸಭಿಕರನ್ನು ಸುಮಾರು ಎರಡೂ ವರೆ ಘಂಟೆಗಳ ಕಾಲ ಶ್ರೀ ಕೃಷ್ಣ ಪರಮಾತ್ಮನ ಲೋಕಕ್ಕೆ ಕರೆದೊಯ್ದು ವೇಣು ವಾದನದ ಸುಧೆಯನ್ನು ಸಂಪೂರ್ಣವಾಗಿ ಸವಿಯಲು ಅನುವು ಮಾಡಿಕೊಟ್ಟಿತು ಅಂದರೆ ಉತ್ಪ್ರೇಕ್ಷೆಯಾಗಲಾರದು. ಪ್ರವೀಣ್ ಅವರಿಗೆ ತಬಲಾ ಪಕ್ಕವಾದ್ಯದಲ್ಲಿ ವಿದ್ವಾನ್ ಅಮಿತ್ ಕಾಟೇಕರ್ ಅವರು ಅದ್ಭುತವಾಗಿ ನುಡಿಸಿದರು.

ಮೊದಲಿಗೆ ಶ್ರೀ ಕೃಷ್ಣ ವೃಂದಾವನದ ವಿದುಷಿ ಶ್ರೀಮತಿ ಆಶಾ ಜನಾರ್ದನ ಅವರು ಸ್ವಾಗತ ಬಯಸಿದರೆ , ಶ್ರೀಮತಿ ಅಮೃತ ರಮೇಶ್ ಕಲಾವಿದರನ್ನು ಆಹ್ವಾನಿಸಿದರು . ತದನಂತರ ಬೃಂದಾವನ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀಮತಿ ಅರ್ಚನಾ ಆಚಾರ್ಯ ಅವರು ಕಲಾವಿದರನ್ನು ಪರಿಚಯ ಮಾಡಿಸಿ ಸಕಲರಿಗೂ ಸ್ವಾಗತ ಕೋರಿದರು.

ಮಧುವಂತಿ ರಾಗವನ್ನು ಸುಮಾರು ಒಂದು ಘಂಟೆಗಳ ಕಾಲ ಮಧುರವಾಗಿ ನುಡಿಸಿ ಪ್ರೇಕ್ಷಕರನ್ನು ತನ್ಮಯ ಗೊಳಿಸಿದ ಪ್ರವೀಣ್ ಅವರು ತದನಂತರ ಕೃಷ್ಣನ ಮೇಲಿನ ಹಲವಾರು ಭಕ್ತಿಗೀತೆಗಳನ್ನು ನುಡಿಸಿ ಅಲ್ಲಿ ನೆರೆದಿದ್ದವರನೆಲ್ಲ ಆನಂದ ತೀರ್ಥದಲ್ಲಿ ಮುಳುಗುವಂತೆ ಮಾಡಿದರು.



ಕೃಷ್ಣ ನೀ ಬೇಗನೇ ಬಾರೋ, ಜಗದೋಧಾರಣ ಆಡಿಸಿದಳು ಯಶೋಧೆ , ಬಾರೋ ಕೃಷ್ಣಯ್ಯ, ಪಿಳ್ಳಂಗೋವಿಯ ಚೆಲ್ವ ಕೃಷ್ಣನ, ಪವಮಾನ ಜಗದ ಪ್ರಾಣ ಮುಂತಾದ ಸುಂದರವಾದದ ಭಕ್ತಿಗೀತೆಗಳು ಪುತ್ತಿಗೆ ಮಠದ ಆಸ್ಥಾನ ವಿದ್ವಾನ್ ರಾದ ಡಾ. ಪ್ರವೀಣ್ ಗೋಡ್ಖಿಂಡಿ ಅವರ ಕೊಳಲಿನಲ್ಲಿ ಮಧುರವಾಗಿ ಮೂಡಿ ಬಂದಿತು. ಸುಮಾರು ೧೫೦ ನಿಮಿಷಗಳ ಕಾಲ ಸಂಗೀತ ಸುಧೆಯಲ್ಲಿ ಮುಳುಗಿದ ಪ್ರೇಕ್ಷಕರಿಗೆ "ಇನ್ನು ಸ್ವಲ್ಪ ಹೊತ್ತು ಮುಂದುವರೆಯಬಾರದೆ" ಅನ್ನಿಸಿತು. ಆದರೆ ಗರ್ಭ ಗುಡಿಯಲ್ಲಿ ಶ್ರೀ ಕೃಷ್ಣನಿಗೆ ಮಂಗಳಾರತಿ ಮಾಡುವ ಹೊತ್ತು ಬಂದಾಗಿತ್ತು ..

ಪ್ರವೀಣರು ಪ್ರೇಕ್ಷಕರನ್ನು ತಮ್ಮ ಕೊಳಲು ವಾದನದಲ್ಲಿ ತೊಡಗಿಸಿಕೊಂಡ ರೀತಿಯು ಕೂಡ ಬಹಳ ವಿಶಿಷ್ಟವಾಗಿತ್ತು...ಅದರಲ್ಲೂ ಅವರು ಪ್ರವೀಣರೇ. ಕೊಳಲಿನಲ್ಲಿ ಸ ದ ಪ ಗ ರಿ ನುಡಿಸಿದ ಕೂಡಲೇ ಪ್ರೇಕ್ಷಕರು "ಕೃಷ್ಣ" ಅಂತ ಒಕ್ಕೊರಲಿನಲ್ಲಿ ಹೇಳುವುದನ್ನು ಹೇಳಿಕೊಟ್ಟು, ಅನಂತರ ಎಲ್ಲರ ಬಾಯಲ್ಲೂ "ಕೃಷ್ಣ" ಅಂತ ಹೇಳಿಸಿದರು. ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೇ ಅಂತ ದಾಸರು ಹೇಳಿದ ಹಾಗೆ ಎಲ್ಲರೂ "ಕೃಷ್ಣ" ಅಂದಾಗ ಬಂದ ಪುಣ್ಯ ಪ್ರವೀಣರಿಗೂ ಹಾಗೂ ಪ್ರೇಕ್ಷಕರಿಗೂ ಸಮಾನವಾಗಿ ಹಂಚಿ ಹೋಯಿತು

ಸರಳ ವ್ಯಕ್ತಿತ್ವದ ಪ್ರವೀಣ ಅವರ ಸುಂದರ ಸಂಗೀತ ಕಾರ್ಯಕ್ರಮ ಮುಗಿದ ನಂತರ ನಮ್ಮ ಶ್ರೀ ಕೃಷ್ಣ ವೃಂದಾವನದ ಮುಖ್ಯಸ್ಥರಾದ ಗುರು ಯೋಗೀಂದ್ರ ಭಟ್ ಅವರು ಚಿಕ್ಕದಾಗಿ ವಂದನಾರ್ಪಣೆ ಮಾಡಿ ಉತ್ತಮವಾದ ಕಾರ್ಯಕ್ರಮದ ಬಗ್ಗೆ ಚೊಕ್ಕವಾಗಿ ನಾಲ್ಕು ಒಳ್ಳೆಯ ಮಾತುಗಳನು ಆಡಿ ಕಲಾವಿದರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ಕಾರ್ಯಕ್ರಮ ಮುಗಿದ ಮೇಲೆ ಪ್ರವೀಣ ಹಾಗೂ ಅಮಿತ್ ಅವರ ಪಕ್ಕ ಫೋಟೋ ತೆಗೆಸಿಕೊಳ್ಳಲು  ಪ್ರೇಕ್ಷಕರು ಸರತಿಯಲ್ಲಿ ನಿಂತಿದ್ದನ್ನು ನೋಡಿದಾಗ ನಮ್ಮ ಬೆಂಗಳೂರಿನಲ್ಲಿ ಆರತಕ್ಷತೆ ಸಮಯದಲ್ಲಿ ಗಂಡು ಹೆಣ್ಣಿಗೆ ಶುಭಾಶಯ ಕೋರಿ ಫೋಟೋ ತೆಗಿಸಿಕೊಳ್ಳುವ ತರ ಕಂಡಿತು..






ಅದೆಲ್ಲ ಆದಮೇಲೆ ಶ್ರೀ ಕೃಷ್ಣನಿಗೆ ಮಂಗಳಾರತಿ ಮಾಡಿ ತೀರ್ಥ  ಪ್ರಸಾದವನ್ನು ಬಂದಿದ್ದ ಎಲ್ಲ ಪ್ರೇಕ್ಷಕರಿಗೂ ನೀಡಲಾಯಿತು. ಶ್ರೀ ಕೃಷ್ಣ ವೃಂದಾವನದಲ್ಲಿ ಬಿಸಿ ಬಿಸಿ ಪೊಂಗಲ್ ಪ್ರಸಾದ ಕೊಟ್ಟಿದ್ದು ..ಮನ ತಣಿಸಿಕೊಂಡಿದ್ದ ಪ್ರೇಕ್ಷಕರಿಗೆ ಹೊಟ್ಟೆಯ ಪೂಜೆಯು ಆದಂತಾಯಿತು.

ಇಂತಹ ಉತ್ತಮವಾದ ಸಂಗೀತ ಕಾರ್ಯಕ್ರಮವನ್ನು ನಮ್ಮ ನ್ಯೂಜೆರ್ಸಿಯ ಕಲಾಭಿಮಾನಿಗಳು ಆನಂದಿಸಲು ಅನುವು ಮಾಡಿಕೊಟ್ಟ ಶ್ರೀ ಕೃಷ್ಣ ವೃಂದಾವನದ ಮುಖ್ಯಸ್ಥರಿಗೂ, ಸ್ವಯಂಸೇವಕರಿಗೂ ಹಾಗೂ ಬೃಂದಾವನ ಕನ್ನಡ ಕೂಟದ ಅಧ್ಯಕ್ಷರಿಗೂ ಹಾಗೂ ಅವರ "ಅಪೂರ್ವ" ತಂಡದ ಅಮೋಘ ಸದಸ್ಯರಿಗೂ, ಅತ್ಯಂತ ಸಂತೃಪ್ತರಾದ ಎಲ್ಲ ಪ್ರೇಕ್ಷಕರ ಪರವಾಗಿ  ನನ್ನ ಹೃತ್ಪೂರ್ವಕ ಧನ್ಯವಾದಗಳು..ಜೈ ಶ್ರೀ ಕೃಷ್ಣ🙏



# ಇನ್ನೊಂದು ಮುತ್ತಿನ ಕಥೆ

**ಅನಿಲ್ ಭಾರದ್ವಾಜ್**, *ನ್ಯೂಜೆರ್ಸಿ*

ಹೆಸರಾಂತ ನಿರ್ದೇಶಕ ಟಿ. ಎಸ್. ನಾಗಾಭರಣರ ಜನಪ್ರಿಯ ಚಲನಚಿತ್ರ 'ಚಿನ್ನಾರಿಮುತ್ತ' ನೋಡದ, ತಿಳಿಯದ ಕನ್ನಡಿಗರು ಬಹಳ ವಿರಳ. ಆ ದಿನಗಳಲ್ಲಿ "ಹೇಗಿದ್ದ ಹೇಗಾದ ಗೊತ್ತಾ? ನಮ್ಮ ಚಿನ್ನಾರಿಮುತ್ತ" ಹಾಡು ಎಲ್ಲ ಮನೆ-ಮನಗಳಲ್ಲಿ ತುಂಬಿತ್ತು. ಆ ಮುತ್ತನ ಮುಂದಿನ ಅವತಾರವನ್ನು ನಮ್ಮ ಮುಂದೆ ಇಡಲು, ಈಗ ನಾಗನಲ್ಲ, ನಾಗಿಣಿ ತಯಾರಾಗಿದ್ದರು.

ನಾಗಾಭರಣರ ಧರ್ಮಪತ್ನಿ ನಾಗಿಣಿಭರಣ ಅವರ ಚೊಚ್ಚಲ ನಿರ್ದೇಶನದ ಚಲನಚಿತ್ರ, "Genius ಮುತ್ತ' ಅಮೆರಿಕಾದ ಹಲವು ಪ್ರದೇಶಗಳಲ್ಲಿ ಪ್ರಥಮ ಪ್ರದರ್ಶನಗಳನ್ನು ಮಾಡಿ, ನ್ಯೂ ಜೆರ್ಸಿಯಲ್ಲಿ, ಬೃಂದಾವನ ಅಪೂರ್ವ ತಂಡವು ಬೃಂದಾವನ ಸಿನೆಮಾ ಕ್ಲಬ್ ವತಿಯಿಂದ ಸಿನೆಮಾ ಪ್ರಿಯರಿಗೆ ಯೋಜಿಸಿದ್ದ ಕಾರ್ಯಕ್ರಮದಲ್ಲಿ, ಬುಧವಾರ, ಮೇ ೨೨, ಸಂಜೆ ಏಳು ಘಂಟೆಗೆ ಪ್ರದರ್ಶನಕ್ಕೆ ತಯಾರಾಗಿತ್ತು. ಭಾರತದಲ್ಲಿ ಬಿಡುಗಡೆಯಾಗುವ ಮುನ್ನವೇ ಅಮೇರಿಕಾದಲ್ಲಿ ಪ್ರದರ್ಶನಕ್ಕೆ ಬಂದದ್ದು ಈ ಚಿತ್ರದ ಇನ್ನೊಂದು ವಿಶೇಷ. ಈ ಸಂದರ್ಭದಲ್ಲಿ ವಿಶೇಷ ಅತಿಥಿಗಳಾಗಿ ಸಾಕ್ಷಾತ್ ನಾಗಾಭರಣರೇ ಉಪಸ್ಥಿತರಿದ್ದರು. ಈ ಎಲ್ಲಾ ವೈಶಿಷ್ಟ್ಯಗಳಿದ್ದ ಈ ಕಾರ್ಯಕ್ರಮಕ್ಕೆ ೭೦ಕ್ಕೂ ಹೆಚ್ಚು ಕನ್ನಡ ಚಲನ ಚಿತ್ರಾಭಿಮಾನಿ ನ್ಯೂ ಜೆರ್ಸಿ ನಿವಾಸಿಗರು ಟಿಕೆಟ್ ಖರೀದಿಸಿ, ಆಗಮಿಸಿದ್ದರು. ವಾರದ ಮಧ್ಯದಲ್ಲಿ, ರಾತ್ರಿಯ ಹೊತ್ತು, ಇಷ್ಟು ಜನ ಸೇರಿದ್ದು, ಕನ್ನಡಿಗರಿಗೆ ಭರಣ ಕುಟುಂಬದ ಮೇಲಿರುವ ಪ್ರೀತಿ ಮತ್ತು ಗೌರವದ ನಿದರ್ಶನವಾಗಿತ್ತು.



ಆ ದಿನದ ಅತಿಥೇಯರಾಗಿದ್ದ ಸ್ನೇಹ ಮತ್ತು ಸುನೆಲ್ ಹುಲಿಕೆರೆಯವರ basement ನ home theater ಪ್ರದರ್ಶನಕ್ಕೆ ಸಜ್ಜಾಗಿತ್ತು. ಸರಿಯಾಗಿ ಏಳು ಘಂಟೆಗೆ, ಬೃಂದಾವನ ಅಧ್ಯಕ್ಷೆ ಅರ್ಚನಾ ರವರು "ಅಮೆರಿಕದಲ್ಲಿ ಕನ್ನಡ ಚಲನಚಿತ್ರಗಳು ಚಿತ್ರ ಮಂದಿರದಲ್ಲಿ ಪ್ರಾರಂಭಗೊಂಡು, ಮನೆಗಳಲ್ಲಿ, basement ಗಳಲ್ಲಿ ಸ್ನೇಹಿತರೊಂದಿಗೆ dvd ವೀಕ್ಷಿಸುವುದರ ಜೊತೆ ಮುಂದುವರಿದು, ಚಿತ್ರಮಂದಿರ, Netflix ಮುಂತಾದಲ್ಲಿ ವೀಕ್ಷಿಸಲಪಟ್ಟು, ಇಂದು ಪುನಃ basement ನಲ್ಲಿ ನಿರ್ದೇಶಕರ ಜೊತೆಗೆ ನಮ್ಮ ಬೃಂದಾವನಿಗರು ವೀಕ್ಷಿಸುವ ಸೌಭಾಗ್ಯ ದೊರೆತಿದೆ" ಎಂದು ವಿವರಿಸುತ್ತಾ ಎಲ್ಲರನ್ನೂ ಸ್ವಾಗತಿಸಿದರು. ಏಳು ಗಂಟೆಗೆ ಸರಿಯಾಗಿ ಚಲನಚಿತ್ರ ಆರಂಭವಾಯಿತು. 'Genius ಮುತ್ತ' ಒಂದು ನಿಜಜೀವನ-ಆಧಾರಿತ ಚಿತ್ರ. ಸರಳವಾದ, ಸ್ಪೂರ್ತಿದಾಯಕವಾದ ಕಥಾವಸ್ತು. ತನ್ನ ಅಸಾಧಾರಣ ಬುದ್ಧಿಶಕ್ತಿಯಿಂದ (Genius), ಸಮಯ ಪ್ರಜ್ಞೆಯಿಂದ ಜನರ ಪ್ರೀತಿ-ವಿಶ್ವಾಸಗಳನ್ನು ಗೆದ್ದು, ತಾಯಿಯ ಪ್ರಾಣ ಉಳಿಸಿಕೊಂಡು, ದೊಡ್ಡ ವೈದ್ಯನೇ ಆದ ಒಂದು ಕಡುಬಡವ ಹುಡುಗನ ಕಥೆ. ನಮ್ಮ ನೆಚ್ಚಿನ ಮೊದಲ ಮುತ್ತ, ಚಿನ್ನಾರಿಮುತ್ತ, ವಿಜಯ್ ರಾಘವೇಂದ್ರ ಅವರು ಒಂದು ಗೌರವ ಪಾತ್ರದಲ್ಲಿ ನಟಿಸಿರುವುದು ಇನ್ನೊಂದು ವಿಶೇಷ.

ಚಿತ್ರ ಮುಗಿದ ನಂತರ ನಾಗಿಣಿಭರಣ ಅವರು ಪ್ರೇಕ್ಷಕರ ಕೆಲವು ಪ್ರಶ್ನೆಗಳಿಗೆ ಉತ್ತರ ನೀಡಿದರು. ಸುಮಾರು ೧೫ ದಿನಗಳಲ್ಲಿ, ಕೇವಲ ಬೆರಳೆಣಿಕೆಯಷ್ಟು ಲಕ್ಷ ರೂಪಾಯಿಗಳಲ್ಲಿ ಚಿತ್ರೀಕರಣ ಮುಗಿಸಿದೆ ಎಂದಾಗ ಎಲ್ಲರೂ ಆಶ್ಚರ್ಯಗೊಂಡರು. ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಗುಡುಗು-ಸಿಡಿಲಿನ ಅಬ್ಬರದಂತಿರುವ ಈಗಿನ ಚಿತ್ರಗಳಿಗೆ, ವಿರೋಧ ಧ್ರುವದಲ್ಲಿತ್ತು ಈ ಆಪ್ಯಾಯಮಾನವಾದ ಚಿತ್ರ. ಹೆಂಡತಿಯ ಈ ಮೊದಲ ಪ್ರಯೋಗ ನಾಗಾಭರಣರಿಗೆ ಸಂತಸ ಹಾಗು ಹೆಮ್ಮೆ ತಂದಿರುವುದು ಅವರ ಮುಖದಲ್ಲಿ ಎದ್ದುತೋರುತ್ತಿತ್ತು. ನಾಗಿಣಿಭರಣರವರು ಹೀಗೆ ಇನ್ನು ಹೆಚ್ಚು ಕಲಾತ್ಮಕ ಚಿತ್ರಗಳನ್ನು ಕನ್ನಡಿಗರಿಗೆ ನೀಡುವಂತಾಗಲಿ ಎಂದು ಕಲಾಭಿಮಾನಿಗಳು ಹರಸಿ, ಹೊಗಳಿದರು.

ನಾಗಾಭರಣ ಮತ್ತು ನಾಗಿಣಿಭರಣ ಅವರ ಜೊತೆಗೆ ಎಲ್ಲರೂ ಛಾಯಾಚಿತ್ರಗಳನ್ನು ತೆಗೆಸಿಕೊಂಡರು. ಇಬ್ಬರು ಎಷ್ಟೋ ವರ್ಷಗಳಿಂದ ತಿಳಿದಿರುವ ಸ್ನೇಹಿತರಂತೆ ಅಲ್ಲಿದ್ದ ಜನರಲ್ಲಿ ಮಾತುಕತೆ ನಡೆಸುತ್ತಾ ಬೆರೆತುಕೊಂಡರು.

ಆತಿಥೇಯರ ಹಿತ್ತಲಿನಲ್ಲಿ, ತಂಪಾದ ವಾತಾವರಣದಲ್ಲಿ, ಎಲ್ಲರೂ ಸೇರಿ ತಂದು, ಅಚ್ಚುಕಟ್ಟಾಗಿ ವ್ಯವಸ್ಥೆಮಾಡಿದ್ದ "potluck dinner" ಸಿದ್ಧವಾಗಿತ್ತು. ಭರಣ ಕುಟುಂಬದವರೊಂದಿಗೆ ಹರಟೆ ಹೊಡೆಯುತ್ತಾ, ಹಿನ್ನೆಲೆಯಲ್ಲಿ ಬರುತ್ತಿದ್ದ ನಾಗಾಭರಣ ಅವರ ಚಿತ್ರಗಳ ಜನಪ್ರಿಯ ಹಾಡುಗಳನ್ನು ಕೇಳುತ್ತಾ, ನೆರೆದವರು ರುಚಿಕರವಾದ ರಾತ್ರಿಯೂಟ ಮುಗಿಸಿದರು. ಆ ದಿನದ ವಿಶೇಷ ಅನುಭವ ಎಲ್ಲರಿಗೂ ಬಹಳ ಸಂತೋಷಕೊಟ್ಟಿದ್ದು ಖಚಿತವಾಗಿತ್ತು.







# ಬೃಂದಾವನದಲ್ಲಿಅಪೂರ್ವ ಸಂತೃಪ್ತಿ

**ಕುಸುಮ ಅನಂತಪದ್ಮನಾಭ ರಾವ್** , *ಬೆಂಗಳೂರು*

ಮಾತೃ ದಿನದಂದು 'ಬೃಂದಾವನ'ದ ಸಂತೃಪ್ತಿಯಲ್ಲಿ ಮಾತೆಯರ, ಮಹನೀಯರ, ಭಗಿನಿ ಹಾಗು ಮಕ್ಕಳ ಅಪೂರ್ವ ಭೇಟಿ ನನಗೆ ಅಪಾರ ಸಂತಸವನ್ನುಂಟು ಮಾಡಿತು. ಆ ದಿನದ ಅನುಭವವನ್ನು ಓದುಗರೊಂದಿಗೆ ಹಂಚಿಕೊಳ್ಳ ಬಯಸುತ್ತೇನೆ .

ಮೇ 11 ರಂದು New York ನ WTC ಮೆಮೋರಿಯಲ್ ನಲ್ಲಿ ದೂರದರ್ಶನದ ನಿವೃತ್ತ ನಿರ್ದೇಶಕರಾದ ನಾಡೋಜ ಮಹೇಶ್ ಜೋಶಿ ಹಾಗೂ ಕುಟುಂಬದವರ ಭೇಟಿಯಾಯಿತು. ಪರಸ್ಪರ ಪರಿಚಯವಾದ ನಂತರ ಅವರು ಮರುದಿನ ಅಂದರೆ, ಮೇ 12ರಂದು ಇಲ್ಲಿಯ ನ್ಯೂ ಜೆರ್ಸಿ ರಾಜ್ಯದ ಈಸ್ಟ್ ವಿಂಡ್ಸರ್ ನ ಶ್ರೀಯುತ ಪ್ರಸನ್ನ ಕುಮಾರ್ (Trustee, ಬೃಂದಾವನ ಕನ್ನಡ ಕೂಟ) ಇವರ ಮನೆಗೆ ಒಂದು ಸಂವಾದ ಕಾರ್ಯಕ್ರಮಕ್ಕಾಗಿ ಬರುತ್ತಿರುವುದಾಗಿಯೂ ಅದಕ್ಕೆ ನಾವೂ ಬರಬೇಕೆಂದು ಆತ್ಮೀಯವಾಗಿ ಕರೆಯೋಲೆ ಕೊಟ್ಟರು. ಅದರಂತೆ ಮೇ 12ನೇ ತಾರೀಕು ಭಾನುವಾರ ನಾವು ಸುಮಾರು 11 ಘಂಟೆಗೆ ಶ್ರೀಯುತ ಪ್ರಸನ್ನ ರವರ ಸ್ವಗೃಹ, ಸಂತೃಪ್ತಿಗೆ ಆಗಮಿಸಿದೆವು. ಭಾರತದಿಂದ ಇಪ್ಪತ್ತು ದಿನದ ಹಿಂದಷ್ಟೇ ನ್ಯೂ ಜೆರ್ಸಿಗೆ ಬಂದು ಕೆಲವು ಪ್ರದೇಶಗಳನ್ನು ನೋಡಿದ್ದೆನಷ್ಟೆ. ಬೃಂದಾವನದ ವಾತಾವರಣ ಕಂಡು ಮನಸ್ಸು ಪ್ರಫುಲ್ಲವಾಯಿತು. ಕನ್ನಡ ಪ್ರೇಮಿಗಳ ಹೂನಗೆಯ ಸ್ವಾಗತ ಹಾಗೂ ಪರಿಚಯ ನನ್ನಲ್ಲಿ ಪುಳಕವನ್ನುಂಟು ಮಾಡಿತು.



ಲಘು ಉಪಹಾರದ ನಂತರ ಕಿರು ಚಿತ್ರದ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅದರಲ್ಲಿ ಶ್ರೀಯುತ ಮಹೇಶ್ ಜೋಶಿಯವರ ಪಾತ್ರದ ಬಗ್ಗೆ ಕಿರು ಪರಿಚಯ ಮಾಡಿಕೊಂಡ ನಂತರ ನೆಲಮಹಡಿಯಲ್ಲಿ ನಿಗದಿತ ಕಾರ್ಯಕ್ರಮ ಆರಂಭವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಈಗಿನ ಅಧ್ಯಕ್ಷರಾಗಿರುವ ಸನ್ಮಾನ್ಯ ಮಹೇಶ್ ಜೋಶಿ ಅವರು ನೆರೆದಿದ್ದವರೆಲ್ಲರಿಗೂ ಕನ್ನಡ ಶಾಲು ಹೊದಿಸಿ, ಗೌರವಿಸಿ, ನಮ್ಮಲ್ಲಿನ ಕನ್ನಡದ ಪ್ರೀತಿ ನೂರ್ಮಡಿಗೊಳ್ಳುವಂತೆ ಪ್ರೇರೇಪಿಸಿದರು. ಸಭೆ ಆರಂಭವಾಯಿತು. ಶ್ರೀಯುತ ರಾಘವೇಂದ್ರ ಅವರು ಜೋಶಿಯವರ ಕಿರು ಪರಿಚಯ ಮಾಡಿಸಿ ಆ ದಿನ ತಾಯಂದಿರ ದಿನವೂ ಆದ್ದರಿಂದ ಎಲ್ಲಾ ಮಾತೆಯರನ್ನು ಅಭಿನಂದಿಸಿದರು. ಶ್ರೀಯುತ ಪ್ರಸನ್ನರವರು ಎಲ್ಲರನ್ನೂ ಸ್ವಾಗತಿಸುತ್ತಾ ಬೃಂದಾವನದ ಕನ್ನಡ ಕೂಟದ ಅಧ್ಯಕ್ಷರಾದ ಅರ್ಚನಾ ಆಚಾರ್ಯರವರಿಗೆ ಕಾರ್ಯಕ್ರಮದ ನಿರ್ವಹಣೆಯನ್ನು ಹಸ್ತಾಂತರಿಸಿದರು.



ಊಟವಾದಮೇಲೆ ಜೋಶಿ ದಂಪತಿಗಳಿಗೆ ಬೃಂದಾವನದ ವತಿಯಿಂದ ಸ್ಮರಣಿಕೆಯೊಂದನ್ನು ನೀಡಿ ಬೀಳ್ಕೊಡಲಾಯಿತು. ಈ ರೀತಿ ತಾಯಂದಿರ ದಿನವನ್ನು ಕೂಡ ವಿಶೇಷವಾಗಿ ಆಚರಿಸಿದ ಸಂತಸ ನಮಗೆಲ್ಲರಿಗೂ ಉಂಟಾಯಿತು.
ಬೃಂದಾವನ ಕನ್ನಡ ಕೂಟದ ಬಗ್ಗೆ ಕೇಳಿದ್ದೆವು ಈಗ ಕಣ್ಣಾರೆ ಕಂಡು ಅನುಭವಿಸಿ ಅದರ ಅಚ್ಚುಕಟ್ಟುತನದ ಬಗ್ಗೆ ತಿಳಿದೆವು. ನನ್ನ ಅಮೆರಿಕ ಪ್ರವಾಸದ ಅನುಭವಗಳಲ್ಲಿ ಇದೊಂದು ಹಚ್ಚ ಹಸಿರು ಹಾಗೂ ಅವಿಸ್ಮರಣೀಯ ಕ್ಷಣ.
ಬೃಂದಾವನ ಎಂದೆಂದಿಗೂ ಅಪೂರ್ವ ಸಾಧನೆಗಳನ್ನು ಮಾಡುತ್ತಾ ನಮ್ಮಲ್ಲಿನ ಕನ್ನಡತನವನ್ನು ಜಾಗೃತಗೊಳಿಸಲಿ ಉಳಿಸಲಿ, ಬೆಳಸಲಿ ಕನ್ನಡಿಗರನ್ನು ಇನ್ನೂ ಹೆಚ್ಚು ಸಂತೃಪ್ತಗೊಳಿಸಲೆಂದು ಹಾರೈಸುತ್ತೇನೆ.

ಬೃಂದಾವನದ ಸಂತೃಪ್ತಿಯಲ್ಲಿ ಅಪೂರ್ವ ವಾದ ರಸ ಸಂಜೆ

ತದನಂತರ ಅಲ್ಲೇ ಏರ್ಪಡಿಸಿದ್ದ ಭೋಜನಾನಂತರದ ಸಂಗೀತ ರಸ ಸಂಜೆಗೆ ನಾವೆಲ್ಲರೂ ಅಣಿಯಾದೆವು.

ಶ್ರೀ ಜೋಶಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶ, ಕಾರ್ಯ ವೈಖರಿಯ ಬಗ್ಗೆ ಸ್ಥೂಲ ಪರಿಚಯ ನೀಡುತ್ತಾ ಅನಿವಾಸಿ ಭಾರತೀಯರೆಲ್ಲರಿಗೂ ಪರಿಷತ್ತಿನ ಸದಸ್ಯರಾಗಲು ಕರೆಕೊಟ್ಟರು. ಬೃಂದಾವನ ಕೂಟ ಕನ್ನಡ ಶಾಲೆಯನ್ನು ನಡೆಸುತ್ತಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಕನ್ನಡದ ಕಲಿಕೆ ಕನ್ನಡದಲ್ಲಿಯೇ ಆಗಬೇಕೆಂದು ಸಲಹೆಯಿತ್ತರು. ಈ ವಿಚಾರವಾಗಿ ಶಿಕ್ಷಕರಿಗೆ ಮಾರ್ಗದರ್ಶನವನ್ನೂ ಪುಸ್ತಕಗಳ ಸಹಾಯವನ್ನೂ ನೀಡುವುದಾಗಿ ಭರವಸೆಯಿತ್ತರು. ಡಿಸೆಂಬರ್ ಮಾಹೆಯಲ್ಲಿ ಭಾರತದ ಮಂಡ್ಯದಲ್ಲಿ ನಡೆಯುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲರನ್ನೂ ಆಹ್ವಾನಿಸಿ, ಕಾರ್ಯಕ್ರಮದ ಬಗ್ಗೆಯೂ ತಿಳಿಸಿದರು. ಶ್ರೀಮತಿ ಅರ್ಚನಾ ರವರಿಂದ ವಂದನಾರ್ಪಣೆ, ಹಾಗೂ ಫೋಟೋ ಸೆಶನ್ ನಂತರ ಎಲ್ಲರಿಗೂ ಪಾಟ್ ಲಕ್ ಭೋಜನದ ವ್ಯವಸ್ಥೆಯಾಗಿತ್ತು. ವಿವಿಧ ಪಾಕ ಪ್ರವೀಣರಿಂದ ತಯಾರಾದ ಸಸ್ಯಹಾರಿ ಅಡುಗೆಗಳಲ್ಲಿ ಕನ್ನಡತನ, ಭಾರತೀಯತೆ ಮೆರೆಯುತ್ತಿತ್ತು.





ಬೆಂಗಳೂರಿನಿಂದ ಆಗಮಿಸಿದ್ದ ಶ್ರೀಮತಿ ಹರ್ಷ ರಂಜಿನಿ, ಶ್ರೀ ವರುಣ್ ಹಾಗೂ ಶ್ರೀ ಕೃಷ್ಣ ಆನಂದ್ ರವರ ತಂಡ, 'ಸತ್ಯಂ ಶಿವಂ ಸುಂದರಂ' ಭಕ್ತಿ ಗೀತೆಯೊಂದಿಗೆ ಕಾರ್ಯಕ್ರಮ ಆರಂಭಿಸಿತು. ಮೊದಲ ಪ್ರಾರ್ಥನೆ ಹಾಡಿಗೆ ಕೇಳುಗರು ಮಂತ್ರಮುಗ್ಧರಾಗಿ ಕುಳಿತರು. ನಂತರ ಒಂದರ ಮೇಲೊಂದರಂತೆ ರಂಜಿನಿ ಹಾಗೂ ವರುಣ್ ರವರ ಕಂಠದಲ್ಲಿ ಸುಶ್ರಾವ್ಯವಾದ ಹಿಂದಿ ಹಾಗೂ ಕನ್ನಡ ಹಾಡುಗಳು ಹೊರಹೊಮ್ಮಿದವು. ಗಾನಪ್ರಿಯರ ಬೇಡಿಕೆಗಳಿಗೂ ಸ್ಪಂದಿಸಿ ಸಮಯಕ್ಕೂ ಮೀರಿ ಹಲವಾರು ಗೀತೆಗಳನ್ನು ಗಾಯನ ಮಾಡಿದರು.
ಅವರದ್ದೇ ತಂಡದ ಫ್ಯೂಶನ್, ಕ್ಯಾರಿಯೋಕೆ ಹಾಡುಗಳು ಬಹಳ ಸೊಗಸಾಗಿತ್ತು. ಪಕ್ಕ ವಾದ್ಯದಲ್ಲಿ ಕೃಷ್ಣ ಆನಂದವರು ವಿಜೃಂಭಿಸಿದರು. ಕೃಷ್ಣ ಆನಂದ್ ಹಾಗೂ ವರುಣ್ ರವರ ಜುಗಲ್ ಬಂದಿ ಎಲ್ಲರನ್ನೂ ಸಮ್ಮೋಹನಗೊಳಿಸಿತು. ಅವರು ಹಾಡುಗಾರಿಕೆಯ ಜೊತೆಗೆ ಪ್ರೇಕ್ಷಕರನ್ನು ಸೆಳೆದುಕೊಂಡು ರಂಜಿಸುವ ರೀತಿ ಅಮೋಘವಾಗಿತ್ತು. ಮಧ್ಯೆ ಮಧ್ಯೆ ಸ್ನಾಕ್ಸ್, ಸ್ವೀಟ್ಸ್, ಕಾಫಿ-ಟೀ ಸೇವನೆ ಹೆಚ್ಚಿನ ಬಲ ನೀಡುತ್ತಿತ್ತು. ಕೊನೆಯ 15-20 ನಿಮಿಷಗಳು ಕ್ಲೈಮಾಕ್ಸ್. ಕಿರಿಯ-ಹಿರಿಯರಾದಿಯಾಗಿ ಎಲ್ಲರೂ ನರ್ತಿಸುತ್ತಾ ಭಾಗಿಯಾಗಿ ಕಾರ್ಯಕ್ರಮಕ್ಕೆ ಖಳೆಗಟ್ಟಿಸಿದರು. ಹೆಚ್ಚಿನ ಖುಷಿ, ಸಂತೋಷ, ಪುಳಕ ಮೇಳೈಸಿತು. ಇನ್ನೂ ಹಲವಾರು ಘಂಟೆಗಳು ಹಾಡಿದರೂ ಕೇಳುವ ಉತ್ಸಾಹ ಎಲ್ಲರಲ್ಲಿತ್ತು. ಆದರೆ ಸಮಯ ಕೇಳಬೇಕಲ್ಲ; ಹಾಡುಗರಿಗೂ ವಿಶ್ರಾಂತಿ ಬೇಕಲ್ಲ; ಅಂತೆಯೇ ಗಾಯಕರನ್ನು ಅಭಿನಂದಿಸಿ ಸ್ಮರಣಿಕೆಯನ್ನು ನೀಡುವುದರೊಂದಿಗೆ ರಸ ಸಂಜೆ ಮುಕ್ತಾಯವಾಯಿತು. ಬೃಂದಾವನ ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಏರ್ಪಡಿಸಲಿ ಎಂಬುದೇ ಎಲ್ಲರ ಆಶಯ. ಈ ಸಮಯದಲ್ಲಿ ಒಂದು ಹಾಡು ನೆನಪಿಗೆ ಬರುತ್ತದೆ "ಬೃಂದಾವನಕೆ ಹಾಡನ್ನು ಕೇಳಲು ಹೋಗುವ ಬಾರೆ ಬೇಗ ಸಖೀ ..."



# ಬೃಂದಾವನ ಪಿಕ್ನಿಕ್

**ರಶ್ಮಿ ಅರ್ಜುನ್**, *ನ್ಯೂಜೆರ್ಸಿ*

ನಾನು ಕಳೆದ ೭ ವರ್ಷಗಳಿಂದ ಅಮೇರಿಕಾದಲ್ಲಿ ವಾಸಿಸುತ್ತಿದ್ದೇನೆ. ಅನೇಕ ಸ್ನೇಹಿತರು ಇದ್ದರೂ, ಏನೋ ಕೊರತೆಯಂತೆ ಅನಿಸುತ್ತಿತ್ತು - "ನಮ್ಮ ಕನ್ನಡಿಗ" ಸಮೂಹವನ್ನೇ ಕಳೆದುಕೊಂಡಂತೆ! ನಮ್ಮ ಮಾತೃಭಾಷೆಯ ಹಿತ, ನಮ್ಮ ಸಂಸ್ಕೃತಿಯ ರುಚಿ ಮತ್ತು ನಮ್ಮ ಸಮುದಾಯದ ಸಹಭಾಗಿತ್ವವವು ನನಗೆ ಬೇಕೆನಿಸುತ್ತಿತ್ತು. ಆಮೇಲೆ, ಒಂದು ಧನಾಭರವಂತೆ, ಫೇಸ್ಬುಕ್‌ನಲ್ಲಿ "ಬೃಂದಾವನ ಕನ್ನಡ ಕೂಟ" ಎಂಬ ಗುಂಪನ್ನು ಕಂಡುಬಂದೆ! ಅವರ ಬೇಸಿಗೆ ಪಿಕ್ನಿಕ್ ಆಹ್ವಾನವನ್ನು ನೋಡಿ ನನಗೆ ಸಂತೋಷವಾಯಿತು! ನನ್ನ ಹೆಂಡತಿ, ತಾಯಿ, ಮತ್ತು ೧೮ ತಿಂಗಳ ಮಗಳನ್ನು ಕನ್ನಡದ ರಸದೌತಣಕ್ಕೆ ಕರೆದೊಯ್ದೆ.



ಬೃಂದಾವನ ಅಪೂರ್ವ ತಂಡದ ಅಧ್ಯಕ್ಷೆ ಅರ್ಚನಾ, ಸುಹಾಸ್ ಪ್ರಸನ್ನ ಕುಮಾರ್ ನಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಎಲ್ಲರೂ ಸೇರಿ, ಅದ್ಭುತ ಕೆಲಸ ಮಾಡಿದರು. ಬೃಂದಾವನ ಅಪೂರ್ವ ತಂಡದ ನಿರ್ದೇಶಕರು ಹೊಸಬರುಗಳಾದ ನಮ್ಮನ್ನು ತೆರೆದ ತೋಳುಗಳಿಂದ ಸ್ವಾಗತಿಸಿದರು ಮತ್ತು ನಮ್ಮ ಕನ್ನಡ ಸಮುದಾಯದೊಂದಿಗೆ ಸಂಪರ್ಕಿಸಲು ಅನೇಕ ಉಪಯುಕ್ತವಾದ ಸಂಪನ್ಮೂಲಗಳನ್ನು ಹಂಚಿಕೊಂಡರು. ಆಹಾರ ಹೇಗಿತ್ತು ಗೊತ್ತಾ?! ದಕ್ಷಿಣ ಭಾರತೀಯ ತಿನಿಸುಗಳು, ತಂಪಾದ ಪಾನೀಯಗಳು ಮತ್ತು ಅನೇಕ ತಿಂಡಿಗಳು - ಚುರುಮುರಿ, ಸಮೋಸಾ, ಆಮ್ ಪನ್ನಾ, ಮಜ್ಜಿಗೆ, ವಡ ಪಾವ್, ಕೇಕ್, ಐಸ್ ಕ್ರೀಂ - ನಮ್ಮ ರುಚಿಪಟಗಳನ್ನು ಕುಣಿಸಿದವು!



ನನ್ನ ತಾಯಿ ಚೌಕ-ಬಾರಾ ಆಟದಲ್ಲಿ ಭಾಗವಹಿಸಿ ಮೊದಲನೇ ಸ್ಥಾನ ಗೆದ್ದರು. ನನ್ನ ಸಣ್ಣ ಮಗಳು, ಗುಂಪಿನಲ್ಲಿರುವ ಕಿರಿಯ ಮಕ್ಕಳಲ್ಲಿ ಒಬ್ಬಳಾಗಿದ್ದರೂ ಕೂಡ, ಎರಡು ಪದಕಗಳನ್ನು ಗೆದ್ದಳು! - "ರನ್ ಟು ಮಾಮಿ" ಮತ್ತು "ಬಕೆಟ್ಟಿಗೆ ಚೆಂಡು". ನಾವು ಎಲ್ಲರ ಜೊತೆ ಸೇರಿ ಕೇಕ್, ಐಸ್ ಕ್ರೀಂ, ಮತ್ತು ಬಹುಮಾನ ವಿತರಣೆ ಸಮಾರಂಭವನ್ನು ಆಚರಿಸಿದೇವು - ಅಲ್ಲಿ ನನ್ನ ತಾಯಿ ಮುಖ್ಯ ಅತಿಥಿಗಳಲ್ಲಿ ಒಬ್ಬರು!

ನಾವು ಹೊಸ ಸ್ನೇಹಿತರು, ಮತ್ತು ಅಂತರಂಗದ ನೆನಪುಗಳೊಟ್ಟಿಗೆ ಮನೆಗೆ ಸಂತೋಷದಿಂದ ವಾಪಾಸಾದೆವು. ಬೃಂದಾವನ ಕನ್ನಡ ಕೂಟ - ನಾವು ಮುಂದಿನ ಕಾರ್ಯಕ್ರಮವನ್ನು ಬಹಳ ಆಶಾಭಾವದಿಂದ ಎದುರು ನೋಡುತ್ತಿದ್ದೇವೆ!





# ಬರಹಗಳು





# ಹೆಣ್ಣು ಎಂದರೆ ತಾಯಿಯೋ, ಮಾಯೆಯೋ?

**ಸರಿತಾ ನವಲಿ**, *ನ್ಯೂಜೆರ್ಸಿ*

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಆಚರಿಸಲ್ಪಡುತ್ತಿರುವ 'ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ' ಮತ್ತು 'ವಿಶ್ವ ಅಮ್ಮಂದಿರ ದಿನಾಚರಣೆ'ಯ ಬಗ್ಗೆ ಯೋಚಿಸಿದಾಗ 'ಹೆಣ್ಣು' ಎಂದರೆ ಯಾರು ಎನ್ನುವ ಪ್ರಶ್ನೆ ನನ್ನ ಮನಸ್ಸಿನಲ್ಲಿ ಮೂಡುತ್ತದೆ. ಈ ಪ್ರಶ್ನೆಗೆ ಏನಂದು ಉತ್ತರಿಸಿಬಹುದು? ವೈಜ್ಞಾನಿಕವಾಗಿ, ವಂಶವಾಹಿನಿಯ XX ಕ್ರೋಮೊಸೋಮಗಳನ್ನು ಹೊಂದಿರುವ ಮಾನವ ಜೀವವೆನ್ನಬಹುದೇ? ಈ ವಂಶವಾಹಿನಿಯ ಗುಣಧರ್ಮಗಳಿಂದ ತಾಯ್ತನಕ್ಕೆ ಪೂರಕವಾಗುವ ಅಂಗಾಂಗಗಳನ್ನು ಪಡೆದು ಜನಿಸುವ ಜೀವವೆನ್ನಬಹುದೇ? ಜೀವವಿಜ್ಞಾನವನ್ನು ಓದಿರುವ ನನಗೆ ಅಲ್ಲಿನ ಕ್ರಮದಂತೆ 'ಹೆಣ್ಣು'(Female) ಎಂದು ಗುರುತಿಸಲು ಈ ಮಾಹಿತಿಯನ್ನು ಕೊಡಬಹುದು. ಆದರೆ ಹೆಣ್ಣಿನ ಅಸ್ಮಿತೆ ಇಷ್ಟಕ್ಕೇ ಸೀಮಿತವಾಗಿದೆಯೆ? ತನ್ನ ಜೀವನದಲ್ಲಿ ತಾಯಿಯಾಗಿ, ಮಗಳಾಗಿ, ಗೆಳತಿಯಾಗಿ, ಬಂಧುವಾಗಿ, ಬಾಳಸಂಗಾತಿಯಾಗಿ ಹಲವಾರು ರೂಪಗಳನ್ನು ಪಡೆಯುವ 'ಹೆಣ್ಣು' ಎಂದರೆ ಯಾರು? ಯೋಚಿಸುತ್ತಾ ಹೋದಂತೆ ಈ ಎಲ್ಲ ಸ್ಥಾನಮಾನಗಳು ಮನುಷ್ಯ ಸಂಬಂಧಗಳಿಂದ ಪಡೆದವುಗಳಾಗಿವೆ ಎಂದು ತಿಳಿಯುತ್ತದೆ. ಕನ್ನಡ ಸಾಹಿತ್ಯದ ಓದುಗಳಾಗಿ, ಭಾವನಾತ್ಮಕವಾಗಿ ಚಿಂತನೆ ಮಾಡುತ್ತ 'ಹೆಣ್ಣು' ಎಂದರೆ ಯಾರು ಎನ್ನುವ ಪ್ರಶ್ನೆಗೆ ಕನ್ನಡದ ಕವಿಗಳ ಕವನಗಳಲ್ಲಿ ಹಲವು ಬಗೆಯ ಉತ್ತರಗಳನ್ನು ನಾನು ಕಂಡುಕೊಂಡೆ.

"ಪರಮ ಸಂಪೂರ್ಣತೆಯೆ ಕೋಮಲತೆಯಿಂದೊಡಗೂಡಿ ಸೌಂದರ್ಯರೂಪದಿಂದಿಳೆಗೆ ಬರಲದೆ ಹೆಣ್ಣು" ಎನ್ನುತ್ತಾರೆ ರಾಷ್ಟ್ರಕವಿ ಕುವೆಂಪು. ಜೀವನದ ಸಂಪೂರ್ಣತೆಯನ್ನು ಪಡೆಯುವ ಜೀವವೇ ಹೆಣ್ಣು ಎನ್ನುವುದು ಕವಿಯ ಅಭಿಪ್ರಾಯವಾಗಿದೆ. ಒಂದು ಜೀವಕ್ಕೆ ಜೀವ ಮತ್ತು ಜೀವನ ಕೊಡುವ ಜನನಿಯಾಗಿ ಜೀವನದ ಸಂಪೂರ್ಣತೆಯನ್ನು ಪಡೆಯಬಹುದೇ? "ಹೆಣ್ಣು ಎನ್ನುವ ಮಾತು ತಾಯಿ ಎನ್ನುವ ಮಾತು ಎರಡಲ್ಲ ಒಂದು" ಎನ್ನುವುದು ವರಕವಿ ದ.ರಾ.ಬೇಂದ್ರೆಯವರ ಮಾತು. ಹೆಣ್ಣನ್ನು ತಾಯಿಯಾಗಿ ಕಾಣುವ ಕವಿಯ ನುಡಿಗಳನ್ನು ಕೇಳಿದಾಗ ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ಕನ್ನಡ ವಾಹಿನಿಯಲ್ಲಿ ಆಗಾಗ ಪ್ರಸಾರವಾಗುತ್ತಿದ್ದ ಗೀತದೃಶ್ಯವೊಂದು ನೆನಪಾಗುತ್ತದೆ. ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿರುವ ಬಾಣಂತಿ ತೊಟ್ಟಿಲಲ್ಲಿನ ಹಸುಗೂಸನ್ನು ನೋಡಲು ಬಂದ ತನ್ನ ಗಂಡನಿಗೆ ನೋವಿನ ದನಿಯಿಂದ "ಹೆಣ್ಣು ಮಗು" ಎಂದು ಹೇಳುತ್ತಾಳೆ. ಆತ ಒಂದು ಕ್ಷಣ ಮೌನ ತಾಳುತ್ತಾನೆ, ಯೋಚನೆಗೀಡಾಗುತ್ತಾನೆ. ಆತನ ಯೋಚನೆಯಲ್ಲಿ ಅವನು ಚಿಕ್ಕ ಮಗುವಾಗಿದ್ದಾಗ ಸಾಕಿ ಸಲಹಿದ ತಾಯಿ, ಅನಾರೋಗ್ಯದಲ್ಲಿ ಆರೈಕೆ ಮಾಡಿದ ಪತ್ನಿಯ ಚಿತ್ರಣಗಳು ಮೂಡುತ್ತವೆ. ಅದನ್ನೆಲ್ಲ ನೆನಸಿಕೊಂಡ ಆತ ತೊಟ್ಟಿಲಲ್ಲಿನ ಹೆಣ್ಣು ಮಗುವನ್ನು ನೋಡಿ ಮುಗುಳುನಗೆ ನಕ್ಕು ಸಂತೋಷವ್ಯಕ್ತಪಡಿಸುತ್ತಾನೆ. ಈ ದೃಶ್ಯಕ್ಕೆ ಹಿನ್ನೆಲೆಯಲ್ಲಿ ಹಾಡೊಂದು ಪ್ರಸಾರವಾಗುತ್ತಿತ್ತು. "ಹೆಣ್ಣಲ್ಲವೆ ನಮ್ಮನೆಲ್ಲ ಪಡೆದ ತಾಯಿ, ಹೆಣ್ಣಲ್ಲವೆ ನಮ್ಮನೆಲ್ಲ ಪೊರೆವವಳು...". ನಾಲ್ಕುನೂರು ವರ್ಷಗಳ ಹಿಂದೆಯೇ ಹೆಣ್ಣಿನ ಸರ್ವಶ್ರೇಷ್ಠತೆಯನ್ನು ಎತ್ತಿಹಿಡಿದ ಕವಯಿತ್ರಿ ಸಂಚಿ ಹೊನಮ್ಮ ಬರೆದ ಸಾಲುಗಳಿವು. ಹೆಣ್ಣನ್ನು ಕಾಣುವ ಕಣ್ಣು ಹೇಗಿರಬೇಕೆಂದು ಬರೆಯುವ ಪ್ರೊ. ಎಂ.ವಿ.ಸೀತಾರಾಮಯ್ಯರವರು ತಮ್ಮ ಕವನದಲ್ಲಿ "ಹೆಂಗಳನೆಲ್ಲ ತನಗೆ ಹಾಲೂಡಿಸಿದ ತಾಯಿಯಂತೆಯೆ ಕಾಂಬ ತಳಿವ ಕಣ್ಣು" ಎನ್ನುತ್ತಾರೆ. "ಹೆಣ್ಣೆಂದರೇನು ಸ್ವಾಮಿ, ಎಷ್ಟೆಲ್ಲ ತಿಳಿದವರು ಇಷ್ಟು ಹೇಳಿರಿ ಸಾಕು, ಹೆಣ್ಣೆಂದರೇನು ಸ್ವಾಮಿ? " ಎಂದು ಕೇಳುವ ಕವಿ ಚಂದ್ರಶೇಖರ ಕಂಬಾರರು, "ಹೆಣ್ಣಿನ ಕಿರಿಕಿರಿ, ಗದ್ದಲದ ದಿನಚರಿ, ಸಂಸಾರವೆಂದರೆ ಇದೆ ಅಲ್ಲವೆ, ಸಂಸಾರವಿಲ್ಲದೆ ಮಾನವ ಜನ್ಮಕ್ಕೆ ಕೊಂಚವಾದರೂ ಅರ್ಥ ಇದೆಯೇ" ಎಂದು ಪ್ರಶ್ನಿಸುತ್ತಲೇ ಹೆಣ್ಣು ಎಂದರೆ ಸಂಸಾರ, ಸಂಸಾರವಿಲ್ಲದೇ ಮನುಷ್ಯ ಜೀವನಕ್ಕೆ ಅರ್ಥವಿಲ್ಲ ಎಂದು ತಿಳಿಸಿ ಹೇಳುತ್ತಾರೆ. ಈ ಎಲ್ಲ ಕವನಗಳ ಸಾಲುಗಳನ್ನು ಮನನ ಮಾಡಿಕೊಳ್ಳುತ್ತ ಹೋದಂತೆ ಹೆಣ್ಣೆಂದರೆ ತಾಯಿ ಎನ್ನುವ ಅರಿವು ಮೂಡುತ್ತದೆ.

ಇನ್ನೂ ಹಲವು ಕವನಗಳನ್ನು ಓದುತ್ತ ಹೋದಾಗ ಕಂಡ ಕವಿ ಗೋಪಾಲಕೃಷ್ಣ ಅಡಿಗರ "ಹೆಣ್ಣು ಜೀವದ ಆಧಿ, ಸಾವಿನಾದಿ" ಎನ್ನುವ ಸಾಲು ನನ್ನ ಯೋಚನೆಯ ಲಹರಿಯನ್ನು ಬದಲಾಯಿಸಿತ್ತು. ಹೆಣ್ಣು ಎಂದರೆ ಜೀವದ ಮಾನಸಿಕ ತೊಂದರೆ, ಸಾವಿಗೆ ಮೂಲ ಎನ್ನುವ ಈ ಮಾತು ಹೆಣ್ಣು ಮಾಯೆಯೇ ಎಂದು ಪ್ರಶ್ನಿಸಿಕೊಳ್ಳುವಂತೆ ಮಾಡಿತ್ತು. "ಹೆಣ್ಣು ಮಾಯೆಯೇ, ಹೆಣ್ಣು ಮಾಯೆಯಲ್ಲ... ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ" ಎಂದು ಅಲ್ಲಮ ಪ್ರಭು ತಮ್ಮ ವಚನದಲ್ಲಿ ಹೇಳಿರುವುದನ್ನು ತಿಳಿದಾಗ ಹೆಣ್ಣು ತಾಯಿಯೋ, ಮಾಯೆಯೋ ಎನ್ನುವ ಪ್ರಶ್ನೆಯೇ ಅಚ್ಚರಿ ಮೂಡಿಸಿತ್ತು. ಹೆಣ್ಣನ್ನು ಅರಿಯದವರು ಆಕೆಯನ್ನು ಮಾಯೆ ಎನ್ನುತ್ತಾರೆ ಎನ್ನುವುದು ಕವಿ ಕೆ.ಎಸ್.ನರಸಿಂಹಸ್ವಾಮಿಯವರ ಮಾತು. "ತಾಯಿ ದೇವರು ಎಂದು ಹಾಡಿದವು ತಾರೆಗಳು, ಆಕೆ ಮಾಯೆ ಎಂದರ್ ಅರಿಯದವರು" ಎನ್ನುವ ಅವರ ಕವಿನುಡಿ ಹೆಣ್ಣನ್ನು ಅರಿಯುತ್ತ ಹೋದಂತೆ ಆಕೆ ಮಾಯೆಯಲ್ಲ ಎನ್ನುವುದನ್ನು ತಿಳಿಸುತ್ತದೆ. ಹೆಣ್ಣಿನ ಉದಾತ್ತ ಗುಣವನ್ನು ಉದಾಹರಣೆಯಾಗಿ ಕವಿ ಕೆ.ಎಸ್.ನಿಸಾರ ಅಹಮದರವರು ತಮ್ಮ 'ಶ್ರೀ ಪುರಂದರದಾಸರು' ಕವನದಲ್ಲಿ ಬರೆದಿದ್ದಾರೆ. "ನತ್ತು ಕೊಟ್ಟಳು ಹರಿಗೆ, ಅತ್ತು ಬಿಟ್ಟಳು ಮರೆಗೆ, ಪತಿಯನಿತ್ತಳು ಕೊಡುಗೆ ದೇವನಡಿಗೆ, ಹೆಣ್ಣು ಮಾಯೆಯ ನೆರಳೆ? ಹೆಣ್ಣು ಗಂಡಿನ ಮರುಳೆ? ಹೇಳಲೆದೆಯುಂಟೇನು ಹೀಗವಳಿಗೆ?" ಇಂಥ ತ್ಯಾಗಮಯಿಯಾದ ಹೆಣ್ಣನ್ನು ಮಾಯೆ ಎನ್ನಲು ಧೈರ್ಯವಿರುವುದೆ ಎಂದು ಕವಿ ಪ್ರಶ್ನಿಸುತ್ತಾರೆ. ಇಂತಹ ಹಲವಾರು ಉದಾಹರಣೆಗಳನ್ನು ನಾವು ಬದುಕಿನಲ್ಲಿ ಕಾಣುತ್ತ ಹೆಣ್ಣು ಮಾಯೆಯಲ್ಲ ಎಂದು ತಿಳಿಯಬಹುದು.

ಹೆಣ್ಣನ್ನು ಶಕ್ತಿಸ್ವರೂಪಿಯಾಗಿ, ಜ್ಞಾನದೇವತೆಯಾಗಿ, ಸಮೃದ್ಧಿಯ ಸಂಕೇತವಾಗಿ ಪೂಜಿಸಲ್ಪಡುವುದನ್ನು ನಾವು ಕಾಣುತ್ತೇವೆ. ಇದರೊಂದಿಗೆ ಇಂದಿನ ಮಹಿಳೆ ಎಲ್ಲ ಕ್ಷೇತ್ರಗಳಲ್ಲಿ ಯಶಸ್ಸನ್ನು ಗಳಿಸಿ ಸಾಧಕಿಯೆನಿಸಿಕೊಂಡಿರುವುದನ್ನೂ ಕಾಣುತ್ತೇವೆ. ಯಾವುದೇ ಕ್ಷೇತ್ರದಲ್ಲಿ ಗಳಿಸಿದ ಯಶಸ್ಸಿನೊಂದಿಗೆ ಪ್ರಕೃತಿದತ್ತವಾಗಿ ಪಡೆದ ತಾಯ್ತನ, ವಾತ್ಸಲ್ಯ, ಮಮತೆ ಎಂದಿಗೂ ಹೆಣ್ಣಿಗೆ ವಿಶೇಷತೆಗಳಾಗಿವೆ. ಇದು ಆಕೆ ಜನ್ಮದಿಂದಲೇ ಪಡೆಯುವ ವೈಶಿಷ್ಟ್ಯವಾಗಿದೆ. ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರು ತಮ್ಮ 'ಸ್ತ್ರೀ' ಕವನದಲ್ಲಿ ಒಂದು ಜೀವಕ್ಕೆ ಜೀವನ ಕೊಡುವ ವಾತ್ಸಲ್ಯಮಯಿಯೇ ಹೆಣ್ಣು ಎಂದು ಹೇಳುತ್ತಾರೆ. ಪ್ರಕೃತಿ ಮತ್ತು ಹೆಣ್ಣಿನ ತಾಯ್ತನದ ವಾತ್ಸಲ್ಯವನ್ನು ಕವಿ ಹೋಲಿಸುತ್ತಾರೆ. "ಮನೆಮನೆಯಲಿ ದೀಪ ಮುಡಿಸಿ, ಹೊತ್ತು ಹೊತ್ತಿಗನ್ನ ಉಣಿಸಿ, ತಂದೆ-ಮಗುವ ತಬ್ಬಿದಾಕೆ...ನಿನಗೆ ಬೇರೆ ಹೆಸರು ಬೇಕೆ ಸ್ತ್ರೀ ಎಂದರಷ್ಟೇ ಸಾಕೆ?" ಎಂದು ಪ್ರಶ್ನಿಸುವ ಕವಿಯ ನುಡಿಗಳಲ್ಲಿ ನನ್ನ ಪ್ರಶ್ನೆಗೂ ಉತ್ತರ ಸಿಕ್ಕಿತ್ತು.

# ಪ್ರಜ್ವಲ



**ಸುಮ ನಾಗರಾಜ,** *ನ್ಯೂಜೆರ್ಸಿ*

2024ರ ಮಾರ್ಚ್ 8 ರಂದು ನ್ಯೂ ಜೆರ್ಸಿಯ “ಬೃಂದಾವನ ಕನ್ನಡ ಕೂಟ - ಅಪೂರ್ವ ತಂಡ”ದ ವತಿಯಿಂದ, “ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ” ಅಂಗವಾಗಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮವು ಅಂತರಂಗದ ಮೂರನೇ ಕಣ್ಣನ್ನು ತೆರೆಸುವ ಪ್ರಯತ್ನವೇ ಎಂದು ಹೇಳಿದರೆ ತಪ್ಪಾಗಲಾರದು. ಕಾರ್ಯಕ್ರಮದ ವಿಶೇಷ ಆಹ್ವಾನಿತರು ಪದ್ಮಶ್ರೀ ಪುರಸ್ಕೃತ, ಶ್ರೀಮತಿ ಸುನಿತಾ ಕೃಷ್ಣನ್ ರವರು. Zoom ಮುಖೇನ ನಡೆದ ಈ ಕಾರ್ಯಕ್ರಮದಲ್ಲಿ, ಬೃಂದಾವನ ಸಂಘದ ಅಧ್ಯಕ್ಷೆ ಶ್ರೀಮತಿ ಅರ್ಚನಾ ಆಚಾರ್ಯ ಅವರು ಸರ್ವರಿಗೂ ಸ್ವಾಗತವನ್ನು ಕೋರಿ, ಮುಖ್ಯಅಥಿತಿ ಸುನೀತಾ ಕೃಷ್ಣನ್ ಅವರನ್ನು ಪರಿಚಯಿಸಿದರು. ಕಾರ್ಯಕ್ರಮದ ನಿರೂಪಕಿಯಾದ ಕುಮಾರಿ ಅಭೀಷ್ಟ ತಂತ್ರಿಯವರು ಸುನೀತಾರವರ ಸಂದರ್ಶನವನ್ನು ಸುಂದರವಾಗಿ ನಡೆಸಿಕೊಟ್ಟರು.

ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಏನಾದರು ಸಾಧಿಸಬೇಕು, ಸಾಧಿಸುತ್ತೇನೆ, ಸಾಧಿಸಲು ಸಾಧ್ಯವೇ? ಎಂಬ ಚಿಂತನೆಯಲ್ಲಿ ಕಾಲ ಕಳೆದಿರುತ್ತಾರೆ. ಆದರೆ ಕೆಲವರು ಆ ಸಾಧನೆಯ ಹಾದಿಯ ಕಲ್ಲು ಮುಳ್ಳುಗಳನ್ನು ಮೆಟ್ಟಿ ನಿರಂತರ ಶ್ರಮದಿಂದ ಗುರಿ ಮುಟ್ಟುತ್ತಾರೆ. ಅಂತಹ ಸಾಧಕರಲ್ಲಿ ಸುನಿತಾ ರವರು ಒಬ್ಬರು.  ಇವರು ಸಾಮಾಜಿಕ ಕಾರ್ಯಕರ್ತೆ ಹಾಗು ಪ್ರಜ್ವಲ ಎಂಬ ಸರ್ಕಾರೇತರ ಸಂಘಸಂಸ್ಥೆಯನ್ನು ನಡೆಸುತ್ತಿದ್ದಾರೆ. ಈ ಸಂಸ್ಥೆಯ ಮೂಲ ಉದ್ದೇಶ ಮಾನವ ಕಳ್ಳಸಾಗಣೆ, ವೇಶ್ಯಾವಾಟಿಕೆ, ವರದಕ್ಷಿಣೆ ಕಿರುಕುಳ, ಮುಂತಾದ ಹೀನಕೃತ್ಯಗಳ ಶೋಷಣೆಗೆ ಒಳಗಾದವರ ಸಂರಕ್ಷಣೆ ಹಾಗು ಇದರ ಬಗ್ಗೆ ಸಮಾಜದಲ್ಲಿ ನಿರಂತರವಾಗಿ ಅರಿವು ಮೂಡಿಸುವುದು.

ಸುನಿತಾರವರ ಜನ್ಮಭೂಮಿ ಬೆಂಗಳೂರು  ಹಾಗು ಇವರ ಕರ್ಮಭೂಮಿ ಹೈದರಾಬಾದ್. ಇವರು ಕೈಗೊಂಡಂತಹ ಕೆಲಸಕಾರ್ಯಗಳ  ಕಿರು ಪರಿಚಯವಿಲ್ಲಿದೆ.

ಹೈದರಾಬಾದಿನ ಕೊಳೆಗೇರಿ ನಿವಾಸಿಗರಿಗೆ ವಸತಿ ನಿರ್ಮಾಣದ ಹೋರಾಟದಲ್ಲಿ ಭಾಗಿಯಾಗಿದ್ದರು. ವೇಶ್ಯಾವಾಟಿಕೆಯಿಂದ ನಿರಾಶ್ರಿತರಾದ ಸಾವಿರಾರು ಮಹಿಳೆಯರ ಸಂರಕ್ಷಣೆ ಹಾಗು ಅವರ ಮುಂದಿನ ಪೀಳಿಗೆಯವರು ಇಂತಹ ಸಂಕಷ್ಟದಲ್ಲಿ ಸಿಲುಕದಂತೆ ಮನ:ಪರಿವರ್ತಿಸಲು ಶ್ರಮಿಸಿದ್ದಾರೆ. ಈ ನಿಟ್ಟಿನಲ್ಲಿ ಅವರು ತಮ್ಮ ಒಡವೆಗಳು ಮತ್ತು ಮನೆಯ ಪದಾರ್ಥಗಳನ್ನು ಮಾರುವ ಸಂದರ್ಭ ಬಂದರೂ ಧೃತಿಗೆಡದೆ ಪ್ರಜ್ವಲಕ್ಕಾಗಿ ಶ್ರಮಿಸಿದ್ದಾರೆ. ಸುನಿತಾರವರು ಮಹಿಳಾ ಮತ್ತು ಮಕ್ಕಳ ಶೋಷಣೆ ಹಾಗು ಮಾನವ ಕಳ್ಳ ಸಾಗಣೆಯ ಕುರಿತು ನಿರೂಪಿಸಿದ, ನಿರ್ಭಯ ನೀತಿಯನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಪೊಲೀಸ್ ಹಾಗು ಆರೋಗ್ಯ ಇಲಾಖೆಯವರು ಅಳವಡಿಸಿಕೊಂಡಿದ್ದಾರೆ.

ಸುನಿತಾರವರು ತಮ್ಮ ಅನುಭವದ ಮೂಲಕ ಹೇಳುವಂತೆ, ಮಾನವ ಕಳ್ಳ ಸಾಗಣೆ ತಡೆಗಟ್ಟುವ ನಿಟ್ಟಿನಲ್ಲಿ ಅವರು ಕೈಗೊಂಡಂತಹ ದಾಳಿಗಳು ಹಲವು. ಇವರ ಅನಿಸಿಕೆಯಂತೆ ಯಾವುದೇ ಒಂದು ನಿರ್ಧಾರಿತ ರಾಜ್ಯ ನೀತಿಗಳು ಇಲ್ಲದೆ ಇರುವಾಗ, ಸ್ವಯಂಸೇವಾ ಕಾರ್ಯಗಳು ಅಲ್ಪಮಟ್ಟದ್ದಾಗಿರುತ್ತದೆ. ಹೀಗಾಗಿ ಅವರು ತಮ್ಮ ಈ ಹೋರಾಟಕ್ಕೆ ಸಹಾಯವಾಗಲು ಹಲವು ಪೊಲೀಸ್ ಇಲಾಖೆಗಳು, ಮುಖ್ಯವಾಗಿ ಮಹಿಳಾ ಸಂರಕ್ಷಣೆ ವಿಭಾಗ, ಮಾನವ ಸಾಗಾಣಿಕೆ ವಿರೋಧಿ ವಿಭಾಗಗಳ ಸಹಕಾರಗಳನ್ನು ಪಡೆದಿರುತ್ತಾರೆ.

ಸುನಿತಾರವರ  ಶ್ರಮ, ಮಾಸದ ಬರವಸೆ ಹಾಗು ನಿರಂತರ ಹೋರಾಟದ ಫಲವಾಗಿ ಇದುವರೆವಿಗೂ ಅವರ ಪ್ರಜ್ವಲ ಸಂಸ್ಥೆಯಿಂದ ಮಾನವ ಕಳ್ಳ ಸಾಗಾಣೆಯನ್ನು ತಡೆಗಟ್ಟಿ ಹನ್ನೆರಡು ಸಾವಿರಕ್ಕೂ ಹೆಚ್ಚು ಮಂದಿಗೆ ಆಶ್ರಯ ಹಾಗು ರಕ್ಷಣೆಯನ್ನು ನೀಡಿದ್ದಾರೆ. ಎಷ್ಟೋ ಅಪ್ರಾಪ್ತ ಹೆಣ್ಣು ಮಕ್ಕಳು ವೈಶ್ಯಾವಾಟಿಕೆಯ ಸುಳಿಯಲ್ಲಿ ಸಿಲುಕದಂತೆ ಸಹಾಯ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಅವರ ಮಾರ್ಗವು ಸುಗಮವಾದದ್ದಲ್ಲ. ಬಂದ ಅಡಚಣೆಗಳನ್ನು ಧೃತಿಗುಂದದೆ ಎದುರಿಸಿದ ರೀತಿ ನಿಜಕ್ಕೂ ರೋಮಾಂಚನೀಯ ಹಾಗೂ ಪ್ರಶಂಸನೀಯ. ಪ್ರತಿಯೊಬ್ಬರಿಗೂ ಪ್ರೇರಿತವಾಗುವಂತ ವ್ಯಕ್ತಿತ್ವನ್ನು ನಮ್ಮೆಲ್ಲರಿಗೂ ಪರಿಚಯಿಸಿ ಸಂದರ್ಶಿಸಿದ ನಮ್ಮ ಬೃಂದಾವನದ ಅಪೂರ್ವ ತಂಡಕ್ಕೆ ನಾವು ಚಿರಋಣಿಗಳು.

ಈ ಲೇಖನದ ಆಧಾರ: ಸುನಿತಾರವರ ಸಂದರ್ಶನದ ಆಯ್ದಭಾಗಗಳು ಮತ್ತು ಅವರ ಬಗೆಗಿನ ಲೇಖನಗಳು.

ಪೋಷಕರಾಗಿ, ಪಾಲಕರಾಗಿ ಮಕ್ಕಳಿಗೆ ನಾವು ಮಾಡುವ ಹಲವಾರು ಕರ್ತವ್ಯಗಳಲ್ಲಿ ಬಹು ಮುಖ್ಯವಾಗಿ ಮಾಡಬೇಕಾದುದು ಏನೆಂದರೆ, ಮಾನವ ಶೋಷಣೆ, ಅದರಿಂದಾಗುವ ಪರಿಣಾಮಗಳು, ಎಚ್ಚರಿಕೆಯ ಕ್ರಮಗಳು ,ಯಾವುದೇ ಅಂಜಿಕೆ ಅಳುಕಿಲ್ಲದೆ ಮಕ್ಕಳು ತಮಗೆ ಆಗುವ ಅನುಭವಗಳನ್ನು ಪಾಲಕರೊಂದಿಗೆ ಮುಕ್ತವಾಗಿ ಹಂಚಿಕೊಳ್ಳುವುದು, ಮಕ್ಕಳಿಗೆ ಧೈರ್ಯವನ್ನು ತುಂಬುವುದು, ಸಾಮಾಜಿಕ ಕಳಕಳಿಯ ಅರಿವು ಮೂಡಿಸುವುದು. ಇವೆಲ್ಲವನ್ನೂ ನಾವೆಲ್ಲರೂ ನಮ್ಮ ಕರ್ತವ್ಯವಾಗಿಸಿಕೊಂಡರೆ, ಸುನಿತಾರವರಂತ ವ್ಯಕ್ತಿಗಳು ಮಾಡುವ ಮಹತ್ಕಾರ್ಯಗಳಿಗೆ ನಮ್ಮ ಅಳಿಲು ಸೇವೆಯಾಗಬಹುದು!

ಜೈ ಕನ್ನಡಾಂಬೆ.

# ಹಳ್ಳಿಯಿಂದ ಬೆಂಗಳೂರಿಗೆ ವಲಸೆ



**ರಾಗಿಣಿ**, *ನ್ಯೂಜೆರ್ಸಿ*

ನನ್ನ ತಂದೆ ಮತ್ತು ತಾಯಿ, ನಮ್ಮ ವಿದ್ಯಾಭ್ಯಾಸಕೋಸ್ಕರ ಮೊದಲು ಒಂದು ವರ್ಷ ಮಂಡ್ಯ ಕಾನ್ವೆಂಟ್ಗೆಗೆ ಹಾಕಿದರು, ನನ್ನ ತಾಯಿಯ ಅಕ್ಕ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೋಸ್ಕರ ಮಂಡ್ಯದಲ್ಲಿ ಮೊದಲೇ ಮನೆ ಮಾಡಿದ್ದರು. ದುರಾದೃಷ್ಟವಶಾತ್ ದೊಡ್ಡಮ್ಮ ಅಕಾಲ ಮರಣಕ್ಕೀಡಾದರು. ಆದೇ ಸಮಯಕ್ಕೆ ನನ್ನ ತಾಯಿಯ ತಂಗಿ ಅಮೇರಿಕದಿಂದ ಎರಡು ಮಕ್ಕಳ ಜೊತೆ ಭಾರತಕ್ಕೆ 7 ವರ್ಷದ ನಂತರ ವಾಪಸ್ಸು ಬೆಂಗಳೂರಿಗೆ ಬಂದಿದ್ದರು (ಎರಡು ವರ್ಷಗಳಲ್ಲೇ ಮತ್ತೆ ಅಮೆರಿಕ್ಕೆಹೋದರು, ಮೂರು ಮಕ್ಕಳನ್ನು ಕಟ್ಟಿ ಕೊಂಡು, ಬರುವಾಗಲೇ ಮೂರನೇ ಮಗುವಿನ ನಿರೀಕ್ಷೆಯಲ್ಲಿದ್ದರು ಎಂಬುದು, ಮಗು ಹುಟ್ಟಿದ ಮೇಲೆ ಗೊತ್ತಾಯಿತು!!) ಮಂಡ್ಯಕ್ಕೆ ಹೋಲಿಸಿದರೆ ಬೆಂಗಳೂರು ಎಲ್ಲಾ ದೃಷ್ಟಿ ಕೋನದಿಂದಲು ಹೆಚ್ಚುಉತ್ತಮ ಎಂದು ನಮ್ಮ ತಂದೆಗೆ ಅನಿಸಿದ್ದರಿಂದ, ನಮಗೆ ಮತ್ತೆ ಶಾಲೆ ಬದಲಾವಣೆ ಮಾಡಬೇಕಾಯಿತು!! ನಾವಿನ್ನು ಚಿಕ್ಕವರಾಗಿದ್ದರಿಂದ ಹಾಗು ನನ್ನ ತಾಯಿಯ ತಮ್ಮ, ನಮ್ಮ ಅಜ್ಜಿ ಬೆಂಗಳೂರಿನಲ್ಲೇ ನೆಲಸಿದ್ದರಿಂದ ನಮಗೆ ಈ ಬದಲಾವಣೆ ತುಂಬಾ ಕುಷಿ ಕೊಟ್ಟಿತು. ನನಗೆ ಅಜ್ಜಿ ಎಂದರೆ ಪ್ರಾಣ, ಸೋದರಮಾವ ನನ್ನ ತಾಯಿಯ ಪ್ರೀತಿಯ ತಮ್ಮ, ಒಂದೇ ಕೊರತೆ ಎಂದರೆ ನನ್ನ ತಂದೆ ಹಳ್ಳಿಯಲ್ಲೇ ಉಳಿದುಕೊಂಡಿದ್ದು. ಬೇಸಾಯ ಮತ್ತು ಅವರ ಮೆಡಿಕಲ್ ಪ್ರಾಕ್ಟೀಸ್ ಮಾಡಿಕೊಂಡು ಅವರ ತಂದೆ ತಾಯಿ, ಬಂದು ಬಳಗದ ಜೊತೆ ಇದ್ದು ವಾರಕ್ಕೆ ಒಂದು ಸಾರಿ ನೆಂಟರತರ ಬೆಂಗಳೂರಿಗೆ ಬರುತ್ತಿದ್ದರು.



ನಮಗೆ ಊರು ಹೊಸದೇನು ಆಗಿರಲಿಲ್ಲ, ಏಕೆಂದರೆ ನಾವು ಚಿಕ್ಕವರಿದ್ದಾಗ ಪ್ರತಿ ವರ್ಷ, ಬೇಸಿಗೆ ರಜೆಗೆ ಬೆಂಗಳೂರಿಗೆ ಅಜ್ಜಿ ಮನೆಗೆ ಬರುತ್ತಿದಿದ್ದು. ಶಾಲೆಯ ದಿನಗಳು ಬೇಗ, ಬೇಗನೆ ಕಳೆದುಹೋದವು. ಎಪ್ಪತ್ತರ ದಶಕದ ಬೆಂಗಳೋರು ಬೇಸಗೆಯಲ್ಲೂ ತಂಪಾಗಿರುತ್ತಿತ್ತು. ನಮ್ಮ ಮನೆ ಸುಬ್ರಮಣ್ಯ ನಗರ, ಅಜ್ಜಿ ಮನೆ ಲೋರ್ ಪ್ಯಾಲೆಸ್ ಅರ್ಚರಡ ನಲ್ಲಿ. ಕೆಂಪೇಗೌಡ ಟವರ್ ಹತ್ತಿರನೇ, ಅಲ್ಲಿಗೆ ಸಾಯಂಕಾಲ ವಾಕಿಂಗ್ ಹೋದರೆ ಬೆಚ್ಚಗೆ ಬಟ್ಟೆ ಹಾಕೋಬೇಕಿತ್ತು.

ನಮ್ಮ ಕಾಲೇಜಿನ ದಿನಗಳಂತು ಸ್ವರ್ಗಕ್ಕೆ ಮೂರೇ ಗೇಣು. ಬೆಂಗಳೊರು ನಮ್ಮೆಲ್ಲರ ಅತ್ಯಂತ ಪ್ರಿಯವಾದ ಊರು, ಪುಸ್ತಕ ಭಂಡಾರ, ನಾಟಕ, ಸಂಗೀತ, ಉದ್ಯಾನವನ, ಸಿನೆಮಾ ಮಂದಿರಗಳು ಒಂದೇ ಎರಡೇ ಹದಿವ್ಯಸ್ಕರಿಗೆ ಸಮಯ ಕಳೆಯುವುದಕ್ಕೆ!!. ಹಳ್ಳಿಯಲ್ಲಿ ಬರೀ ಕನ್ನಡ ಸಿನೆಮಾನ ನೋಡುತ್ತಿದ್ದವರಿಗೆ ಹಿಂದಿ,ಇಂಗ್ಲೀಷ್ ಸಿನೆಮಾ ಹುಚ್ಚು ಹಿಡಿಸಿತು ಬೆಂಗಳೂರು!!. ಓದುವುದಕ್ಕೆ ಕಾದಂಬರಿಗಳುನ್ನು ಹುಡುಕಿಕೊಂಡು ಶಾಲೆ, ಲೈಬ್ರರೀ ಅಥವಾ ಸ್ನೇಹಿತರ ಮನೆಗೆ ಹೋಗಿ ಅವರ ಹತ್ತಿರ ಕಾಡಿ ಬೇಡಿ ಆದರು ಓದುತ್ತಿದ್ದೆವು, ಹಾಗೆ ಸ್ನೇಹಿತರ ಮನೆಗೆ ಹೋಗುವುದಕ್ಕೆ ಯಾವ ಆಮಂತ್ರಣವೂ ನಮಗೆ ಬೇಕಾಗಿರಲಿಲ್ಲ. ಸ್ನೇಹಿತರ ಜೊತೆಗೆ ಎಲ್ಲಿಗೆ ಬೇಕಾದರೂ ಹೋಗುವುದಕ್ಕೆ ಆ ಕಾಲದ ಬಿ ಟಿ ಎಸ್ ಬಸ್ಸುಗಳು, ಆಟೋ ರಿಕ್ಷಾ ಯೆಥೇಚ್ಚವಾಗಿ ಸಿಗುತಿತ್ತು. ಇನ್ನು ಹತ್ತಿರ ಇದ್ದ ಮನೆಗಳಿಗೆ ನಡೆದು ನಡೆದು ಚಪ್ಪಲಿ ಗಳನ್ನು ಸವೇಸಿದ್ದು, ಹೊಸ ಚಪ್ಪಳಿಯಲ್ಲಿ ಕಚ್ಚಿಸಿ ಕೊಂಡಿದ್ದೂ ಇದೆ. ಬಿಸಿಲಿನಲ್ಲಿ ದಣಿದು ಹೋದವರಿಗೆ ಪಾನಕ, ಕಾಫೀ, ಟೀ, ತಿಂಡಿ ಕೊಡುವುದು ಪದ್ದತಿ. ಅಂತಾ ಆತ್ಮೀಯತ, ದೇಶಿ ಮತ್ತು ಪರದೇಶಿಗೆ ಇರುವ ಅಂತರ ಅಮೇರಿಕಗೆ ಬಂದಮೇಲೆ ಗೊತ್ತಾಗಿದ್ದು.

ಕಾಲೇಜಿನ ದಿನಗಳಂತೂ ಮರೆಯಲ ಸಾದ್ಯವೇಇಲ್ಲ, ಎಲ್ಲಾದಕ್ಕೂ ನಮ್ಮ ಪುಣ್ಯವೋ, ಅಥವಾ "ರೈಟ್ ಟೈಮ್ ಆಟ ದ ರೈಟ್ ಪ್ಲೇಸ್ಓ" ಗೊತ್ತಿಲ್ಲ, ಒಳ್ಳೆಯ ಮೇಷ್ಟ್ರುಗಳು ಸಿಕಿದ್ದರು. ಕನ್ನಡ ಮೀಡಿಯಂ ನಿಂದ ಇಂಗ್ಲೀಷ್ ಮೀಡಿಯಂಗೆ ಹೋಗಿದ್ದು ಸ್ವಲ್ಪ ಕಷ್ಟ ಆಯ್ತು. ಮೊದ ಮೊದಲು ಅವರು ಹೇಳುವುದು ಆರ್ಥ ಆಗುತ್ತಿರಲಿಲ್ಲ, ಹೇಳಿ ಕೊಡೋವವರಿಗೂ ಅಷ್ಟು ಚೆನ್ನಾಗಿ ಇಂಗ್ಲೀಷ್ ಬಾರದಿದ್ದರಿಂದ ಕುಂಟು ಕೊಂಡು ಪಾಸ್ ಅಂತೂ ಆಗುತ್ತಿತ್ತು. ಪ್ರಾದ್ಯಾಪಕರುಗಳ ಉಚ್ಚಾರಣೆಯನ್ನು ಆಡಿಕೊಳ್ಳುವುದು, ಟೀಕೆ ಮಾಡುವುದು ವಯೋಸಹಜ ಅಹಂಕಾರದಿಂದ ನಮ್ಮ ಅಲ್ಪತನ ವನ್ನು ನಿಸ್ಸಂಕೋಚವಾಗಿ ನಮ್ಮ ನಮ್ಮಲ್ಲೇ ಮತನಾಡಿಕೊಂಡು ಆಡಿ ಕೊಳ್ಳುತಿದ್ದೆವು. ಕನ್ನಡಕ್ಕೆ ಮಾತ್ರ ಒಳ್ಳೆಯ ಪ್ರಾದ್ಯಾಪಕರು ಸಿಕ್ಕಿದ್ದು ನಮ್ಮ ಪುಣ್ಯ. ಬರೀ ಪಾಠಪುಸ್ತಕ ಅಲ್ಲದೆ ಆಗಿನ ಪ್ರಖ್ಯಾತ ಕವಿಗಳ ಪರಿಚಯವೂ ನಮಗೆ ಮಾಡಿಸಿದ್ದರು. ಈಗಲೂ ಹಳೆಗನ್ನಡ ಸ್ವಲ್ಪ ಸ್ವಲ್ಪ ಜ್ಞಾಪಕ ಇದೆ.

ನಾವು ನಮ್ಮ ಮಕ್ಕಳಿಗೆ ಕಾಲ ಬದಲಾಗಿದೆ, ಎಲ್ಲಾಸಂಸ್ಕಾರ, ಪದ್ದತಿಗಳು ಮರೆತು ಹೋಗಿ ಕಾಲ ಕೆಟ್ಟು ಹೋಗುತ್ತಾ ಇದೆ ಅನ್ನೋ ಹಾಗೆ, ನಮ್ಮ ಅಜ್ಜಿ, ಸೋದರಮಾವ, ನನ್ನ ಚಿಕ್ಕಮ್ಮ ನನ್ನ ತಾಯಿಗೆ ಹೇಳುವುದನ್ನು ಈಗ ನೆನಸಿಕೊಂಡರೆ, ನಮ್ಮ ಮಕ್ಕಳಿಗೆ ನೀತಿ ಪಾಠ ಹೇಳಿ ಕೊಡುವುದಕ್ಕೆ ನಾವು ಯಾರು ಅನಿಸುತದೆ. ಕಾಲಕ್ಕೆ ತಕ್ಕಂತೆ ನಾವು ಸ್ವಲ್ಪ ಬದಲಾದರೆ, ಇಬ್ಬರಿಗೂ ಉತ್ತಮ.

ಕಾಲೇಜ್ ಮುಗಿಯುತ್ತಿದಹಾಗೆ ನನ್ನ ಹತ್ತಿರದ ಸ್ನೇಹಿತರ ಮದುವೆಗಳು ಆಗಿಹೋಯಿತು, ಹುಡುಗಿಯರ ಪೈಕಿ ನಾನು ಒಬ್ಬಳೇ ನಮ್ಮ ಗ್ರೂಪ್ ನಲ್ಲಿ ಕೆಲಸಕ್ಕೆ ಸೇರಿದ್ದು. ತಮಾಷೆಯಂದರೆ, ನನ್ನ ಮೊದಲ ಕೆಲಸ ಪತ್ತೇದಾರಿ ಮತ್ತು ಸೆಕ್ಯೂರಿಟಿ ಕಂಪೆನಿಯಲ್ಲಿ, ಈ ವಿಷಯ ನನ್ನನ್ನು ಬಸನಿಂದ ಆಫೀಸ್ನವರಿಗೂ ಹಿಂದೆ ಬರುತ್ತಿದ್ದ ಅಪರಿಚಿತ ಹುಡುಗರ ಗುಂಪಿಗೆ ಗೊತ್ತಾಗಿ "ಸ್ಪೈ ಹೂ ಲವಡ ಮಿ" ಎಂದ ಟೀಕೆ ಮಾಡುತ್ತಾ ಹಿಂದೆ ಬರುತ್ತಿದ್ದನ್ನು ಜ್ಞಾಪಿಸಿಕೊಂಡರೆ ಈಗಲೂ ನಗುಬರುತ್ತದೆ.

ಒಮ್ಮೆ, ರವೀಂದ್ರ ಕಲಾಕ್ಷೇತ್ರ ದಲ್ಲಿ "ನೋಡಿ ಸ್ವಾಮಿ ನಾವಿರೋದೇ ಹೀಗೆ", ನಾಟಕದ ಶಂಕರ್ ನಾಗ್, ಆರಂದತಿ ನಾಗ್ ಮತ್ತು ರಮೇಶ್ ಭಟ್ ಪ್ರತ್ಯಕ್ಷ ವಾಗಿ ನೋಡಿದ್ದು ಕಣ್ಣಿಗೆ ಕಟ್ಟಿದ ಹಾಗಿದೆ. "ಸಂಸಾರ ದಲ್ಲಿ ಸರಿಗಮ" ನಾಟಕಕ್ಕೆ ಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ಅವರು ಬಂದು ಹೊಸ ನಟರಿಗೆ ಆಶೀರ್ವಾದ ಮಾಡಿದ್ದು ಯಾರಿಗೆ ತಾನೆ ಮರೆಯಲಾಗುತ್ತದೆ. ಹಾಗೇನೇ, ರಾಜ್ ಕುಮಾರ್ ಎಪತ್ತರ ದಶಕದ ಸಿನಿಮಾಗಳು ಒಂದರ ಮೇಲೊಂದು ಬರುತ್ತಿದಕ್ಕು ನಾವು ತಪ್ಪದೆ ನೋಡುತಿದ್ದಕ್ಕೂ ಸರಿಯಾಗಿರುತಿತ್ತು. ಅಂಥಾ ಒಳ್ಳೆ ಸಿನಿಮಾಗಳು ಮತ್ತೆ ಬರಲಾರವೇನೊ? ಈಗಲೂ 'ಯೂಟ್ಯೂಬ್' ನಲ್ಲಿ ಪದೇ ಪದೇ ನೋಡಿ ಸಂತೋಷ ಪಡುತ್ತೇನೆ.

ಒಟ್ಟಿನಲ್ಲಿ, ಜೀವನದಲ್ಲಿ ಒಳ್ಳೇದಾಗಲಿ, ಕೆಟ್ಟದಾಗಲಿ 'ಅಂತ್ಯಾ' ಇದ್ದಹಾಗೆ ನನ್ನ ಬೆಂಗಳೊರ ಸಹವಾಸ ಮದುವೆಯ ದೆಸೆಯಿಂದ ಕೊನೆಗಾಣಿತು. ಬೆಂಗಳೂರು ಬಿಟ್ಟು ಆಮೆರಿಕೆಗೆ ಪ್ರಯಾಣ. ಬಯಸದೆ ಬಂದ ಭಾಗ್ಯವಾಯಿತು!!





# ಕಥೆಗಳು



# ಅವಳೆಂದರೆ!!

**ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ**

ಅವಳ ಮುಗುಳನಗೆ ಕಣ್ಣ ಮುಂದೆ ಮೂಡುತ್ತದೆ. ಅವಳ ನವಿರಾದ ನಗು ಕಿವಿಗೊಂದು ಇಂಪು. ಅವಳ ನೀಳ್ಗೂದಲು ಗಾಳಿಗೆ ಹಾರಿದಾಗಲೆಲ್ಲಾ ಮನ ಅರಳುತ್ತದೆ.ಅವಳು ಅಂತಹ ಸುಂದರಿ ಏನಲ್ಲಾ, ನಸು ಕಂದು ಬಣ್ಣದ, ಎತ್ತರವಲ್ಲದ ದೇಹ. ಕಾವ್ಯ ಕನ್ನಿಕೆಯಂತೋ ಅಲ್ಲವೇ ಅಲ್ಲ, ಆದರೂ ಅವಳೆಂದರೆ ಅವನಿಗೆ ಏನೋ ಒಂದು ಖುಷಿ, ಒಂದು ನೆಮ್ಮದಿ. ಅವಳೊಡನೆ ಮಾತನಾಡಲು ಒಂದು ಅವಕಾಶಕ್ಕಾಗಿ ಸದಾ ಹುಡುಕಾಟ. ಅವನನ್ನು ಕಂಡಾಗ ಅವಳು ಬೀರುವ ಮುಗುಳ್ನಗೆಗೆ ಇವನ ಒಳಮುಖ ಅರಳುತ್ತದೆ, ಆದರೆ ಅದನ್ನು ಅಷ್ಟೊಂದು ತೋರಿಸಿಕೊಳ್ಳುವುದಿಲ್ಲ. ಗಂಭೀರವಾಗಿ ಆಗುವ ಕೆಲಸದ ಬಗ್ಗೆ ಮಾತ್ರ ಮಾತನಾಡುತ್ತಾನೆ. ಅವಳು ವಿವರಣೆ ಕೊಡುವ ಹೊತ್ತಿನವರೆಗೂ ಅವಳನ್ನು ನೋಡುತ್ತಿರುತ್ತಾನೆ.  ಅವಳಿಗೆ ಅವನು ತನ್ನನು ಆಸಕ್ತಿಯಿಂದ ನೋಡುವುದು ತಿಳಿಯುತ್ತದೆ. ಅವಳು ತನ್ನ ಉಡುಪನ್ನು ಸುಮ್ಮನೆ ಹಾಗೆ ಸರಿ ಮಾಡಿಕೊಳ್ಳುತ್ತಾಳೆ. ಅದು ಸೀರೆಯೊ, ಸಲ್ವಾರೋ ಆಗಿಲ್ಲದೇ ಟಿ-ಶರ್ಟ್ ಆದ್ದರಿಂದ ಅಲ್ಲಿ ಸರಿಮಾಡಿಕೊಳ್ಳಲು ಏನೂ ಇಲ್ಲದಿದ್ದರೂ, ಅದೇ ಶರ್ಟನ್ನು ಕೆಳಗೆ ಎಳೆದೋ, ಮೇಲೆ ಮಾಡೋ ಸರಿ ಮಾಡಿಕೊಂಡಂತೆ ಮಾಡುತ್ತಾಳೆ. ಅವಳಿಗೆ ಅವನ ಮೇಲೆ ಕೋಪವೇನೂ ಬರುವುದಿಲ್ಲ. ಹಾಗೆ ಮಾತನಾಡುತ್ತಲೇ ಇರುವಾಗ, ಅವರ ಮಾತಿಗಿಂತ ಹೆಚ್ಚಾಗಿ ಇಬ್ಬರ ಇರುವಿಕೆ ಪರಸ್ಪರರಿಗೆ ಖುಷಿ ಕೊಡುತ್ತದೆ. ಮಾತೆಲ್ಲ ಮುಗಿದರೂ ಯಾವೊದೋ ಮತ್ತೊಂದು ವಿಷಯವನ್ನು ಎತ್ತಿ ಅವ ಅಲ್ಲೇ ನಿಲ್ಲುವ ಪ್ರಯತ್ನ ಮಾಡಿದರೆ ಅವಳೂ  ಹಾಗೆಯೇ ಯಾವೊದೋ ಮತ್ತೊಂದು ವಿಷಯ ಎತ್ತಿ ಅವ ಇನ್ನೂ ಸ್ವಲ್ಪ ಹೊತ್ತು ತನ್ನ ಬಳಿಯೇ ನಿಂತಿರಲು ಬಯಸುತ್ತಾಳೆ. ಇಬ್ಬರೂ ಕಚೇರಿಯ ಸಂಗತಿಗಳನ್ನೇ ಮಾತನಾಡುತ್ತಾರೆ, ಅಕ್ಕ ಪಕ್ಕದವರಿಗೆ ಆ ಮಾತು ಕೇಳಿಸುತ್ತದೆ, ಕೇಳಿಸಿದರೂ ಅದು ಕಚೇರಿಯ ಸಂಬಂಧ ಪಟ್ಟ ಮಾತುಗಳಾದ್ದರಿಂದ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಅಲ್ಲಿ ಇಬ್ಬರೂ ಮಾತನಾಡುತ್ತಿರುವುದೇ ಮುಖ್ಯವಾಗಿ, ವಿಷಯ ಗೌಣವಾಗುತ್ತದೆ.



ಅವಳು  ಸುಂದರಿ ಅಲ್ಲದಿದ್ದರೂ, ಅವನಿಗೆ ಆಕರ್ಷಕಳಾಗಿ ಅವಳು ಕಾಣಿಸುತಾಳೆ. ಅವನಿಗೆ ಇಷ್ಟವಾಗಿರುವುದು ಅವಳ ಬುದ್ಧಿವಂತಿಕೆ. ಅವಳ ಕೆಲಸದೊಗಿನ ಶ್ರದ್ಧೆ, ಅವಳು ಅಚ್ಚುಕಟ್ಟಾಗಿ ಕೆಲಸ ಮಾಡುವ ವಿಧಾನ. ಎಂತಹ ಕೆಲಸವಾದರೂ ಲೀಲಜಾಲವಾಗಿ ಶೀಘ್ರವಾಗಿ ಮಾಡುತ್ತಾಳೆ. ಹೆಣ್ಣಿನ ಸೌಂದರ್ಯಕ್ಕಿಂತಲೂ ಅವಳ ಬುದ್ಧಿವಂತಿಕೆಯೇ ಗಂಡಸರನ್ನು ಹೆಚ್ಚು ಆಕರ್ಷಿಸುತ್ತದೆ ಎಂದು ಅವನ ನಂಬಿಕೆ. ಸೌಂದರ್ಯದಿಂದ ಉಂಟಾದ ಪ್ರೀತಿ ಹೆಚ್ಚು ದಿನ ಉಳಿಯುವುದಿಲ್ಲ, ಸಂಬಂಧ ಉಳಿಯುವುದು ವ್ಯಕ್ತಿತ್ವದಿಂದ ಎಂದು ಅವನು ಭಾವಿಸುತ್ತಾನೆ. ಸೌಂದರ್ಯಕ್ಕೆ ನಾಶವಿದೆ ಆದರೆ ಬುದ್ಧಿವಂತಿಕೆ, ವ್ಯಕ್ತಿತ್ವ ಬಹುಕಾಲ ಉಳಿಯುತ್ತದೆ ಎಂದು ತನ್ನ ಸ್ನೇಹಿತರಿಗೆ ಹೇಳುತ್ತಿರುತ್ತಾನೆ. ಇಬ್ಬರೂ ಅತೀ ಬುದ್ಧಿವಂತರು ಒಂದಾದರೆ ಅಲ್ಲಿ ಪ್ರೀತಿಗಿಂತ ಬುದ್ಧಿಯ ಪ್ರದರ್ಶನ ಹೆಚ್ಚಿರುತ್ತದೆ ಎಂದು ಸ್ನೇಹಿತರು ವಾದಿಸಿದರೂ, ಬುದ್ಧಿಯ ಜೊತೆ ವ್ಯಕ್ತಿತ್ವವೂ ಮುಖ್ಯ ಎಂದು ಅವನು ಹೇಳುತ್ತಾನೆ.

ಶ್ರೇಷ್ಠ ಮತ್ತು ಮೋಹನ ಬೆಂಗಳೂರಿನ ಒಂದು ಕಚೇರಿಯಲ್ಲಿ ಕೆಲಸಮಾಡುತ್ತಿದ್ದಾರೆ. ಬೇರೆ ಬೇರೆ ಡಿಪಾರ್ಟ್ಮೆಂಟ್ ಆದರೂ ಒಂದೇ ಕಡೆ ಕುಳಿತು ಕೊಳ್ಳುತ್ತಾರೆ. ಮೊದಲು ಮೋಹನ ಶ್ರೇಷ್ಠಳನ್ನು ನೋಡಿದಾಗ ಅವನು ಅವಳ ಆಕರ್ಷಣೆಗೇನೂ ಒಳಗಾಗಿರಲಿಲ್ಲ. ಪಕ್ಕನೆ ಒಬ್ಬರನ್ನು ಆಕರ್ಷಿಸುವ ಸುಂದರಿಯೇನೂ ಅವಳಾಗಿರಲಿಲ್ಲ. ಆದರೆ ಅವಳ ಜೊತೆ ಮಾತನಾಡುತ್ತಾ, ಕೆಲಸ ಮಾಡುತ್ತಾ ಅವಳ ಅಸಾಧಾರಣ ಬುದ್ಧಿವಂತಿಗೆ ಪರಿಚಯವಾಗುತ್ತಾ ಅವನ ಮನಸು ಅದನ್ನು ಆಸ್ವಾದಿಸತೊಡಗಿತ್ತು. ಕ್ರಮೇಣ ಅವಳ ಜೊತೆ ಹೆಚ್ಚು ಸಮಯ ಕಳೆಯಲು ಬಯಸುತ್ತಿದ್ದ. ಕಚೇರಿಯಲ್ಲಿ ಅನೇಕ ಕೆಲಸಗಳು ಒಟ್ಟಾಗಿ ಮಾಡುತ್ತಿದ್ದುದರಿಂದ, ಇಡೀ ದಿವಸದಲ್ಲಿ ಹೆಚ್ಚು

ಸಮಯ ಕಳೆಯಲು ಸಾಧ್ಯವಾಗುತ್ತಿತ್ತು.  ಹೀಗೆ ಹೆಚ್ಚಿನ ಸಮಯ ಕಳೆಯುತ್ತಾ ತಿಳಿಯದೆ ಅವಳ ಆಕರ್ಷಣೆಗೆ ಒಳಗಾಗಿದ್ದ.

ಅವರಿಬ್ಬರಿಗೂ ತಾವು ಮದುವೆ ಆಗಿದ್ದೇವೆ ಎಂದು ತಿಳಿದಿದೆ. ಯಾವತ್ತೂ ವ್ಯಯಕ್ತಿಕ ವಿಷಯಗಳನ್ನು ಮಾತನಾಡಿದ್ದಿಲ್ಲ. ಹೊರಗಡೆ ಬೇಟಿಯಾಗಿದಿಲ್ಲ. ಹೊರಗಡೆ ಫೋನ್ ಮಾಡಿದ್ದಿಲ್ಲ. ಕಚೇರಿಯಲ್ಲಿ ಮಾತು, ಅದೂ ಹೆಚ್ಚು ಕೆಲಸಕ್ಕೆ ಬೇಕಾದ ಮಾತು ಮಾತ್ರ. ಯಾವೊತ್ತೂ ತನ್ನ ಇಷ್ಟವನ್ನು ಅವನಾಗಲಿ, ಅವಳಾಗಲಿ ವ್ಯಕ್ತಪಡಿಸಿದ್ದಿಲ್ಲ. ಯಾವುದೇ ಸಂವಹನವಾಹಕವಿಲ್ಲದೆ, ಅದು ಸಂವಹನವಾಗುತ್ತಿತ್ತು. ಅದು ಮಾತಿನಲ್ಲಿ ಬರುತ್ತಿರಲಿಲ್ಲ.

ಮೋಹನ ತನ್ನ ಹೆಂಡತಿ ಅನನ್ಯಳನ್ನು ಬಹಳ ಪ್ರೀತಿಸುತ್ತಾನೆ. ಅವಳನ್ನು ಇಷ್ಟಪಟ್ಟು ಮದುವೆಯಾಗಿದ್ದಾನೆ. ಮದುವೆಯಾಗಿ ಮೂರು ವರ್ಷಗಳಾಗಿವೆ. ಇನ್ನೂ ಮಕ್ಕಳಾಗಿಲ್ಲ. ಅನನ್ಯ ಮನೆಯ ಕೆಲಸಗಳೆಲ್ಲವನ್ನೂ ಅಚ್ಚುಕಟ್ಟಾಗಿ ಮಾಡುತ್ತಾಳೆ. ಅವಳ ಸಹಾಯ ಅವನಿಗೆ ಎಲ್ಲಾ ರೀತಿಯಲ್ಲೂ ಸಿಗುತ್ತದೆ. ತನ್ನ ಆಫೀಸಿನ ಕೆಲಸದ ಜೊತೆ ಮನೆಯಲ್ಲೂ ಅವನಿಗೆ ಯಾವುದೇ ಕೆಲಸ ಮಾಡುವ ಅಗತ್ಯವೇ ಬರದ ಹಾಗೆ ನೋಡಿಕೊಳ್ಳುತ್ತಾಳೆ, ಆದರೂ ಅವನು ಮನೆ ಕೆಲಸಗಳಲ್ಲಿ ಸಹಾಯ ಮಾಡುತ್ತಾನೆ. ಕಚೇರಿಯ ಒತ್ತಡಕ್ಕೆ ನಿವಾರಿಸುವ ಅವಳು ಒಂದು ಮದ್ದು ಅವನಿಗೆ. ಅವಳನ್ನು ತಬ್ಬಿದಾಗ ಮೈ ಮರೆಯುತ್ತಾನೆ.



ಹೀಗಿರುವಾಗ, ಈ ಒಂದು ಸಮಸ್ಯೆ ಅವನ ಬಾಳಿನಲ್ಲಿ ಅವತರಿಸಿದೆ. ಶ್ರೇಷ್ಠ ಆಗಾಗ ಮನಸ್ಸಿಗೆ ಬರುತ್ತಾಳೆ. ಕಚೇರಿಯಲ್ಲಿ ಅವಳನ್ನು ನೋಡುವ ಆಸೆಯೂ ಆಗುತ್ತದೆ, ಮಾತನಾಡುವ ಆಸೆಯಾಗುತ್ತದೆ. ಅದರ ಮುಂದೆ ಹೋಗುವ ಬಯಕೇನೂ ಆಗುವುದಿಲ್ಲ. ಕಚೇರಿಯ ಒತ್ತಡಕ್ಕೆ, ಯಾರ ಮೇಲಾದರೂ ಕೋಪಗೊಂಡಾಗ, ಯಾರಾದರೂ ತನ್ನ ಮೇಲೆ ಕೋಪಗೊಂಡಾಗ ಅವಳ ಹತ್ತಿರ ಹೋಗಿ ಮಾತನಾಡುವಾಗ ಮನಸು ನೆಮ್ಮದಿ ಕಂಡುಕೊಳ್ಳುತ್ತದೆ, ತಹಬದಿಗೆ ಬರುತ್ತದೆ, ಶಾಂತವಾಗುತ್ತದೆ. ಇನ್ನು, ಮನೆಯಲ್ಲೂ ಅವಳ ನೆನಪು ಬರಲು ಪ್ರಾರಂಭವಾದಮೇಲೆ ಅವನಿಗೆ ದಿಗಿಲು ಶುರುವಾಯಿತು. ಒಂದು ದಿನ ಕನಸಿನಲ್ಲಿ ಅವಳು ಮಮತೆಯಿಂದ ಕೆನ್ನೆ ಸವರಿದ್ದು ಕಂಡು ದಿಗ್ಗನೆದ್ದು ಕುಳಿತಿದ್ದ. ಛೆ ಇದು ಸರಿಯಲ್ಲ, ಸುಂದರವಾದ, ಪ್ರೀತಿಸುವ ಹೆಂಡತಿ ಇರುವಾಗ ಇದೆಂತಹ ಬಯಕೆ ಎಂದು ಅವನಿಗೆ ಅನಿಸುತ್ತದೆ .ಎಂತಹ ಸಂದರ್ಭ ಬಂದರೂ ತನ್ನವಳಿಗೆ ಮೋಸ ಮಾಡುವುದಿಲ್ಲ ಎಂದೂ ಅವನಿಗೆ ಗೊತ್ತಿದೆ, ಹೆಂಡತಿಯ ಬಿಟ್ಟು ಬೇರೆ ಹೆಣ್ಣಿನ ಸಹವಾಸಕ್ಕೆ ಹೋಗುವುದಿಲ್ಲ ಎನ್ನುವ ಖಚಿತತೆಯೂ ಇದೆ. ಧಾರಾವಾಹಿಗಳಲ್ಲಿಯೂ, ಬಿಗ್ ಬಾಸ್ ಕಾರ್ಯಕ್ರಮಗಳಲ್ಲಿಯೂ, ಟಿವಿ ಆಂಕರ್ ಯಾರಾದರೂ ಕಂಡಾಗ, ಯಾರಾದರೂ ಚನ್ನಾಗಿದ್ದರೆ ಹೆಂಡತಿಗೆ ಹೇಳುತ್ತಾನೆ. ಅವಳು" ಪರವಾಗಿಲ್ಲ ನೋಡಿ, ಬೇಕಿದ್ದರೆ ಯಾರ ಜೊತೆಯಾದರೂ ಹೋಗಿಬನ್ನಿ, ಆದರೆ ನನಗೆ ಹೇಳಬೇಡಿ ಅಷ್ಟೇ" ಎಂದು ಛೇಡಿಸುತ್ತಾಳೆ. ಆದರೂ ಅವನಿಗೆ ಅಂತಹ ಬಯಕೆಯೇನೂ ಆಗುವುದಿಲ್ಲ.

ಶ್ರೇಷ್ಠ ಕನಸಲ್ಲಿ ಬಂದಾಗ, ಅವನು ತನ್ನ ಹೆಂಡತಿಯ ಮೇಲೆ ತಾನಿಟ್ಟಿರುವ ನಿಷ್ಠೆಯೆಲ್ಲಾ ಗಾಳಿಗೆ ತೂರಿಹೋಯಿತೆ ಅನಿಸಿತು. ಅಂದರೆ ತನ್ನ ಸುಪ್ತ ಮನಸಿನಲಿ ತಾನು ಅವಳನ್ನು ಬಯಸುತ್ತಿದ್ದೇನೆಯೇ ಅನಿಸಿ ಮತ್ತೂ ಗಾಭರಿಯಾಯಿತು. ಒಮ್ಮೆ ಹೆಂಡತಿಯನ್ನು ಪ್ರೀತಿಸುವಾಗ ಪಕ್ಕನೆ ಶೇಷ್ಠಳ ಮುಖ ತೇಲಿಹೋದಂತಾಗಿ ಅಪರಾಧ ಮೋನೋಭಾವದಿಂದ ಕುಗ್ಗಿಹೋಗಿದ್ದ. ಇದೆಂತಹ ಶಿಕ್ಷೆ ಎಂದುಕೊಂಡ. ಇದಕ್ಕೊಂದು ಪರಿಹಾರ ಕಂಡುಕೊಳ್ಳಲೇಬೇಕು ಎನಿಸಿತು.

ಇದಕ್ಕೆ ಪರಿಹಾರವೆಂದರೆ, ಶೇಷ್ಠಳನ್ನು ಮುಖತಃ ನೋಡದೇ ಇರುವುದು ಎಂದುಕೊಂಡ. ಹೀಗಾಗಿ ಕಚೇರಿಗೆ ಹೋದಾಗ ಅವಳನ್ನು ಸ್ವಯಂ ನೋಡಲು ಹೋಗದೆ ಈ-ಮೇಲ್ ಮಾಡಲುತೊಡಗಿದ, ಏನಾದರು ಬೇಕಿದ್ದರೆ ಫೋನಿನಲ್ಲಿ ಮಾತನಾಡಲಾರಂಬಿಸಿದ. ಅಲ್ಲಲ್ಲಿ ಸಿಕ್ಕಾಗ ಹಾಯ್ ಹೇಳುತಿದ್ದ ಅಷ್ಟೇ ಹೆಚ್ಚು ಮಾತನಾಡುತ್ತಿರಲಿಲ್ಲ. ಅವಳೂ ಅವನು ತನ್ನನ್ನು ಅವಾಯ್ಡ್ ಮಾಡುತ್ತಿದ್ದಾನೆ ಅನಿಸಿ ಹೆಚ್ಚು ಮಾತನಾಡಲು ಹೋಗುತ್ತಿರಲಿಲ್ಲ. ಹಾಗಿದ್ದರೂ ಕಚೇರಿಯ ಮೀಟಿಂಗ್ಗಳಿಂದ ದಿನಕ್ಕೆ ಒಮ್ಮೆಯಾದರೂ ಸೇರಬೇಕಾಗಿತ್ತು, ಮಾತನಾಡಬೇಕಿತ್ತು.

ಹೀಗಿರಲು, ಮೊತ್ತೊಂದು ತೊಂದರೆ ಶುರುವಾಯಿತು. ಅದೆಂದರೆ ಅವರು ಧರಿಸುತ್ತಿದ್ದ ಬಟ್ಟೆಗಳ ಬಣ್ಣ. ಗೊತ್ತಿಲ್ಲದೆಯೇ ಅವರು ತೊಡುವ ಶರ್ಟಿನ ಬಣ್ಣ ಒಂದೇ ಇರುತ್ತಿತ್ತು. ಇದು ಕಾಕತಾಳೀಯ ಎಂದುಕೊಂಡರೂ ಅದು ಸುಮಾರು ಹದಿನೈದು ದಿನ ನಡೆಯಿತು. ಇದೆಂತಹ ಪೀಕಲಾಟ ಎನಿಸಿತು, ಇಬ್ಬರು ಅದನ್ನು ಗಮನಿಸಿದರೂ ಹೇಳಿಕೊಳ್ಳಲು ಹೋಗಿರಲಿಲ್ಲ. ಅಂದರೆ ತಮ್ಮಿಬ್ಬರ ರುಚಿ ಒಂದೇ ಎನಿಸಿತು. ಅವಳಲ್ಲಿರುವ ಎಲ್ಲಾ ಬಣ್ಣದ ಬಟ್ಟೆಗಳೂ ಇವನಲ್ಲಿದ್ದವು. ಕೆಲವು ಸಹೋದ್ಯೋಗಿಗಳು ಇದನ್ನು ಗಮನಿಸಿ "ಸೇಮ್ ಪಿಂಚ್" ಎಂದಿದ್ದರೂ ಯಾರೂ ಅಷ್ಟು ದಿನಗಳವರೆಗೆ ಗಮನಿಸಿರಲಿಲ್ಲ. ಕೊನೆಗೆ, ಇದನ್ನು ಮುರಿಯಬೇಕು ಎಂದು ಅವನಿಗೆ ಅನಿಸಿತು. ಮರುದಿನ ಧರಿಸಲೆಂದು ಅಚಾನಕ್ಕಾಗಿ ಬಿಳಿ ಶರ್ಟ್ ತೆಗೆದುಕೊಂಡು ಧರಿಸಿದವ ಅದನ್ನು ತೆಗೆದು, ಕಪ್ಪು ಬಣ್ಣದ ಶರ್ಟ್ ತೊಟ್ಟುಕೊಂಡ. ಕಚೇರಿಗೆ ಬಂದಾಗ ನೋಡಿದರೆ ಅವಳು ಬಿಳಿ ಬಣ್ಣದ ಶರ್ಟ್ ತೊಟ್ಟಿದ್ದಳು. ಗೆದ್ದೇ ಎಂದುಕೊಂಡರೂ, ತಾನು ಮೊದಲು ಧರಿಸದ್ದು ಬಿಳಿಯ ಶರ್ಟ್ ಅಲ್ಲವೇ ಅನಿಸಿ ಭಯವಾಯಿತು. ಇಂತಹ ಒಂದು ಟ್ರಿಕ್ಕಿಂದ ದಿನಾ ಮೊದಲು ಒಂದು ಶರ್ಟ್ ತೆಗೆದರೂ, ಅದನ್ನು ಧರಿಸದೆ ಬೇರೆ ಶರ್ಟ್ ತೊಡಲಾರಂಭಿಸಿದ.

ಇಷ್ಟೆಲ್ಲಾ ಆದರೂ ಅವಳು ಮನಸ್ಸಿನಿಂದ ದೂರ ಹೋಗಲಿಲ್ಲ. ಬೆಳಿಗ್ಗೆ ಬಟ್ಟೆ ಧರಿಸುವಾಗ ನೆನಪಾಗುತ್ತಿದ್ದಳು. ಕಚೇರಿಯಲ್ಲಿ ಅವಳ ಮಾತು ದೂರದಿಂದ ಕೇಳಿದಾಗ ಮನಸು ಉಲ್ಲಸಿತವಾಗುತ್ತಿತ್ತು. ದೂರದಿಂದ ನೋಡಿದರೂ ತನ್ನ ಅರಿವಿಲ್ಲದೇ ಪುಳಕಗೊಳ್ಳುತ್ತಿದ್ದ. ಮನಸು ಅವಳ ಮುಗುಳನಗೆಯನ್ನು ನೋಡಲು ಬಯಸುತ್ತಿತ್ತ.

ತಾನೇನೂ ತಪ್ಪು ಮಾಡುತ್ತಿಲ್ಲವಲ್ಲ, ತನಗೇಕೆ ಭಯ ಎಂದು ಎಷ್ಟೋ ಸಲ ಅನಿಸಿದ್ದಿದೆ. ಸುಮ್ಮನೆ ಮಾತನಾಡಿಸಿದರೆ, ನೋಡಿದರೆ ಯಾಕೆ ಅದಕ್ಕೆ ಗಾಭರಿಗೊಳ್ಳಬೇಕು. ಅವಳ ಒಡನಾಟ ಮನಸಿಗೆ ಸುಖ ಕೊಡುತ್ತಿದ್ದರಿಂದ, ಮಾತನಾಡಿಸಿದರೆ ಏನೀಗ, ನಾನೇನೂ ಅವಳ ದೇಹವ ಬಯಸುತ್ತಿಲ್ಲ, ಬರಿ ಮನಸು ಮಾತ್ರ, ಇದರಲ್ಲಿ ಹೆಂಡತಿಗೆ ಮೋಸವಿಲ್ಲವಲ್ಲ ಎಂದುಕೊಂಡರೂ, ಇದೊಂದು ಮಾನಸಿಕ ವ್ಯಭಿಚಾರ ಎನಿಸಿಕೊಳ್ಳುವುದೇ ಅನಿಸಿತು. ಹಾಗೆ ನೋಡಿದರೆ ಎಷ್ಟೋ ಜನ ಮಾನಸಿಕ ವ್ಯಭಿಚಾರಿಗಳೇ, ದಾರಿಯಲ್ಲಿ ಸುಂದರ ಹೆಣ್ಣನ್ನು ಕಂಡಾಗ ತುಟಿ ಸವರಿಕೊಳ್ಳುವವರಿಂದ ಹಿಡಿದು ಸಿನಿಮಾದಲ್ಲಿ ಕಂಡ ನಾಯಕಿಯನ್ನು ಎವೆಯಿಕ್ಕದೆ ನೋಡುವವರೆಗೆ ಎಲ್ಲರೂ ಮಾನಸಿಕ ವ್ಯಭಿಚಾರಿಗಳೇ, ಮನಸಿನಿಂದ ಅದು ಕ್ರಿಯೆಗೆ ಇಳಿದಾಗಲೇ ಅದು ಕೆಟ್ಟದ್ದು ಎಂದು ಅನಿಸಿ, ತಾನು ಮಾಡುತ್ತಿರುವುದು ತಪ್ಪೇನಲ್ಲ ಅನಿಸಿತು.

ಹೀಗಿರಲು, ಅನನ್ಯ ತವರು ಮನೆಗೆ ಹೊರಟಳು. ಅವಳ ಊರು ಮೈಸೂರು. ಅವಳನ್ನು ಕರೆದುಕೊಂಡು ಹೋಗಿ ರೈಲನ್ನು ಹತ್ತಿಸಿ ಮನೆಗೆ ಬಂದಾಗ ಮನೆ ಬಿಕೋ ಅನಿಸಿತು. ಹೆಂಡತಿ ಆಗಾಗ ತವರು ಮನೆಗೆ ಹೋಗುವುದು ಸಾಮಾನ್ಯವಾದರೂ, ಅವಳು ಮನೆಯಲ್ಲಿ ಇಲ್ಲದಿದ್ದಾಗ ಏನೋ ಕಳೆದುಕೊಂಡ ಭಾವನೆ ಸದಾ ಉಂಟಾಗುತ್ತದೆ. ಸಾಯಂಕಾಲವಾಗುತ್ತಿತ್ತು, ಅಡುಗೆಯ ಅಗತ್ಯವಿರಲಿಲ್ಲ, ಹೆಂಡತಿ ಮಾಡಿಟ್ಟು ಹೋಗಿದ್ದಳು. ಅಡುಗೆಗೆ ಮೋಹನ ಸದಾ ಸಹಾಯ ಮಾಡುತ್ತಾನೆ. ಅದು ಅವನಿಗೆ ಖುಷಿಯ ವಿಷಯವೂ ಆಗಿತ್ತು.

ಊಟ ಮುಗಿಸಿ ಸ್ವಲ್ಪ ಹೊತ್ತು ಟಿವಿ ನೋಡಿ, ಬೇಸರಗೊಂಡು ಮಲಗಿಕೊಳ್ಳಲು, ಮಲಗುವ ಕೊನೆಗೆ ಹೋದಾಗ, ಹಾಸಿಗೆಯ ಮೇಲೆ ಹೆಂಡತಿಯ ದಿನಚರಿ ಕಾಣಿಸಿತು. ಅರೆ ದಿನಚರಿ ಮರೆತುಹೋಗಿದ್ದಾಳಲ್ಲ ಎಂದುಕೊಂಡ. ಹೆಂಡತಿಗೆ ದಿನಚರಿ ಬರೆಯುವ ಹವ್ಯಾಸವಿತ್ತು.

ಬೇರೆಯವರ ದಿನಚರಿ ಓದುವುದು ತಪ್ಪು ಎಂದು ತಿಳಿದಿದ್ದರೂ, ಏನು ಬರೆಯುತ್ತಾಳೆ ಎನ್ನುವ ಕುತೂಹಲ ಮೂಡಿತು. ನೋಡೋಣವೇ, ಬೇಡವೇ ಎಂದುಕೊಂಡರೂ ಕೊನೆಗೆ ನೋಡಿಯೇ ಬಿಡೋಣ ಅನಿಸಿತು. ದಿನಚರಿ ಪುಟಗಳನು ತಿರುಗಿಸಿದ. ಸುಮಾರು ಆರು ತಿಂಗಳು ಹಿಂದೆ ಆದ ಕೆಲವು ವಿಷಯಗಳಿದ್ದವು. ಇತ್ತೀಚಿಗೆ ಬರೆದಿರುವುದು ಏನಾದರೂ ಇದೆಯೇ ಎಂದು ನೋಡಿದ. ಸುಮಾರು ಎರಡು ತಿಂಗಳು ಹಿಂದೆ ಬರೆದಿದ್ದ ಒಂದು ವಿಷಯ ಕುತೂಹಲ ಮೂಡಿಸಿತು.

" ಅವನೆಂದರೆ ಪ್ರೀತಿಯೇನೂ ಇಲ್ಲ, ಆದರೆ ಏನೋ ಒಂದು ಆಕರ್ಷಣೆ ಇದೆ. ಅವನ ಜೊತೆ ಸ್ವಲ್ಪ ಹೊತ್ತು ಸಮಯ ಕಳೆಯೋಣ ಅನಿಸುತ್ತದೆ. ಸುಂದರವಾಗಿ ಮಾತನಾಡುತ್ತಾನೆ. ತುಂಬಾ ಸೊಗಸಾಗಿ ಎಲ್ಲ ವಿಷಯಗಳನ್ನು ವಿವರಿಸುತ್ತಾನೆ. ಅವನಿಂದ ಕೆಲಸವನ್ನು ಕಲಿತೆ."

" ಅರೆ ಇಬ್ಬರೂ ಈ ದಿನ ಒಂದೇ ಬಣ್ಣದ ಬಟ್ಟೆ ಧರಿಸಿ ಆಫೀಸ್ಗೆ ಬಂದಿದ್ದೆವಲ್ಲ , ಟೆಲಿಪತಿ ಅನ್ನೋದು ಏನಾದರೂ ಇದೆಯಾ, ಅವನು ಆಫೀಸಿಗೆ ಬೇಗ ಹೋಗುತ್ತಾನೆ, ನಾನು ಆಮೇಲೆ ಹೋಗುತ್ತೇನೆ, ಅವನು ಬೇಕಂತಲೇ ಹೇಗೋ ತಿಳಿದುಕೊಂಡು ಹಾಗೆ ಬಟ್ಟೆ ಧರಿಸಿ ಬರುವವನಲ್ಲ. ಅವನಿಗೆ ನನ್ನ ಬಗ್ಗೆ ಹೆಮ್ಮೆ ಇದೆ, ನನ್ನ ಬುದ್ದಿವಂತಿಕೆ ಅವನು ಇಷ್ಟಪಡುತ್ತಾನೆ, ಖಂಡಿತವಾಗಿ ನನ್ನನು ಕಂಡರೆ ಅವನಿಗೆ ಪ್ರೀತಿ ಪ್ರೇಮ ಇಲ್ಲ ಅನಿಸುತ್ತೆ, ಆದರೆ ಇಷ್ಟ ಇರಬಹುದು. ಈ ಇಷ್ಟ ಬೇರೆ ರೂಪಕ್ಕೆ ಬದಲಾದರೆ ಅಂದುಕೊಂಡು ಭಯ ಪಡುತ್ತೇನೆ.

"ಈ ದಿನ ಇದ್ದಕಿದ್ದ ಹಾಗೆ ಸೀರೆ ಉಡೋಣ ಅನಿಸಿ, ಸೀರೆ ಧರಿಸಿ ಆಫೀಸಿಗೆ ಹೋಗಿದ್ದೆ, ಅವನು ನನ್ನನ್ನು ಆಗಾಗ ನೋಡುತ್ತಿದ್ದ ಅನಿಸುತ್ತೆ, ಹತ್ತಿರ ಬಂದಾಗ ಅವನ ಕಣ್ಣಿನಲ್ಲಿ ಒಂದು ಮಿಂಚು ಕಂಡೆ ಅನಿಸಿತು. ಹೌದು ನಾನು ಈ ದಿನ ಸುಂದರವಾಗಿ ಕಾಣಿಸುತ್ತಿದ್ದೆ. ಇವರು ಬೆಳಿಗ್ಗೆ ತಬ್ಬಿ ಮುತ್ತಿನ ಮಳೆ ಸುರಿಸಿದ್ದರು, ಮತ್ತೆ ರೆಡಿ ಆಗಬೇಕಾಯಿತು."

"ನನ್ನವರನ್ನು ನಾನು ತುಂಬಾ ಇಷ್ಟಪಡುತ್ತೇನೆ, ಅವರೂ ನನ್ನನ್ನು ತುಂಬಾ ಪ್ರೀತಿಮಾಡುತ್ತಾರೆ. ಹೀಗೆ ನನ್ನ ಮನ ಬೇರೆ ಏನೂ ಹುಡುಕಬಾರದು. ನಾನು ಈ ಆಕರ್ಷಣೆಯಿಂದ ತಪ್ಪಿಸಿಕೊಳ್ಳಬೇಕು, ಅದಕ್ಕೆ ಒಂದು ದಾರಿ ಹುಡುಕಬೇಕು, ಅದು ಎಂತಹ ದಾರಿ ಎಂದು ತಿಳಿಯುತ್ತಿಲ್ಲ, ಇದ್ದಕ್ಕಿದ್ದಹಾಗೆ ರಾಖಿ ಕಟ್ಟಿದರೆ ಅವನು ಏನು ಅಂದುಕೊಳ್ಳಬಹುದು. ಛೆ ತುಂಬಾ ನಾಟಕೀಯವಾಗಿರುತ್ತದೆ ಅನಿಸುತ್ತಿದೆ. ಬೇರೆ ದೃಷ್ಟಿಯಿಂದ ನೋಡುತ್ತಿದ್ದ ವ್ಯಕ್ತಿಯನ್ನು ಇನ್ನೊಂದು ದೃಷ್ಟಿಯಿಂದ ನೋಡಬಹುದೇ ಅದು ಸಾಧ್ಯವೇ, ಅದು ಆತ್ಮ ವಂಚನೆಯೇ, ಪ್ರಿಯತಮನನ್ನು ಸಹೋದರನಾಗಿ, ಸ್ನೇಹಿತನ್ನಾಗಿ ಭಾವಿಸಿಕೊಳ್ಳಲು ಸಾಧ್ಯವೇ? ಅದು ಯಾಕಾಗಬಾರದು? ಹುಳುವೊಂದು ಚಿಟ್ಟೆಯಾಗಿ ರೂಪಾಂತರಗೊಂಡಂತೆ ಒಂದು ವ್ಯಕ್ತಿಯ ಮೇಲಿನ ಭಾವನೆಯಿಂದ, ರೂಪಾಂತರಗೊಳ್ಳಬಹುದೇ. ರೂಪಾಂತರಗೊಂಡರೆ ಆಗುವ ತೊಂದರೆಗಳೇನು?, ರೂಪಾಂತರಗೊಂಡಮೇಲೆ ಮನಸಿನ ಭಾವನೆಗಳನ್ನು ಅದುಮಿಟ್ಟುಕೊಳ್ಳುವುದು, ಅದುಮಿಟ್ಟುಕೊಳ್ಳುವುದಕ್ಕಿಂತ ಮನಸಿಗೆ ಬೇರೆ ಭಾವನೆಗಳು ಬರೆದಹಾಗೆ ನೋಡಿಕೊಳ್ಳುವುದು ಹೇಗೆ?"

"ಅಥವಾ ಎಂತಹ ಭಾವನೆಗಳು ಮೂಡಿದರೂ ಅದಕ್ಕೊಂದು ಮಿತಿ ಹಾಕಿಕೊಂಡು, ಅದರ ಸುಖವನ್ನು ಅನುಭವಿಸಿದರೆ ತಪ್ಪೇ. ಹಾಕಿದ ಗೆರೆ ದಾಟದಂತೆ ಎಚ್ಚರವಹಿಸಿ, ಆ ಕ್ಷಣದಲ್ಲಿ ಮಾತ್ರ ಜೀವಿಸಿ, ಅಲ್ಲೆಯೇ ಮರೆತು,ಮತ್ತೆ ಮತ್ತೆ ಅದನ್ನೇ ನೆನಪಿಸಿಕೊಳ್ಳದಂತೆ, ವರ್ತಮಾನದಲ್ಲಿ ಜೀವಿಸಿದರೆ ತಪ್ಪೇನು ಅನಿಸುತ್ತದೆ.

"ಎಲ್ಲಾ ಗೊಂದಲ, ಇವರ ಜೊತೆ ಮಾತನಾಡುವ ಅಂದರೆ ಅವರು ಮುಗ್ಧರು, ನಾನಲ್ಲದೆ ಬೇರೆ ಹೆಣ್ಣನು ನೋಡದವರು. ಅದರ ಬಗ್ಗೆ ಅಷ್ಟೇನೂ ಯೋಚಿಸದವರು, ಇವರಿಗೆ ಇದೆಲ್ಲಾ ಅರ್ಥವಾಗುತ್ತದೋ ಇಲ್ಲವೋ, ಹೇಳಿದರೂ ನಿನಗೆ ಸರಿ ಅನಿಸಿದ್ದನ್ನು ಮಾಡು ಎನ್ನುವವರು"

" ಇರಲಿ ಒಂದು ದಾರಿ ಸಿಕ್ಕೇ ಸಿಗುತ್ತದೆ"

ದಿನಚರಿ ಅಲ್ಲಿಗೆ ಮುಗಿದಿತ್ತು. ನಿದಾನವಾಗಿ ಪುಟಗಳನ್ನೆಲ್ಲಾ ಸರಿಪಡಿಸಿ, ದಿನಚರಿ ಎಲ್ಲಿತ್ತೋ ಅಲ್ಲಿಯೇ ಇಟ್ಟ.

ಇದ್ದಕಿದ್ದ ಹಾಗೆ ಹೆಂಡತಿಯಮೇಲೆ ಮಮತೆ ಉಕ್ಕಿ ಬಂತು. ಎಷ್ಟು ಒಳ್ಳೆಯವಳು ಅನಿಸಿತು, ಆದ್ದರಿಂದಲೇ ನನ್ನನು ಮುಗ್ಧ ಎಂದು ತಿಳಿದುಕೊಂಡಿದ್ದಾಳೆ. ನಾನೇ ಅವಳಿಗೆ ಮೋಸಮಾಡುತ್ತಿದ್ದೇನೆ. ಇಬ್ಬರು ಒಂದೇ ದೋಣಿಯಲ್ಲಿ ಪಯಣಿಸುತ್ತಿದ್ದೇವೆ ಅನಿಸಿತು. ಅವಳಿಗೆ ತೆರೆದುಕೊಳ್ಳಲು ದಿನಚರಿ ಬರೆಯುವ ಅಭ್ಯಾಸವಾದರೂ ಇದೆ ನನಗೆ ಅದೂ ಇಲ್ಲ. ಅನನ್ಯ ಊರಿನಿಂದ ಬಂದಾಗ, ಮೊದಲು ಬೆಡ್ರೂಮಿಗೆ ಹೋಗಿ ನೋಡಿದ್ದು ತನ್ನ ದಿನಚರಿಯನ್ನು. ಅದು ತಾನು ಇಟ್ಟ ಜಾಗದಲ್ಲೇ ಇದೆ. ಅರೆ ಇವರು ಇದನ್ನು ನೋಡಲಿಲ್ಲವೇ, ಕೂತೂಹಲಕ್ಕಾದರೂ ಓದಲಿಲ್ಲವೇ. ಅವನ ಮೇಲೆ ನಂಬಿಕೆಯಿದ್ದರೂ, ಅವನು ಓದಲಿ.

# ಕಾಲಾಪಾನಿ



**ಯಶಸ್ವಿನಿ**

ಕಾಲಾಪಾನಿ ಅಥವಾ ಕರಿನೀರಿನ ಶಿಕ್ಷೆ ಭಾರತ ಇತಿಹಾಸದಲ್ಲಿನ ಒಂದು ಕರಾಳ ಅಧ್ಯಾಯವಾಗಿದೆ ಹಾಗೂ ಈ ಅಂಡಮಾನ್ ಜೈಲಿನ ನಿರ್ಮಾಣದ ಹಿಂದೆ ಒಂದು ರೋಚಕ ಕಥೆಯೂ ಇದೆ.1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮವು ಕೆಲವು ತಪ್ಪುಗಳಿಂದಾಗಿ ವಿಫಲವಾಯಿತು. ಆದರೆ ಈ ಮಹಾಸಂಗ್ರಾಮದ ನಂತರ ಯುವಕರಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚ್ಚಾಯಿತು. ಹೆಚ್ಚೆಚ್ಚು ಹೋರಾಟಗಾರರು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ಇದರಿಂದಾಗಿ ಬ್ರಿಟೀಷರಿಗೆ ಆತಂಕವು  ಹೆಚ್ಚಾಯಿತು. ಹೇಗಾದರೂ ಮಾಡಿ ಈ ಹೋರಾಟಗಾರರನ್ನು ಮಟ್ಟ ಹಾಕದಿದ್ದರೆ, ತಮಗೆ ಉಳಿಗಾಲವಿಲ್ಲವೆಂದು ಅರಿತರು. ಆಗ ತೀವ್ರವಾದ ಹೋರಾಟ ಮಾಡುವವರನ್ನು ಅಂಡಮಾನ್ ನಿಕೊಬಾರ್ ದ್ವೀಪದ ಹತ್ತಿರವಿದ್ದ "ಚಾತನ್ " ಎಂಬ ದ್ವೀಪದಲ್ಲಿ ಸಣ್ಣ ಬಂಧಿಖಾನೆಯೊಂದನ್ನು ನಿರ್ಮಿಸಿ ಅಲ್ಲಿ ಹೋರಾಟಗಾರರನ್ನು ಎಳೆದು ತಂದು ಬಂಧಿಸುತ್ತಿದ್ದರು. ಬರಬರುತ್ತಾ ಹೋರಾಟಗಾರರ ಸಂಖ್ಯೆ ಹೆಚ್ಚಾದಂತೆ ಆ ಪುಟ್ಟ ಜೈಲಿನಲ್ಲಿ ಸ್ಥಳ ಅಭಾವ ಉಂಟಾಯಿತು. ಆಗ ಬ್ರಿಟೀಷರು ಈ ಸಮಸ್ಯೆಗೊಂದು ಶಾಶ್ವತ ಪರಿಹಾರ ಕಂಡು ಹಿಡಿಯಬೇಕೆಂದು ನಿರ್ಧರಿಸಿದರು. ಆಗ ಅವರಿಗೆ ಹೊಳೆದದ್ದು ಅಂಡಮಾನ್ ಜೈಲಿನಂತಹ ಭಯಂಕರವಾದ "ಯೋಜನೆ"!! ಬ್ರಿಟೀಷರು ಏಕೆ ಈ ಸ್ಥಳವನ್ನೇ ಆಯ್ಕೆ ಮಾಡಿಕೊಂಡರೆಂದರೆ, ಒಮ್ಮೆ ಈ ಕಾರಾಗೃಹಕ್ಕೆ ಬಂದು ಸೇರಿದರೆಂದರೆ ಯಾವುದೇ ಕಾರಣಕ್ಕೂ ಇಲ್ಲಿಂದ ತಪ್ಪಿಸಿಕೊಳ್ಳುವುದೂ ಸಾಧ್ಯವೇ ಇರಲಿಲ್ಲ!

ಅಂಡಮಾನ್ ಜೈಲಿನ ಕಟ್ಟಡದ ನಿರ್ಮಾಣವು 1896 ರಲ್ಲಿ ಪ್ರಾರಂಭವಾಗಿ 1906 ರಲ್ಲಿ ಕೊನೆಗೊಂಡಿತು. ಬರೋಬ್ಬರಿ ಹತ್ತು ವರ್ಷಗಳಷ್ಟು ಸಮಯವನ್ನು ತೆಗೆದುಕೊಂಡಿತು.

ಜೈಲಿನಲ್ಲಿ ಒಟ್ಟಾರೆಯಾಗಿ ಏಳು ವಿಂಗ್ ಗಳಿದ್ದು ಒಟ್ಟು 700 ಸೆಲ್ ಗಳಿವೆ, ನಕ್ಷತ್ರದ ಆಕಾರದಲ್ಲಿ ನಿರ್ಮಿಸಲಾಗಿತ್ತು. ಒಮ್ಮೆ ಈ ಕಾರಾಗೃಹಕ್ಕೆ ಖೈದಿಗಳು ಸೇರಿದರೆಂದರೆ, ತಮ್ಮ ಜೀವ ಹಾಗೂ ಜೀವನದ ಮೇಲಿನ ಆಸೆಯನ್ನು ಸಂಪೂರ್ಣವಾಗಿ ಬಿಟ್ಟು ಬಿಡುತ್ತಿದ್ದರು. ಇಲ್ಲಿ ನೀಡುತ್ತಿದ್ದ ಶಿಕ್ಷೆಗಳು ಘೋರಾತಿಘೋರ. ಮಾನಸಿಕ ಹಾಗು ದೈಹಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದ ಖೈದಿಗಳು, ಅದರಿಂದ ಅನಾರೋಗ್ಯಕ್ಕೆ ತುತ್ತಾಗಿಬಿಡುತ್ತಿದ್ದರು. ಒಂದು ಚಿಕ್ಕ ಕತ್ತಲೆಕೋಣೆಯೊಳಗೆ ಕೇವಲ ಒಂದು ಬೆಳಕಿನ ಕಿಂಡಿ. ಕೋಣೆಯೆಲ್ಲ ಕತ್ತಲೆಮಯ, ಎತ್ತರದ ಗೋಡೆಗಳು. ಖೈದಿಗಳಿಗೆ ತಮ್ಮ ಪಕ್ಕದ ಕೋಣೆಯಲ್ಲಿ ಇರುವಂತಹ ಸಹಖೈದಿಯೊಡನೆ ಮಾತನಾಡುವ ಹಾಗೆಯೂ ಇರಲಿಲ್ಲ, ಏಕೆಂದರೆ ಈ ಜೈಲಿನ ನಿರ್ಮಾಣ ಹಾಗಿತ್ತು. ಹಾಗಾಗಿಯೇ ಅಂಡಮಾನ್ ಜೈಲನ್ನು ಸೆಲ್ಯೂಲರ್ ಜೈಲ್ ಎಂದು ಸಹ ಕರೆಯುತ್ತಾರೆ.



ಭಾರತದ ಸ್ವಾತಂತ್ರ್ಯ ಹೋರಾಟಗಾರರಿಗೆ ಹೃದಯಹೀನ ಬ್ರಿಟೀಷರು ನಿತ್ಯವೂ ನರಕಯಾತನೆಯನ್ನು ನೀಡುತ್ತಿದ್ದರು. ಗಾಣವನ್ನು ತಿರುಗಿಸಿ ಎಣ್ಣೆಯನ್ನು ತೆಗೆಯಬೇಕು, ತೆಂಗಿನಕಾಯಿಯನ್ನು ಸುಲಿಯಬೇಕು, ನಿರ್ದಿಷ್ಟ ಗುರಿಯನ್ನು ತಲುಪಲು ಆಗದಿದ್ದಲ್ಲಿ ಛಡಿಯೇಟು ಬೀಳುತ್ತಿದ್ದವು. ಅಷ್ಟು ದಟ್ಟವಾದ ಅಂಡಮಾನ್ ಕಾಡನ್ನು ಕಡಿದು ನೆಲಸಮ ಮಾಡುವ ಕೆಲಸವನ್ನು ಖೈದಿಗಳಿಗೆ ಕೊಡಲಾಗಿತ್ತು. ಇಲ್ಲಿ ಖೈದಿಗಳಿಗೆ ನೀಡುತ್ತಿದ್ದ ಆಹಾರವೂ ಬಹಳ ಕಳಪೆಯಾಗಿರುತ್ತಿದ್ದವು, ಒಂದು ಹಿಡಿ ಅನ್ನ, ಕಾಡಿನಲ್ಲಿ ಬೆಳೆಯುವ ಎಲೆ ,ಹುಲ್ಲು ಗಳನ್ನೇ ಕೆಲವೊಮ್ಮೆ ಊಟಕ್ಕೆ ನೀಡುತ್ತಿದ್ದರು. ಊಟದಲ್ಲಿ ಹುಳು, ಹುಪ್ಪಟೆಗಳು ಧಾರಾಳವಾಗಿ ಹರಿದಾಡುತ್ತಿದ್ದವು. ಕೇವಲ ಎರಡು ಬಟ್ಟಲನ್ನು ಖೈದಿಗಳಿಗೆ ಕೊಡುತ್ತಿದ್ದರು ಒಂದನ್ನು ಊಟಕ್ಕಾಗಿ ,ಮತ್ತೊಂದನ್ನು ಮಲ,ಮೂತ್ರಗಳಿಗಾಗಿ ಬಳಸಬೇಕಾಗಿತ್ತು. ಹೆಚ್ಚು ಕ್ರಾಂತಿಕಾರಿ ಮನೋಭಾವವಿದ್ದ ಖೈದಿಗಳಿಗೆ, ಕಾಲಿಗೆ ಸರಪಳಿ ಬಿಗಿದು ಹಿಂಸಿಸುತ್ತಿದ್ದರು. ಇಲ್ಲಿನ ಅತೀ ಕಠಿಣ ಶಿಕ್ಷೆಯನ್ನು ತಾಳಲಾರದೆ ಕೆಲವು ಖೈದಿಗಳು ಆತ್ಮಹತ್ಯೆ ಮಾಡಿಕೊಂಡರೆ, ಇನ್ನು ಕೆಲವರನ್ನು ಬ್ರಿಟೀಷರೇ ಊಟದಲ್ಲಿ ವಿಷ ಹಾಕಿ ಕೊಂದುಬಿಡುತ್ತಿದ್ದರು. ಬ್ರಿಟೀಷರು ಹೊಡೆಯುತ್ತಿದ್ದ ಛಡಿಯೇಟಿನಿಂದಾಗಿ ಖೈದಿಗಳ ಚರ್ಮ ಕಿತ್ತು ಬರುತ್ತಿತ್ತು, ಅದರಲ್ಲಿ ರಕ್ತ ಸೋರಿ, ಕೀವು ತುಂಬಿಕೊಂಡು ಸೋಂಕು ತಗುಲಿ ಕೆಲವರು ಸತ್ತರೆ, ಇನ್ನು ಹಲವರು ನಿಗೂಢ ಖಾಯಿಲೆಯಿಂದಾಗಿ ಜೀವತೆತ್ತರು. ಇಲ್ಲಿನ ಕಳಪೆ ಆಹಾರ, ದೈಹಿಕ, ಮಾನಸಿಕ ಹಿಂಸೆ ಹಾಗೂ ಕತ್ತಲೆ ಕೋಣೆ ವಾಸದಿಂದಾಗಿ, ಇಲ್ಲಿನ ಖೈದಿಗಳು ಬಹುಬೇಗನೆ ರೋಗಗಳಿಗೆ ತುತ್ತಾಗುತ್ತಿದ್ದರು. ಆ ಕತ್ತಲ ಕೋಣೆಯೊಳಗೆ ಸರಿಯಾದ ಬೆಳಕಿಯಿಲ್ಲದೆ, ಬೇರೆಯವರೊಡನೆ ಮಾತಾಡಲಾರದೆ, ಖೈದಿಗಳನ್ನು ಒಂಟಿತನ ಹಾಗೂ ಭಯ ಕಾಡುತ್ತಿತ್ತು.

ಇಲ್ಲಿ ಸತ್ತವರ ದೇಹಗಳನ್ನು ಬ್ರಿಟೀಷರು ಯಾವುದೇ ಮುಲಾಜಿಲ್ಲದೆ ಸಮುದ್ರಕ್ಕೆಸೆಯುತ್ತಿದ್ದರು, ಹಾಗೂ ಖೈದಿಗಳ ದಾಖಲಾತಿ ಬಗ್ಗೆ ವಿವರವಾದ ಯಾವುದೇ ದಾಖಲೆಯನ್ನು ಇಡುತ್ತಿರಲಿಲ್ಲ. ಹಾಗಾಗಿ ಎಷ್ಟು ಜನ ಕ್ರಾಂತಿಕಾರರು ಮೃತರಾದರೆಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ. ಇನ್ನು ಜೈಲಿನಿಂದ ತಪ್ಪಿಸಿಕೊಳ್ಳುವುದಂತೂ ಅಸಾಧ್ಯವಾದ ಮಾತು. ಒಂದು ವೇಳೆ ತಪ್ಪಿಸಿಕೊಂಡರೂ, ಆ ದೊಡ್ಡ ಸಮುದ್ರದಲ್ಲಿ ಈಜಲಾರದೆ ಪ್ರಾಣ ಕಳೆದುಕೊಳ್ಳುತ್ತಿದ್ದರು. ಸಮುದ್ರವನ್ನು ದಾಟಿದರೂ ಸಹ, ಮುಂದೆ ಸಿಗುವ ದಟ್ಟವಾದ ಕಾಡಿನಲ್ಲಿ ಅಲೆದು ಅಲೆದು ದಾರಿಗಾಣದೆ, ಹಸಿವಿನಿಂದ ಸಾಯುತ್ತಿದ್ದರು ಅಥವಾ ಯಾವುದಾದರೂ ವಿಷಜಂತುವಿನಿಂದ ಕಚ್ಚಿಸಿಕೊಂಡು ಪ್ರಾಣಬಿಡುತ್ತಿದ್ದರು. ಇಂತಹುದನ್ನೆಲ್ಲ ಯೋಚಿಸಿಯೇ ನಿರ್ದಯಿಗಳಾದ ಬ್ರಿಟೀಷರು ಅಂತಹ ಸ್ಥಳವನ್ನು ಆಯ್ಕೆ ಮಾಡಿ ಕಾರಾಗೃಹವನ್ನು ನಿರ್ಮಿಸಿದ್ದು.

1933ರ ಆಸುಪಾಸಿನಲ್ಲಿ ರವೀಂದ್ರನಾಥ್ ಟಾಗೋರ್ ಮತ್ತು ಗಾಂಧೀಜಿಯವರ ನೇತೃತ್ವದಲ್ಲಿ ಬ್ರಿಟೀಷ್  ಸರ್ಕಾರವನ್ನು ಆಗ್ರಹಪಡಿಸಿದ ಪರಿಣಾಮ, ಕೊನೆಗೂ 1939 ರಲ್ಲಿ ಅಂಡಮಾನ್ ಜೈಲನ್ನು ಶಾಶ್ವತವಾಗಿ ಮುಚ್ಚಲಾಯಿತು ಹಾಗೂ ಉಳಿದ ಕ್ರಾಂತಿಕಾರಿಗಳನ್ನು ಬಿಡುಗಡೆ ಮಾಡಲಾಯಿತು.

ಮೂವತ್ತು ದಶಕಗಳಿಗೂ ಹೆಚ್ಚಿನ ಕಾಲ ಸ್ವಾತಂತ್ರ್ಯ ಹೋರಾಟಗಾರರಿಗೆ ದುಃಸ್ವಪ್ನವಾಗಿ ಕಾಡಿತ್ತು ಈ ಅಂಡಮಾನ್ ಜೈಲ್. ಅಂಡಮಾನ್ ಜೈಲಿನ ಶಿಕ್ಷೆ ಅನುಭವಿಸಿದವರಲ್ಲಿ ಪ್ರಮುಖರು -ವೀರ್ ಸಾವರ್ಕರ್ ,ಅವರ ಸಹೋದರ ಬಾಬುರಾವ್ ಸಾವರ್ಕರ್ , ಯೋಗೇಂದ್ರ ಶುಕ್ಲಾ, ಸೊಹನ್ ಸಿಂಗ್ , ಬಟುಕೇಶ್ವರ ದತ್ತಾ ಹಾಗೂ ಅನೇಕ ಕ್ರಾಂತಿಕಾರರು.

ಈಗ ಈ ಸ್ಥಳವು ಪ್ರವಾಸಿ ತಾಣವಾಗಿದ್ದು, ಲಕ್ಷಾಂತರ ಪ್ರವಾಸಿಗರು ಭೇಟಿನೀಡುತ್ತಾರೆ. ಸಂಜೆಯ ವೇಳೆ ಇಲ್ಲಿ ನಡೆಯುವ “sounds & light show“ ಮೂಲಕ ಸವಿಸ್ತಾರವಾಗಿ ಜೈಲಿನ ಕರಾಳ ಕಥೆಯನ್ನು ಜನರಿಗೆ ತಿಳಿಯಪಡಿಸುತ್ತಾರೆ. ಅಂಡಮಾನ್ ಜೈಲ್ ಸ್ವಾತಂತ್ರಪೂರ್ವ ಭಾರತದ ದುರಂತ ಚಿಹ್ನೆಯಾಗಿ ಉಳಿದುಕೊಂಡಿದೆ, ಹಾಗೂ ಇಲ್ಲಿರುವ ಒಂದೊಂದು ಸೆಲ್ ಗಳು ಒಂದೊಂದು ದುರಂತ ಕಥೆಯನ್ನು ಹೇಳುತ್ತವೆ.

# ಕರ್ನಾಟಕದಲ್ಲಿ ಸ್ತಳೀಯ ಹೈಕಮಾಂಡ್ ಒಂದರ ಅಗತ್ಯತೆ



**ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ**

ಭಾರತದಲ್ಲಿ ಇತ್ತೀಚಿಗೆ ಚುನಾವಣೆ ನಡೆಯಿತು. ಅದಕ್ಕಾಗಿ ನಡೆದ ಪ್ರಹಸನ ಮನರಂಜಕಾತ್ಮಕವಾಗಿಯೂ, ಎದೆ ಹಿಂಡುವ ನೋವಾಗಿಯೂ ಏಕ ಕಾಲದಲ್ಲಿ ಕಾಡಿತು. ತಮ್ಮ ತಮ್ಮ ಪಕ್ಷಗಳಲ್ಲಿ ಟಿಕೆಟ್ ಸಿಗದಿರುವ ಆಕಾಕ್ಷಿಗಳು, ಪಕ್ಷ ತಮ್ಮ ತಾಯಿ ಎಂದು ಹೇಳಿಕೊಳ್ಳುತ್ತಿದ್ದವರು, ತಾಯಿಯ ಮನೆಯಿಂದ ಹೊರನಡೆದರು . ರಾಜಕಾರಣದ ಪ್ರಾರಂಭದಿಂದಲೂ ಯಾವ ಪಕ್ಷದ ವಿರುದ್ಧ ಮಾತನಾಡುತ್ತಿದ್ದರೋ ಅದೇ ಪಕ್ಷಕ್ಕೆ ಸೇರಿಕೊಂಡರು . ಅಂದರೆ, ಹಿಂದೆ ಅವರು ಇತರ ಪಕ್ಷಗಳ ಬಗ್ಗೆ ಹೇಳುತ್ತಿದ್ದ ಮಾತುಗಳೆಲ್ಲವೂ ಸುಳ್ಳಿರಬೇಕು ಅಥವಾ ತಾವೇ ಸುಳ್ಳುಗಾರಿರಬೇಕು. ಇದು ಒಬ್ಬ ರಾಜಕಾರಣಿಯ ಸಂಗತಿಯಲ್ಲ ಎಲ್ಲಾ ರಾಜಕಾರಣಿಗಳದೂ ಇದೆ ನೀತಿ. ಇವರಿಗೆ ನಾಯಕರೆಂಬ ಹಣೆಪಟ್ಟಿ ಬೇರೆ. ತಮಗೇ ಒಂದು ಸಿದ್ಧಾಂತ ಇಲ್ಲದ ಮೇಲೆ ಬೇರೆಯರಿಗೆ ಹೇಗೆ ನಾಯಕರಾಗುತ್ತಾರೆ.

ಭಾರತೀಯ ಜನತಾ ಪಕ್ಷದಲ್ಲಿ ಹಿರಿಯರನ್ನು, ಅದರಲ್ಲೂ ಪಕ್ಷಕ್ಕೆ ದುಡಿದು, ಪಕ್ಷ ಕಟ್ಟಿ ಬೆಳೆಸಿದವರನ್ನು ತಮ್ಮದೇ ನೀತಿಯಿಂದ ನಿರ್ದ್ಯಾಕ್ಷವಾಗಿ ಹೊರಗಿಡಲಾಗುತ್ತಿದೆ. ತಮ್ಮ ದುಡಿಮೆಯ ಅರಿವಿಲ್ಲದ, ತಾವು ಪಕ್ಷಕ್ಕಾಗಿ ತ್ಯಾಗ ಮಾಡಿದ ಸಮಯದ, ಶ್ರಮಗಳ ಅವಗಾಹನೆಯಿಲ್ಲದ ಇಂದಿನ ಹೈಕಮಾಂಡ್, ನೀವು ಪಕ್ಷಕ್ಕೆ ಅನಿವಾರ್ಯ ಅಲ್ಲವೇ ಅಲ್ಲ ಎಂಬಂತೆ ನಡೆದುಕೊಳ್ಳುತ್ತಿದೆ. ವಯಸ್ಸಿನಲ್ಲೂ, ಅನುಭವದಲ್ಲೂ ಹಿರಿಯರು ಎನಿಸಿಕೊಂಡ ನಾಯಕರು ಮನೆಯಲ್ಲಿ ಮೌನವಾಗಿಯೂ, ಹೊರಗೆ ಹೈಕಮಾಂಡ್ ನ್ನು ಹೊಗಳುತ್ತಾ ಕಕ್ಕಾಬಿಕ್ಕಿಯಾಗಿ ಹೋಗಿದ್ದಾರೆ. ಕೆಲವರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಎಲ್ಲವನ್ನೂ ಸಹಿಸಿಕೊಳುತ್ತಿದ್ದಾರ. ಕೆಲವರಿಗೆ ಮಕ್ಕಳ ಭವಿಷ್ಯದ ಬೆಳೆವಣಿಗೆಗೆ ಸಹಾಯ ಮಾಡುವ ಭಾಗ್ಯವು ಇಲ್ಲವಾಗಿದೆ. ತಮ್ಮನ್ನು ಗೌರವಿತವಾಗಿ ಕಳುಹಿಸಿ ಎಂದು ಮೊರೆ ಹಿಡುತ್ತಿದ್ದಾರೆ. ಯಾರ ಮೊರೆಯೂ ಹೀಗಿರುವ ಹೈಕಮಾಂಡ್ ಗೆ ಕೇಳಿಸುತ್ತಿಲ್ಲ. ತಾವು ನಡೆದಿದ್ದೇ ದಾರಿ ಎನ್ನುತ್ತಿದ್ದಾರೆ, ತಮ್ಮ ಹೊಸ ಪ್ರಯೋಗ ಅಧಿಕಾರದ ಹತ್ತಿರಕ್ಕೆ ತೆಗೆದುಕೊಂಡು ಹೋಗುತ್ತದೆ ಎಂಬ ನಂಬಿಕೆ, ಅದು ನಿಜವಿರಲೂಬಹುದು.

ಇನ್ನು ಕಾಂಗ್ರೆಸ್ ಪಕ್ಷದ್ದೂ ಇದೇ ಗತಿ, ಆದರೆ ಕಾಂಗ್ರೆಸ್ಸಿನಲ್ಲಿ ಹಿರಿಯರಿಗೆ ಇನ್ನೂ ಸ್ವಲ್ಪ ಬೆಲೆಯಿದೆ. ಆ ಪಕ್ಷ ತಮ್ಮ ಹಿರಿಯ ನಾಯಕರನ್ನು ಚನ್ನಾಗಿಯೇ ನಡೆಸಿಕೊಳ್ಳುತ್ತಿದೆ. ಕಿರಿಯರಿಗೆ ದಾರಿಮಾಡಿಕೊಡದೆ, ಬರೀ ಹಳಬರೇ ಮತ್ತೆ ಮತ್ತೆ ಅಧಿಕಾರ ಮಾಡುತ್ತಿರುವುದಕ್ಕಾಗಿ ಕಾಂಗ್ರೆಸ್ ಬೆಲೆ ತೆರುತ್ತಿದೆ ಎಂಬ ಮಾತೂ ಕೇಳಿಬರುತ್ತಿದೆ.

ಎರಡೂ ರಾಷ್ಟ್ರೀಯ ಪಕ್ಷಗಳ ಹೈ ಕಮ್ಯಾಂಡ್ ಇರುವುದು ಉತ್ತರ ಭಾರತದಲ್ಲಿ, ದಕ್ಷಿಣ ಭಾರತೀಯರನ್ನು ಮದ್ರಾಸಿಗಳೆಂದು ಕರೆಯುವ, ದಕ್ಷಿಣ ಭಾರತದಲ್ಲಿ ಎಷ್ಟು ಭಾಷೆಗಳಿವೆ, ಎಂತಹ ಆಚಾರಗಳಿವೆ ಎಂಬುದನ್ನೂ ಅರಿಯದ, ಯಾವಾಗಲೂ ಹಿಂದಿಯನ್ನೋ, ಉತ್ತರದ ಭಾವಗಳನ್ನೋ, ದಕ್ಷಿಣ ಭಾರತದ ದೇವತೆಗಳ ಅರಿವಿಲ್ಲದೆ ಇನ್ಯಾವುದೋ ದೇವರ ಭಾವನಾತ್ಮಕ ವಿಷಯಗಳನ್ನೋ ಹೇರುತ್ತಾ, ದಕ್ಷಿಣದಲ್ಲಿರದ ಧರ್ಮ ಬೇಧವ ತುರುಕಿ, ಅಧಿಕಾರದ ಆಸೆಗೆ ಶರಣಾದ ಕೆಲ ನಾಯಕರಿಂದ ತಮಗೆ ಬೇಕಾದ ಹಾಗೆ ಪಕ್ಷ ನಡೆಸುತ್ತಾರೆ. ಕೆಲವು ಪಕ್ಷಗಳು ದಕ್ಷಿಣದ ನಾಯಕರ ಸಲಹೆ ಕೇಳಿದರೂ, ತಮಗೆ ಬೇಕಾದ ಹಾಗೆ ತೀರ್ಮಾನ ಮಾಡುತ್ತಾರೆ. ಕರ್ನಾಟಕದ ಮುಖ್ಯಮಂತ್ರಿಯ ಆಯ್ಕೆ ಆರಿಸಿಬಂದ ಶಾಸಕರಿಂದಲೋ, ಕರ್ನಾಟಕದ ಜನತೆಯಿಂದಲೋ, ಕರ್ನಾಟಕದ ನಾಯಕರಿಂದಲೋ ಆಗದೆ ಎಲ್ಲೋ ಇರುವ ಹೈಕಮಾಂಡ್ ನಿಂದ ಆಗುತ್ತದೆ. ಇಂತಹ ಮುಖ್ಯಮಂತ್ರಿ ಕರ್ನಾಟಕದ ಹಿತಕ್ಕಾಗಿ ಸರ್ಕಾರ ನಡೆಸದೆ, ಹೈಕಮಾಂಡ್ ನ ಮರ್ಜಿಗೆ ಬಿದ್ದು ಸರಕಾರ ನಡೆಸಬೇಕಾಗುತ್ತದೆ, ತನಗೆ ಸರಿ ಕಾಣಿಸಿದ ಜನ ಹಿತ ಕಾರ್ಯಕ್ರಮಗಳ ಅನುಷ್ಠಾನಕ್ಕೂ ಹೈಕಮಾಂಡ್ ನ ಅಪ್ಪಣೆ ಕೇಳಬೇಕಾಗುತ್ತದೆ. ಸ್ವಲ್ಪ ಏಮಾರಿದರು ಹೈಕಮಾಂಡ್ ನಿಂದ ಮುಚ್ಚಿದ ಲಕೋಟೆಯಲ್ಲಿ ಇನ್ನೊಬ ಮುಖ್ಯಮಂತ್ರಿಯ ಹೆಸರು ಬಂದಿಳಿಯುತ್ತದೆ.

ಆದ್ದರಿಂದ, ಕರ್ನಾಟಕಕ್ಕೆ ಬೇಕಾಗಿರುವುದು ಸ್ಥಳೀಯ ಹೈಕಮಾಂಡ್, ಕರ್ನಾಟಕದ ಹಿತಕ್ಕೆ ಧಕ್ಕೆ ಬಂದಾಗ ಎದುರಿಸುವ ಹೈಕಮಾಂಡ್, ಕರ್ನಾಟಕದ ಜನರ ನಾಡಿ ಮಿಡಿತ, ಅಗತ್ಯಗಳು, ಅವಸರಗಳು ಗೊತ್ತಿರುವ ಹೈಕಮಾಂಡ್. ಭಾಷೆ, ಜಲ, ನೆಲಕ್ಕೆ ಅನ್ಯಾಯವಾದಾಗ ಅಧಿಕಾರಕ್ಕೆ, ದಾಕ್ಷಿಣ್ಯಕ್ಕೆ ಜೋತುಬೀಳದೆ ಹೋರಾಡುವ ಹೈಕಮಾಂಡ್. ಇಂತಹ ಸ್ಥಳೀಯ ಪಕ್ಷಗಳು ಮಾಡಿಕೊಳ್ಳುತ್ತಿರುವ ಲಾಭವನ್ನು ನಾವು ತಮಿಳು ನಾಡಿನಲ್ಲಿ, ಆಂಧ್ರ ಪ್ರದೇಶದಲ್ಲಿ ಹಾಗು ಬಿಹಾರದಲ್ಲಿ ನೋಡುತ್ತಿದ್ದೇವೆ. ಆಂಧ್ರ ಪ್ರದೇಶ ಹಾಗು ಬಿಹಾರದ ಸ್ಥಳೀಯ ಪಕ್ಷಗಳು ಈಗ ಕೇಂದ್ರ ಸರ್ಕಾರದ ಭಾಗವಾಗಿ ತಮ್ಮ ರಾಜ್ಯಗಳಿಗೆ ಬೇಕಾದ ಲಾಭ ಪಡೆದುಕೊಳ್ಳುತ್ತವೆ.

ಸ್ಥಳೀಯ ಪಕ್ಷಗಳು ಇಂತಹ ಅಗತ್ಯವನ್ನು ತೀರಿಸಲು ಸಾಧ್ಯವಾದರೂ, ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಅಂತಹ ಗಟ್ಟಿಯಾದ ಸ್ಥಳೀಯ ಪಕ್ಷದ ಉದಯವಾಗಲಿಲ್ಲ, ಜನತಾ ಪರಿವಾರ ಮತ್ತೆ ಮತ್ತೆ ಇಬ್ಭಾಗವಾಗುತ್ತ ಈಗ ಜಾತ್ಯತೀತ ಜನತಾದಳವಾಗಿ ಒಂದು ಕುಟುಂಬದ ಆಸ್ತಿಯಾಗಿ ಹೋಗಿದೆ, ಅದೇ ಪಕ್ಷ ಇಡೀ ರಾಜ್ಯದ ಆಸ್ತಿಯಾದರೆ ಏನಾದರೂ ಒಳ್ಳೆಯದಾಗಬಹುದೇನೋ.



# ಕ್ರೀಡೆ-ಕ್ರಿಕೆಟ್ ಸುದ್ದಿ



# ಭಾರತ ಮತ್ತೊಮ್ಮೆ ವರ್ಲ್ಡ್ ಕಪ್ ಗೆದ್ದಿದೆ!

**ವಿನಯ್ ಕುಮಾರ್,** ಮೈಸೂರ್

ಭಾರತ ಮತ್ತೊಮ್ಮೆ ವರ್ಲ್ಡ್ ಕಪ್ ಗೆದ್ದಿದೆ, ಹಾಗೆಯೇ ಹಳೆಯದನ್ನು ಮೆಲಕು ಹಾಕುತ್ತಾ...

ಆ ದಿನ ಗಾನ ಕೋಗಿಲೆ ಶ್ರೀಮತಿ ಲತಾ ಮಂಗೇಶ್ಕರ್, ದೆಹಲಿಯ ವೇದಿಕೆಯ ಮೇಲೆ ನಿಂತು ಈ ಹಾಡನ್ನು ಹಾಡುತ್ತಿದ್ದಾಳೆ..





ಭಾರತ್ ವಿಶ್ವ ವಿಜೇತ ಆಪ್ಣ

ಭಾರತ್ ವಿಶ್ವ ವಿಜೇತ

ಸಂಗ್ ಹೈ ವಿಶ್ವ ವಿಜೇತ ಆಪ್ಣ

ಸಂಗ್ ಹೈ ವಿಶ್ವ ವಿಜೇತ

ಹರ್ ಏಕ್ ದಿಶಾ ಮೇ  ವಿಜಯ್ ಮಿಲೆ

ಹಮೆ ಇಸ್ಕಾ ಭಲ್ ದೇತಾ

ಖೇಲ್ ಕೆ ದುನಿಯಾ ಮೆ ಭಾರತ್ ನೇ

ಲಿಖಾ ಹೈ ಇತಿಹಾಸ ನ್ಯಾಯ

ಜೀತ್ ಜ್ಯಾದ  ಕಾಯಂ ರಖ್ನೇ ಕೋ

ಜಗ ಏಕ್ ವಿಶ್ವಾಸ್ ನಯ

ಭಾರತ್ ವಿಶ್ವ ವಿಜೇತ ಆಪ್ಣ
ಭಾರತ್ ವಿಶ್ವ ವಿಜೇತ

ಕೇಳುಗರೆಲ್ಲಾ ಸಂಭ್ರಮಿಸುತ್ತಿದ್ದಾರೆ. ಈ ರಸಸಂಜೆಗಾಗಿ ಹಾಗು ಸನ್ಮಾನಿತರಿಗಾಗಿ ಬರೆದ ಹಾಡು ಇದು. ಇಲ್ಲಿ ಕೆಳಗೆ ಕುಳಿತಿದ್ದ ನರೇಂದ್ರ ಕುಮಾರ್ ಪ್ರಸಾದ್ ರಾವ್ ಸಾಲ್ವೇ (NKP Salve) ಅವರ ಕಣ್ಣಂಚಿನಲ್ಲಿ ಆನಂದ ಭಾಷ್ಪ, ಹಾಗೆ ಒರೆಸಿಕೊಳ್ಳಲು ಪಕ್ಕಕ್ಕೆ ತಿರುಗಿದರೆ ರಾಜ್ ಕೂಡ ಕಣ್ಣು ಒರೆಸಿ ಕೊಳ್ಳುತ್ತಿದ್ದಾರೆ. ರಾಜ್ ಅಲಿಯಾಸ್ ಯುವರಾಜ ರಾಜ್ ಸಿಂಗ್ ದುಂಗರಾಪುರ್ , ದುಂಗರಾಪುರ್ ಪ್ರಾಂತ್ಯದ ಯುವರಾಜ, ಕಟ್ಟಾ ಕ್ರಿಕೆಟಿಗ!!

ಗಾನ ಕೋಗಿಲೆ ಶ್ರೀಮತಿ ಲತಾ ಮಂಗೇಶ್ಕರ್ ಮೇರೇ ವತನ್ ಕೇ ಲೋಗೋ ಎಂಬ ಹಾಡನ್ನು ಭಾರತದ ಗಡಿಯನ್ನು ಕಾಯುವ ಯೋಧರಿಗೆ ಹಾಡಿದ್ದು, ಈಗ ಈ ಹಾಡನ್ನು ಅರ್ಪಿಸಿದ್ದು 1983 ರ ಕ್ರಿಕೆಟ್ ವರ್ಲ್ಡ್ ಕಪ್ ಗೆದ್ದು ಬಂದ ಭಾರತದ ಕ್ರಿಕೆಟ್ ತಂಡಕ್ಕೆ. NKP ಸಾಲ್ವೇ ಅವರಿಗೆ ಸಂತೋಷ ಭಾಷ್ಪ ತಡೆಯಲಾಗುತ್ತಿಲ್ಲಾ, ಪಕ್ಕದಲ್ಲೇ ಕುಳಿತಿದ್ದ ರಾಜ್, ಸಾಲ್ವೇ ಅವರ ಕೈ ಅಮುಕುತಿದ್ದಾರೆ.

ಸಾಲ್ವೇ ಅವರ ಆತಂಕ ದುಗುಡ ಆಗುತ್ತೆ. ತಮ್ಮ ಸಹಾಯಕನಿಗೆ ಕರೆ ಮಾಡುತ್ತಾರೆ

ಸಾಲ್ವೇ: ನನ್ನ MP ಫಂಡ್ ನಲ್ಲಿ ಎಷ್ಟು ಹಣ ಇದೆ?

ಸಹಾಯಕ: ಸ್ವಾಮಿ, ಈ ಬಾರಿಯ ಬಜೆಟ್ ನಲ್ಲಿ ಎರಡು ಲಕ್ಷ ಬಂದಿದೆ, ಸ್ವಲ್ಪ ಖರ್ಚಾಗಿದೆ, ಉಳಿದದ್ದು ಇದೆ.

ತಡ ಮಾಡದೆ ಸಾಲ್ವೇ ಅವರು ದೆಹಲಿಗೆ ಹೊರಡುತ್ತಾರೆ. ಆಗಿನ ಯುವ ನಾಯಕ, ರಾಜೀವ್ ಗಾಂಧಿ ಅವರನ್ನು ಭೇಟಿ ಮಾಡಲು ಹೋಗುತ್ತಾರೆ. ರಾಜೀವ್ ಆಗ ತಾನೇ 1982ರ ಏಷ್ಯಾಡ್ ಗೇಮ್ಸ್ ನ ರೂವಾರಿ ಎಂದು ಒಳ್ಳೆಯ ಹೆಸರು ಪಡೆದಿರುತ್ತಾರೆ ಹಾಗು ಕ್ರೀಡೆಯ ಬಗ್ಗೆ, ಯುವ ಜನಾಂಗದ ಮನಸ್ಸನ್ನು ಅರಿತಿರುವ ಹಾಗು ಮಿಡಿಯುವ ಯುವ ನಾಯಕ ಎಂಬ ಪಟ್ಟವನ್ನೂ ಪಡೆದಿರುತ್ತಾರೆ. ರಾಜೀವ್ ಗಾಂಧಿ ನೇರವಾಗಿ "ಅಮ್ಮನಿಗೆ BCCI ಇಷ್ಟವಿಲ್ಲಾ, ಹಾಗಾಗಿ ತಾನು ಏನು ಮಾಡಲು ಸಾಧ್ಯವಿಲ್ಲ" ಎಂದು ಬಿಡುತ್ತಾರೆ. ಇದಕ್ಕೆ ಮೊದಲು ಪ್ರಧಾನ ಮಂತ್ರಿ ಇಂದಿರಾ ಗಾಂಧಿ, ದೇಶಕ್ಕೆ ಇಷ್ಟು ಕಷ್ಟವಿರುವಾಗ, ಕ್ರಿಕೆಟ್ ತಂಡವನ್ನು ವಿದೇಶಕ್ಕೆ ಕಲಿಸಲು ಕಷ್ಟ ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಆದರೂ ಸಾಲ್ವೇ ಧೈರ್ಯ ಮಾಡಿ ಮತ್ತೊಮ್ಮೆ ಇಂದಿರಾ ಗಾಂಧಿ ಅವರನ್ನು ಭೇಟಿ ಮಾಡಿ, BCCI ಗೆ ಸಹಾಯ ಮಾಡುವಂತೆ ಕೇಳಿಕೊಳ್ಳುತ್ತಾರೆ, ಆದರೆ ಇಂದಿರಾಜಿ ಯಾವುದೇ ಭರವಸೆ ಕೊಡುವುದಿಲ್ಲ. ಪೆಚ್ಚು ಮೋರೆಯೊಂದಿಗೆ ಸಾಲ್ವೇ ಊರಿಗೆ, ನಾಗಪುರಕ್ಕೆ ವಾಪಸಾಗುತ್ತಾರೆ.

ಮರುದಿನ ಮುಂಜಾನೆ ತಮ್ಮ ನೆಚ್ಚಿನ ಗೆಳೆಯ ರಾಜ್ ಗೆ ಫೋನಾಯಿಸುತ್ತಾರೆ.

ರಾಜ್: ಸಾಲ್ವೇ, ಮೂರುದಿನದಿಂದ ನಿನ್ನ ಕರೆಗೆ ಕಾಯ್ತಾ ಇದೀನಿ, ಶುಭಾಶಯ ಕಣೋ, ಹೇಳು ಕ್ರಿಕೆಟ್ ತಂಡಕ್ಕೆ ಎಷ್ಟು ಬಹುಮಾನ ಘೋಷಣೆ ಮಾಡ್ತಿದೀಯಾ?

ಸಾಲ್ವೇ: ಧನ್ಯವಾದ ರಾಜ್, ಪ್ರತಿಯೊಬ್ಬರಿಗೂ ಇಪ್ಪತ್ತರಿಂದ, ಇಪ್ಪತ್ತೈದು ಸಾವಿರ ಕೊಡೋ ಅಷ್ಟು ಹಣವಿದೆ.. ಎಂದು ಎಲ್ಲಾ ಕಥೆ ಹೇಳುತ್ತಾರೆ.. ನಂತರ "ರಾಜ್, ನೀನೆ ಸಹಾಯ ಮಾಡ್ಬೇಕು"

ರಾಜ್: ಏನು, ಇಪ್ಪತ್ತೈದು ಸಾವಿರಾನ, ಏನೂ ಘೋಷಣೆ ಮಾಡಬೇಡ, ಮುಖಬಂಗ ವಾಗುತ್ತೆ, ನಾನೇನಾದ್ರೂ ಮಾಡ್ತೀನಿ

ರಾಜ್ ಆಕೆಗೆ ಫೋನ್ ಮಾಡ್ತಾರೆ.

ಆಕೆ: ಶುಭಾಶಯ ರಾಜ್, ಇದೊಂದು ಸುವರ್ಣ ಯುಗ, ಭಾರತ ತಂಡ ವರ್ಲ್ಡ್ ಕಪ್ ಗೆದ್ದಿದೆ, ನಮ್ಮ ಕಾಲಘಟ್ಟದಲ್ಲಿ ನಡೆದದ್ದು, ನಾವು ಸಾಕ್ಷಿ ಆಗಿದ್ದು, ಇವೆಲ್ಲವೂ ನಮ್ಮ ಭಾಗ್ಯ, ಯಾಕ್ ರಾಜ ನಾನ್ ಮಾತಾಡ್ತಾನೆ ಇದೀನಿ, ನೀನು ಹೂಂ ಅಂತಾನೂ ಹೇಳ್ತಾ ಇಲ್ಲಾ

ರಾಜ್: ಮಿತು, ಏನ್ ಹೇಳ್ಲಿ, ದೇಶದ ಜನ ಈ ಗೆಲುವನ್ನು ಹಬ್ಬದ ತರಹ ಆಚರಿಸುತ್ತಿದ್ದಾರೆ, ಆದ್ರೆ ನಮ್ಮ BCCI ಹಾಗು ಘನ ಸರ್ಕಾರ ಗೆದ್ದು ಬಂದ ಆಟಗಾರರಿಗೆ ಬಹುಮಾನ ಕೊಡಲು ದುಡ್ಡಿಲ್ಲಾ ಅಂತಿದೆ.

ಮಿತು: ರಾಜ್!! ಏನ್ ಹೇಳ್ತಿದೀಯಾ. ಸರಿ ಅರ್ಧಗಂಟೆಯಲ್ಲಿ ಕರೆ ಮಾಡ್ತೀನೆ.

ಮಿತು ಹತ್ತಾರು ಜನಕ್ಕೆ ಕರೆ ಮಾಡಿದ್ದಾಳೆ, ಈ ವಿಷಯ ಹಂಚಿಕೊಂಡಿದ್ದಾಳೆ. ಹಾಗೆ ಒಂದು ಯೋಜನೆ ತಯಾರಾಗಿದೆ "ಅದೇ ಲತಾ ಮಂಗೇಶ್ಕರ್ ರಸಸಂಜೆ"!! ಇದು ನಡೆದದ್ದು ದೆಹಲಿಯಲ್ಲಿ 17ನೇ ಆಗಸ್ಟ್ 1983 ರಂದು!!

ಹಾಗಾಗಿ, ಇಲ್ಲಿ ಕೆಳಗೆ ಕುಳಿತಿದ್ದ ಸಾಲ್ವೇ ಹಾಗು ರಾಜ್ ಕಣ್ಣ ಅಂಚಲ್ಲಿ ನೀರು. ಆದಿನ ವೇದಿಕೆಯಲ್ಲಿ ಬರೋಬರಿ ಇಪ್ಪತ್ತು ಲಕ್ಷ ಚಂದವೆತ್ತಿದರು ಶ್ರೀಮತಿ ಲತಾ ಮಂಗೇಶ್ಕರ್. ಪ್ರತಿಯೊಬ್ಬ ಆಟಗಾರರನ್ನು ಸನ್ಮಾನಿಸಿ, ಒಂದು ಲಕ್ಷ ರೂಪಾಯಿ ಕೊಡಲಾಯಿತು. ದೆಹಲಿಯಲ್ಲಿ ನಡೆದ ಈ ರಸಸಂಜೆ ಸಮಾರಂಭಕ್ಕೆ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ, ಯುವ ನಾಯಕ ರಾಜೀವ್ ಗಾಂಧೀ ಕೂಡ ಹಾಜರಿದ್ದರು!

ವೆಸ್ಟ್ ಇಂಡೀಸ್ - 2024 ಜೂನ್ 29

ಇತಿಹಾಸ ಮರುಕಳಿಸಿದೆ, ಭಾರತ ಮತ್ತೊಮ್ಮೆ ವರ್ಲ್ಡ್ ಕಪ್ ಗೆದ್ದಿದೆ. ಈಗಿನ BCCI ನ ರೂವಾರಿ ಜೈ ಶಾ ಹಾಗು ಅಧ್ಯಕ್ಷರು ರೋಜರ್ ಬಿನ್ನಿ, ತಂಡದ ಜೊತೆಗೆ ಇದ್ದು ಈ ಗೆಲುವನ್ನು ಸಂಭ್ರಮಿಸಿದ್ದಾರೆ. BCCI ಬರೋಬರಿ ನೂರಾಇಪ್ಪತ್ತೈದು (125) ಕೋಟಿ ರೂಪಾಯಿ ಬಹುಮಾನವನ್ನು ಗೆದ್ದ ತಂಡಕ್ಕೆ ಘೋಷಿಸಿದೆ (ಅಂದಾಜಿನ ಪ್ರಕಾರ BCCI ನ ಈ ದಿನದ ಆಸ್ತಿ ಮೊತ್ತ 2.2 ಬಿಲಿಯನ್ ಡಾಲರ್ ಗಳು).

ಮತ್ತೊಮ್ಮೆ ಪ್ರಪಂಚದಾದ್ಯಂತ ಭಾರತದ ಪ್ರಜೆಗಳು ಈ ಗೆಲುವನ್ನು ಹಬ್ಬದ ರೀತಿಯಲ್ಲಿ ಸಂಭ್ರಮಿಸಿದೆ, ಮುಂಬೈ ನಲ್ಲಿ ನಡೆದ ಮೆರವಣಿಗೆ ಇದಕ್ಕೆ ಕಳಶಪ್ರಾಯ! ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು, ಗೆದ್ದ ತಂಡವನ್ನು ಮನೆಗೆ ಕರೆದು ತಮ್ಮ ಸಂತೋಷವನ್ನು ಹಂಚಿಕೊಂಡಿದ್ದಾರೆ.

ಪರದಲ್ಲಿನ ಆ ನರೇಂದ್ರ ಸಾಲ್ವೇ, ರಾಜ್ ಹಾಗು ಮಿತುವಿನ ಆತ್ಮಗಳು ಈ ಗೌರವವನ್ನು ಕಂಡು ಸಂತೃಪ್ತಿ ಗೊಂಡಿವೆ ಎಂದು ಆಶಿಸೋಣ!

ಮೈಸೂರು ವಿನ್ಯಾ!!



ಆ ದಿನ ಲತಾ ಹಾಡುತ್ತಿದ್ದರೆ, NKP ಸಾಲ್ವೇ ಅವರಿಗೆ ಕೆಲವು ದಿನಗಳ ಹಿಂದೆ ನಡೆದ ವಿದ್ಯಮಾನಗಳೆಲ್ಲಾ ಜ್ಞಾಪಕಕ್ಕೆ ಬರುತ್ತಿದೆ.

NKP ಸಾಲ್ವೇ ಭಾರತ ಕ್ರಿಕೆಟ್ ಮಂಡಳಿಯ (BCCI) ಅಧ್ಯಕ್ಷರಾಗಿದ್ದವರು, ಅಲ್ಲದೇ ಕಾಂಗ್ರೆಸ್ ಪಾರ್ಟಿ ಇಂದ ಲೋಕಸಭೆಗೆ ಆಯ್ಕೆ ಆಗಿದ್ದವರು.

1983 ಜೂನ್ 25 ರಂದು ಭಾರತ, ದೂರದ ಇಂಗ್ಲೆಂಡ್ ನಲ್ಲಿ, ವೆಸ್ಟ್ ಇಂಡೀಸ್ ವಿರುದ್ಧ ರೋಚಕ ಜಯ ಸಾಧಿಸಿತು. ಭಾರತ ತಂಡ ಒಂದು ಇತಿಹಾಸವನ್ನೇ ಸೃಷ್ಟಿಸಿತು. ಆದಿನ BCCI ನ ಅಧ್ಯಕ್ಷರಾಗಿದ್ದವರು NKP ಸಾಲ್ವೇ!

ಭಾರತ - 1983 ಜೂನ್ 26 ರ ಬೆಳಗಿನ ಜಾವ

NKP ಸಾಲ್ವೇ ಅವರಿಗೆ ಆ ದಿನ ಮೇಲಿಂದ ಮೇಲೆ ಕರೆಗಳು ಬರುತ್ತಲಿವೆ. ಶುಭಾಶಯ, ಭಾರತ ತಂಡ ನಿಮ್ಮ ಮುಂದಾಳತ್ವದಲ್ಲಿ ಮಹತ್ತರ ಸಾಧನೆ ಮಾಡಿದೆ, ಇದೊಂದು ಭಾರತದ ಕ್ರಿಕೆಟ್ ಇತಿಹಾಸದ ಮೈಲಿಗಲ್ಲು!! ಹೀಗೆ ಮೇಲಿಂದ ಮೇಲೆ ಕರೆಗಳು.

NKP ಸಾಲ್ವೇ ಅವರಿಗೆ ಮನಸ್ಸಿನಲ್ಲಿ ಆತಂಕ! ವಿಜಯಪತಾಕೆ ಹಾರಿಸಿ ಬಂದ ತಂಡಕ್ಕೆ ಕೊಡುವುದಾದರೂ ಏನನ್ನು?

ತಮ್ಮ BCCI ಖಜಾಂಚಿಗೆ ಕರೆ ಮಾಡುತ್ತಾರೆ.

ಸಾಲ್ವೇ: BCCI ಖಾತೆಯಲ್ಲಿ ಎಷ್ಟು ಹಣ ಇದೆ?


ಖಜಾಂಚಿ: ಸ್ವಾಮಿ ಇಪ್ಪತ್ತು ಸಾವಿರ ರೂಪಾಯಿ

ಸಾಲ್ವೇ: ಬರಿ ಇಪ್ಪತ್ತು ಸಾವಿರನಾ?

ಖಜಾಂಚಿ: ಹೌದು ಸ್ವಾಮಿ

ಸಾಲ್ವೇ: ಯಾವುದಾದರೂ ಬಾಕಿ ಖಾತೆಗೆ ಬರೋದು ಇದೆಯೇ?

ಖಜಾಂಚಿ: ಇಲ್ಲಾ ಸ್ವಾಮಿ, ಇದರಲ್ಲಿ ಕೆಲವೊಬ್ಬರಿಗೆ ಬಾಕಿ ಕೊಡುವುದಿದೆ, ಅದಿನ್ನೂ ಕೊಟ್ಟಿಲ್ಲ





**ಚಿನ್ನಿ-ಕೋಲು:** ರಾಜ್ ಹಾಗು ಮಿತು ಇಬ್ಬರೂ ಅಮರ ಪ್ರೇಮಿಗಳು.

ಸಂಸ್ಕೃತದಲ್ಲಿ ಮಿತು ಅಂದ್ರೆ ಸಿಹಿ, ಬ್ರೆಝಿಲಿಯನ್ ಭಾಷೆಯಲ್ಲಿ ಅದ್ಭುತ ಹಾಗು ವಿಶಿಷ್ಟ ಪಕ್ಷಿ, ಹಾಗಾಗಿ ರಾಜ್ ಆಕೆಯನ್ನು ಸಂಬೋಧಿಸುತ್ತಿದ್ದದ್ದೇ ಮಿತು ಅಂತ. ಮಿತು ಕೂಡ ಮಿತಭಾಷಿ, ಆದರೆ ರಾಜ್ ಜೊತೆ ಮಾತ್ರ ವಾಚಾಳಿ. ಇಬ್ಬರೂ ಮದುವೆ ಎಂಬ ನಂಟಿಗೆ ಗಂಟು ಬೀಳದೆ ಒಬ್ಬಂಟಿಯಾಗೇ ಉಳಿದರು, ಪ್ರೇಮಿಗಳಾಗಿ ಪಾರ್ಕ್ ಸುತ್ತಲಿಲ್ಲ, ಎಲ್ಲೂ ಆಚೆ ಹೇಳಿಕೊಳ್ಳಲಿಲ್ಲ, ಕಡೆಯ ತನಕ ಪರಸ್ಪರ ಪ್ರೇಮಿಸುತ್ತಿದರು, ಹೊರ ಪ್ರಪಂಚಕ್ಕೆ ಇದು ತಿಳಿಯಲೇ ಇಲ್ಲ. ಈ ಮಿತು ಮತ್ಯಾರು ಅಲ್ಲ, ನಮ್ಮ ಗಾನ ಕೋಗಿಲೆ ಶ್ರೀಮತಿ ಲತಾ ಮಂಗೇಶ್ಕರ್!!!

ಮೂಕ ಹಕ್ಕಿಯು ಹಾಡುತಿದೆ

ಹಾಡುತಿದೆ ಹಾಡುತಿದೆ ಹಾಡುತಿದೆ

ಭಾಷೆಗೂ ನಿಲುಕದ ಭಾವಗೀತೆಯ

ಸಾರಿ ಸಾರಿ ಹಾಡುತಿದೆ



# ಕವನಗಳು



KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಝರಿಯ ಪರಿ

**ಸ್ವರಾ,** *ಮೈಸೂರು*



**||ಝರಿಯ ಪರಿ||**

ಸುರ ಲೋಕದಿಂದ ಧರೆಗಿಳಿದು ಬಂದ
ಪರಮ ಪಾವನೆ ಸಲಿಲೆ ಕಾವೇರಿ ಚಂದ|
ಪರಿಸರೆಯು ನಗುತಿಹಳು ಹಸುರುಡೆಗೆಯಿಂದ
ಧರಣಿ ಮನುಜನರ ನಡುವೆ ಮಧುರಾನುಬಂಧ||೧||

ಬಿರುಗಾಳಿ ಬಿರುಸಾಗಿ ಆಷಾಡದಲ್ಲಿ
ಸುರಿಯುತಿಹ ವರ್ಷಿಣಿಯು ಆವೇಶದಲ್ಲಿ
ಜಲಪಾತದಾಕರ್ಷ ಕರುನಾಡಿನಲ್ಲಿ
ಜಲರಾಶಿ ಸಂಭ್ರಮವು ನೊರೆ ಹೊನಲಿನಲ್ಲಿ||೨||

ಗಿರಿ ಶಿಖರ ಸವರುತಲಿ ಧುಮುಕುತಲಿ ಇಳಿದು
ಹರಿಪಾದ ಮುದ್ದಿಸುತ ಕಾವೇರಿ ಹರಿದು
ವನರಾಶಿ ನಡುವಿನಲಿ ಸರಸರನೆ ಸರಿದು
ಮನದೇವ ಶ್ರೀ ರಾಮ ನೆಲೆ ಕ್ಷೇತ್ರ ತೊಳೆದು||೩||

ಮೋದದಲಿ ಮೆರೆಯುತಿಹ ಮೋಹನಾಂಗಿಯ ನೋಟ
ನಾದವದು ಶುಕ-ಪಿಕಗಳಿಂಚರದ ಮಾಟ
ಪಶು ಪಕ್ಷಿ ಕೀಟಗಳ ಕಲರವದ ಕೂಟ
ರಸ ಸಮಯದೊಳಗಿಹುದು ಪರಮಾನ್ನದೂಟ||೪||

ಚುಂಚನ ಕಟ್ಟೆಯಾ *ಝರಿಯ ಪರಿ* ನೋಡಿ
ಕುಂಚದಿಂ ಚಿತ್ರಣವು ಹೃದಯದಲಿ ಮೂಡಿ
ಸಂಚರಿಸಿ ವಿಸ್ಮಯವು ಮನಸು ಮತಿಯೊಡಗೂಡಿ
ಪಂಚಾಮೃತದ ಸವಿ ರಸನೆಗಿಳಿದಿಹ ಮೋಡಿ||೫||



# ಎಷ್ಟು ಕಾಲ ಹೀಗೆ ಮೌನವಾಗಿರುವೆ?

**ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ**

ಎಷ್ಟು ಕಾಲ ಹೀಗೆ ಮೌನವಾಗಿರುವೆ ನೀನು

ಅಷ್ಟು ಮನಸಿನ ಮಾತನು ಅದುಮಿಡಿದು

ಸುಪ್ತವಾಗಿಹ ಭಾವ ಹೊರಗೆ ಸುರಿದುಬಿಡು

ಸಪ್ತಸಾಗರದಾಳದ ಕಟ್ಟೆ ಹೊಡೆದು

ಮೋಡ ಭಾರಕೆ ಜಗ್ಗಿ,ನೀರಾಗುವ ಹಾಗೆ

ಕಾಡುವ ಕವಿತೆಯು ಹಿಗ್ಗಿ ,ಹಾಡಾಗುವ ಹಾಗೆ

ತುಳಕಬಿಡಲಿ ಎಲ್ಲಾ, ತೆರೆದು ಎದೆಯಾಳ

ಉಕ್ಕಿ ಹರಿಯಲಿ ತೊರೆಯು, ಮತ್ತೆ ಕೇಳಲಿ ಕರೆಯು

ಹರಿಯಲಿ ಬಿಡು ಎದೆಯಾಳದ ಭಾವ ಹೊನಲು

ಸುರಿಯಲಿ ಕಣ್ಣೀರು ಎದೆ ಬಿರಿದು

ಇರುವುದಿಷ್ಟೇ ಕಾಲ, ಅಪ್ಪಿಕೊಳ್ಳುವತನಕ ಸೋಲ

ಮುಷ್ಠಿಯನು ತೆರೆದುಬಿಡು, ಜಾರಿ ಹೋಗಲಿ ಎಲ್ಲ

ಸೃಷ್ಟಿಯೊಳಿಂತು ದಿಟವು, ಸಾಗುವುದಿಲ್ಲ ಹಠವು

ಕೊಂಡೊಯ್ದು ಕಡೆ ಹೊರಟು, ಸಹಿಸುವುದು ಘಾಟು

ಸಾಗಲಿ ತೊರೆಯಾಗಿ, ನುಸುಳಿ ಹರಿದು ಹಿರಿದಾಗಿ

ಕಾಲಸಾಗರನ ಸೇರುವುದು ಹೀಗೆ ಬಂದು

ಮೌನ ಬಲು ಅಸಹನೀಯ, ಕೆಲಕಾಲ ಕಮನೀಯ

ತೊರೆದುಬಿಡು ಮುಜುಗರ, ಭಾವ ಆಗಲಿ ಜಾಹಿರ

ಅರಹುಬಿಡು ಅನಿಸಿಕೆ, ಸರಿದುಬಿಡು ಸನಿಹಕೆ

ಕಾಲ ವ್ಯರ್ಥವು ಬೇಡ, ಸರಿದುಹೋಗಲಿ ಮೋಡ

ತಿಳಿನೀಲ ಆಗಸದಂತೆ, ತಿಳಿನೀರ ತೊರೆಯಂತೆ

ದುಗುಡಗಳಲೆಲ್ಲವೂ ತೊರೆಯಲಿ, ಮನಸು ಮೆರೆಯಲಿ

# ಅತೃಪ್ತಿಯ ಹಿಂದೆ

ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ

ಆಕಾಶದೆತ್ತರದ/

ಸೂರ್ಯಕಾಂತಿಗೂ ಬಾಡದ/

ಪಾತಾಳದ

ನೀರಿಗೂ ನೆನೆಯದ/

ಬಿಕ್ಕಿ ಬಿಕ್ಕಿ ಅತ್ತ ಸುಖವೂ ಕೊಡದ

ಒಂದು ನೆನಪು/

ರುಚಿ ನೋಡುತ್ತಾ ಸಾಗಿದಾಗ/

ಒಂದೊಂದೇ ಹೂವನ್ನು/

ಜೇನಾಗುವುದಿಲ್ಲ ಮನಸು/

ಸಿಹಿ ಸಲಿಲದ/

ಬೊಗಸೆಯಲ್ಲೇ ಇರುವುದು

ದಾಹ ತೀರಿದ ಸೊಗಸು/

ಮನಸು ಮನಸು ತಾಕಿದಾಗ

ಆಗದ ಕಂಪನ/

ಬೆರಳು ತಾಕಿದಾಗ

ಮೊನೆಯುವುದೇಕೆ/

ಬೆರಳು ಒಂದೇ ಆದರೆ

ದಾರಿ ದೂರ ಸಾಗುವುದು/

ಕಂಪನವೋ/

ಅನುಕಂಪವೋ/

ದಾಕ್ಷಣ್ಯವೋ /

ನಿರ್ದಾಕ್ಷಣ್ಯವೋ/

ಅತೃಪ್ತಿಯ ಹಿಂದೆ/

ಹಲವು ಕನಸುಗಳು/

# ಕನವರಿಸಲು ಹೊಸ ಕನಸಿಗೆ

**ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ**

ಪಕ್ಕನೆ ತೆರೆದುಕೊಳ್ಳುವ ಹೊಸ ಜಗಕೆ, ಹೊಸ ಮನಕೆ

ಏರುಮುಖದ ಹಾದಿಗೆ, ನವ ಬೀದಿಗೆ

ಕನಸುಗಳು ಕರಗಿದರೂ, ನಿದಿರೆಯಿದೆ ಮನಸಿಗೆ

ಕನವರಿಸಲು ಹೊಸ ಕನಸಿಗೆ

ಹಲವಾರು ಆಗು ಹೋಗುಗಳು ಜಗದಲಿ, ಅನಿಯಂತ್ರಿತ, ಅನಿಶ್ಚತೆ

ಸಲಹುವುದಿಲ್ಲ ಯಾರೂ ಯಾರ ಕನಸನು, ನೀರೆರೆಯುವುದಿಲ್ಲ ಬೇರಿಗೆ

ಭೂವಿಯಿಂದಲೋ, ಗಗನದಿಂದಲೋ ಆಪೋಶಸಿ ಅರಳಬೇಕು

ಸುತ್ತಲಿನ ಜಗ ಹೂವಲಿ ಕಲ್ಲನಿಟ್ಟು ಎಸೆಯುವುದು ವಾಡಿಕೆ

ಕತ್ತಲಲಿ ಮರವ ಕಂಡರೂ ಹೆದರಿಕೆ

ದೂರ ದಾರಿ ಸಾಗುವುದು, ಓಡಿಯೋ, ತೆವಳಿಯೋ, ಹಿಂತಿರುಗದೆ

ಹೊತ್ತಭಾರವ ಕಳಚಿ ಹಗುರಾಗಿ ಹಾರುವುದು

ಮತ್ತೆ ಮತ್ತೆ ಮಣಭಾರ ಹಾರ ಹಾಕುವ ಕೈಗೆ ಕತ್ತರಿ ಹಾಕುವುದು

ಕಾಲನಿಡಿದು ಜಗ್ಗುವುದೇ ಜಗದ ನಿಯಮ

ಜಗ್ಗುವ ಜಗ ಹಿಡಿದು ಮೇಲಕೇರುವುದು, ಜಗದ ತಲೆತಿರುಗಿ

ದೊಪ್ಪನೆ ಬೀಳುವವರೆಗೆ

ಯುದ್ಧ ಸೃಷ್ಟಿಯೊಂದು ನೆವ, ಸ್ವಂತ ತೆವಲಿಗೆ, ಆರಿಹೋಗುವ ದೀಪಗಳ,

ಆರಿಹೋಗುವ ಪ್ರಾಣಗಳ ಎಣಿಸಿಕೊಂಡು, ಗಹಗಹಿಸುವುದು

ಆತ್ಮಗಳ ತಾಕಲಾಟ, ದೇವರ ಪೀಕಲಾಟ ಅಸಡ್ಡೆಗೇ ಮಿಗಿಲು

ಭಯ, ಅನುಕಂಪಗಳೆಲ್ಲವೂ ಕಥೆಗಳಿಗೇ ಮೀಸಲು

ಕೂರಲೂ ಜಾಗವಿಲ್ಲದೆಡೆ ಮಲಗಲು ಆಹ್ವಾನ

ಕಣ್ಣಪಾಪೆ ತೇಲಿಸಿ ಹುಚ್ಚನಾಗುವುದು

ಏನಾದರೂ ಆಗಲಿ, ಕನಸು ಚಿಗುರೇ ಚಿಗುರುವುದು

ಸತ್ತಮನಗಳ ತಪ್ತಭಾವ, ಸಪ್ತಸಾಗರದಲಿ ಜಳಕವಾಡುವುದು

ಸುಟ್ಟಭೂದಿಯ ಮೈಗೆ ಬಳಿದು ನಡುಗಿ ಕಿರುಚುವುದು

ಅಳಿದುಳಿದ ದೇಹವ ಸಿಂಗರಿಸಿಕೊಳ್ಳುವದು

ಹೊಸರೂಪವ ಮೈದಾಳಿ, ಹೊಸಲೋಕವ ಸೃಜಿಸುವುದು

ಇಷ್ಟಿಸ್ಟೇ ಚಿಗುರಿ ಮತ್ತೆ ಲೋಕವನ್ನೆಲ್ಲಾ ಆವರಿಸಿಕೊಳ್ಳುವುದು

# ಎಷ್ಟು ಕಾಲ ಹೀಗೆ ಮೌನವಾಗಿರುವೆ?

**ಎಂ.ವಿ. ಶಶಿಭೂಷಣ ರಾಜು , ಪೆನ್ಸಿಲ್ವೇನಿಯ**

ಎಷ್ಟು ಕಾಲ ಹೀಗೆ ಮೌನವಾಗಿರುವೆ ನೀನು

ಅಷ್ಟು ಮನಸಿನ ಮಾತನು ಅದುಮಿಡಿದು

ಸುಪ್ತವಾಗಿಹ ಭಾವ ಹೊರಗೆ ಸುರಿದುಬಿಡು

ಸಪ್ತಸಾಗರದಾಳದ ಕಟ್ಟೆ ಹೊಡೆದು

ಮೋಡ ಭಾರಕೆ ಜಗ್ಗಿ,ನೀರಾಗುವ ಹಾಗೆ

ಕಾಡುವ ಕವಿತೆಯು ಹಿಗ್ಗಿ ,ಹಾಡಾಗುವ ಹಾಗೆ

ತುಳುಕಬಿಡಲಿ ಎಲ್ಲಾ, ತೆರೆದು ಎದೆಯಾಳ

ಉಕ್ಕಿ ಹರಿಯಲಿ ತೊರೆಯು, ಮತ್ತೆ ಕೇಳಲಿ ಕರೆಯು

ಹರಿಯಲಿ ಬಿಡು ಎದೆಯಾಳದ ಭಾವ ಹೊನಲು

ಸುರಿಯಲಿ ಕಣ್ಣೀರು ಎದೆ ಬಿರಿದು

ಇರುವುದಿಷ್ಟೇ ಕಾಲ, ಅಪ್ಪಿಕೊಳ್ಳುವತನಕ ಸೋಲ

ಮುಷ್ಟಿಯನು ತೆರೆದುಬಿಡು, ಜಾರಿ ಹೋಗಲಿ ಎಲ್ಲ

ಸೃಷ್ಟಿಯೊಳಿಂತು ದಿಟವು, ಸಾಗುವುದಿಲ್ಲ ಹಠವು

ಕೊಂಡೊಯ್ದ ಕಡೆ ಹೊರಟು, ಸಹಿಸುವುದು ಘಾಟು

ಸಾಗಲಿ ತೊರೆಯಾಗಿ, ನುಸುಳಿ ಹರಿದು ಹಿರಿದಾಗಿ

ಕಾಲಸಾಗರನ ಸೇರುವುದು ಹೀಗೆ ಬಂದು

ಮೌನ ಬಲು ಅಸಹನೀಯ, ಕೆಲಕಾಲ ಕಮನೀಯ

ತೊರೆದುಬಿಡು ಮುಜುಗರ, ಭಾವ ಆಗಲಿ ಜಾಹಿರ

ಅರಹುಬಿಡು ಅನಿಸಿಕೆ, ಸರಿದುಬಿಡು ಸನಿಹಕೆ

ಕಾಲ ವ್ಯರ್ಥವು ಬೇಡ, ಸರಿದುಹೋಗಲಿ ಮೋಡ

ತಿಳಿನೀಲ ಆಗಸದಂತೆ, ತಿಳಿನೀರ ತೊರೆಯಂತೆ

ದುಗುಡಗಳಲೆಲ್ಲವೂ ತೊರೆಯಲಿ, ಮನಸು ಮರೆಯಲಿ

# ಚಿಣ್ಣರ ಮುತ್ತುಗಳು



KARNATAKA CULTURAL ORGANIZATION BRINDAVANA (KCOB) NJ, USA

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ**

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



# ಟೈಮ್ಸ್ ವರ್ಲ್ಡ್ ಚಾಂಪಿಯನ್ಸ್

**ಕೌಸ್ತುಭ್ ಸತ್ಯನಾರಾಯಣ್** , *ನ್ಯೂಜೆರ್ಸಿ*

## 5 Times World Champions

( - ಕೌಸ್ತುಭ್ ಸತ್ಯನಾರಾಯಣ್ )

2-3 ವಾರದ ಹಿಂದೆ ನನ್ನ ಅಪ್ಪ ನನಗೆ ರಜೆ ಆಗು, Indian Men's cricket for blind ನ meet ಮಾಡಿ ಬರೋಣ ಅಂದಾಗ ನಾನ್ಯಾಕೆ blind cricket team ನ meet ಮಾಡೋಕ್ಕೆ ಹೋಗ ನನ್ನ ಒಕ್ಕೆ ವಾರದ ರಜೆ time waste ಮಾಡ್ಕೋಬೇಕು ಅಂತ, ಬರಲ್ಲ ಅಂದೆ. ಆದ್ರೆ ನನ್ನ ಅಪ್ಪ force ಮಾಡಿ ನನ್ನನ್ನ Piscataway Stelton Sports club ಗೆ ಕರಕೊಂಡು ಹೋದರು.

ನಾನು ನನ್ನ ಅಪ್ಪ ಅಲ್ಲಿ ಹೋದಾಗ, crickaters ಎಲ್ಲ Indian T-20 Jersey ಹಾಕಿ ನೆಟ್‌ನಲ್ಲಿ Practice ಮಾಡ್ತಾ ಇದ್ರು. ನನಗೆ ಒಂದು ಪ್ರಶ್ನೆ ಬಂತು. ಯಾಕೆ ಎಲ್ಲರು ball ನ Pitch ಮಾಡದೆ roll ಮಾಡಿ ಆಟ ಆಡ್ತಾ ಇದ್ದಾರೆ ಅಂತ?


SUKH SAGAR
FINE DINING
INDIAN VEGETARIAN CUISINE
OPEN



ಹತ್ರ ಹೋಗಿದಾಗ ಅಲ್ಲಿ Players ಜೊತೆ, ನನ್ನ ತರ ಬೇರೆ ಜನ ನೋಡೋಕೆ ಅಂತ ಬಂದಿದ್ರು. ಒಬ್ರು Player ನನ್ನ ಹತ್ತಿರ ಬಂದು, bowl ಮಾಡ್ತೀಯಾ ಅಂತ ಕೇಳಿದ್ರು? ನಂಗೆ ಖುಶಿ ಆಯ್ತು. Bowl ಮಾಡೋಕೆ ಮುಂಚೆ, ಜೋರಾಗಿ Ready ಅಂತ ಕೇಳ್ಬೇಕು ಅಂತ Instruct ಮಾಡಿದ್ರು. ನಾನು OK ಅಂತ Are You Ready? ಅಂತ ಕೇಳಿ ball ನ Roll ಮಾಡೋಕ್ಕೆ start ಮಾಡಿದೆ. Batsman Blind ಆಗಿದ್ರು Precise ಆಗಿ shots ಹೊಡಿತಾ ಇದ್ರು. ಒಂದು ವಿಶೇಷ ಅಂದ್ರೆ, ಆ ball Plastic ಇಂದ ಮಾಡಿದ್ದು, ಮತ್ತೆ ಅದ್ರಲ್ಲಿ metal pieces ಇರೋ ತರ sound ಮಾಡ್ತಾ ಇತ್ತು. ಆಗ ಗೊತ್ತಾಯ್ತು, blind players ಗೆ ball ಬರೋದು ಗೊತ್ತಾಗುತ್ತೆ, ಮತ್ತೆ ಅದು ಎಲ್ಲಿದೆ ಅಂತ ಗೊತ್ತಾಗುತ್ತೆ ಅಂತ Plastic Ball ನಲ್ಲಿ Metal pieces ಹಾಕಿದ್ದಾರೆ ಅಂತ.



ಆಮೇಲೆ ನನಗೆ batting Opportunity ಕೂಡ ಸಿಕ್ಕಿತು. ಅವರ Bowling ನಲ್ಲಿ ನನಗೆ Bat ಮಾಡೋಕೆ few times ಕಷ್ಟ ಆಯಿತು. ಕಣ್ಣು ಇಲ್ಲದೆ, ಅವರು ಎಷ್ಟು Precise ಆಗಿ Perfect ಆಗಿ Bowling, Batting ಮತ್ತೆ Feilding ಮಾಡೋದು ನೋಡಿ ತುಂಬಾ ಆಶ್ಚರ್ಯ ಆಯಿತು. ನನಗೆ ಕಣ್ಣಿದ್ದೂ ಕಷ್ಟ ಆಯಿತು ಮತ್ತೆ ಅವರಿಗೆ ಎಷ್ಟು ಕಷ್ಟ ಆಗಿರಬೇಕು. ಮತ್ತೆ ಎಷ್ಟು hardworking and determined Players ಅಂತ think ಮಾಡಿ goosebumps ಬಂತು.

ಆಮೇಲೆ ಒಬ್ರು ಮಹಾಂತೇಶ್ ಅನ್ನೋ Uncle ನಮ್ಮನ್ನ ಕೂರಿಸಿ, Blind Cricket Rules ಎಲ್ಲನ್ನು, ಯಾವ ತರ ಆಡ್ತಾರೆ ಅಂತ ಹೇಳಿ, team ಬಗ್ಗೆ ಮತ್ತೆ ಅವರ acheivments ಬಗ್ಗೆ ಒಂದು video ತೋರಿಸಿದ್ರು. ನನಗೆ shock and surprise ಆಯಿತು, suddenly ನನ್ನ ಮೈಂಡ್ ಗೆ ಬಂದಿದ್ದು, ನಾನು ಇಷ್ಟು ಹೊತ್ತು 5 times world champions ಆದ India ದ International cricket team ಅಂದ್ರೆ actual celebrities ಜೊತೆ ಆಡಿದ್ದು ಅಂತ Proud ಮತ್ತೆ happy feeling ಬಂತು.

ಆಮೇಲೆ ಅವರ ಜೊತೆ, ಸುಖ್ ಸಾಗರ್ restaurant ನಲ್ಲಿ dinner ಮಾಡೋ chance ಸಿಗ್ತು. ಅವತ್ತು ನಾನು ನನ್ನ ಅಪ್ಪನ ಜೊತೆ ಹೋಗಿದ್ದೇ ಇದ್ದದ್ರೆ ಒಂದು golden opportunity ನ ನನ್ನ life ನಲ್ಲಿ ಖಂಡಿತ ಮಿಸ್ ಮಾಡ್ಕೋತಾ ಇದ್ದೆ. Thank you Indian Men's cricket Team for Blind ಮತ್ತೆ Thank you ಅಪ್ಪ!

# ಕ್ಯಾಮೆರಾ ಕಣ್ಣು





ಪವಿತ್ರ ರಾಜೀವ್, ನ್ಯೂಜೆರ್ಸಿ







ಪವಿತ್ರ ರಾಜೀವ್, ನ್ಯೂಜೆರ್ಸಿ






ಧನ್ಯವಾದಗಳು